ಪ್ರಚೋದನೆ


ಲಂಕೇಶ್

ಜನವರಿ 29, 2014 ಪುಟ 20 ರೂ. 15/-

ದಲಿತ ಕವಿ




ನಾಮದೇವ್ ಢಸಾಲ್



ಂಡೆ ಸಾವು
ಭುಗಿಲೆದ್ದ ಜನ

ಒಕ್ಕಲಿಗರ ಸಂಘ



ಕೆಂಚಪ್ಪ ಕೂಟಕ್ಕೆ
ಜೈಲು ಭೀತಿ

ಡಬ್ಬಿಂಗ್ ವಿವಾದ

ಜಕಣಾಚಾರಿಯ ಶಿಲ್ಪಕ್ಕೆ
ಏಷಿಯನ್ ಪೇಂಟ್ ಬೇಕಾ?

ಕರಾವಳಿ
ಕ್ ಕೇಸಿನಲ್ಲೂ
ರೆಸ್ಸಿಸ್ ಕೋಮು
ಸ್ವಿಚ್

ಮಂಡ್ಯ
PSSK
ಮುಗಿಸಲು
ಎಲ್ಲರೂ
ರೆಡಿ

ರಾಯಚೂರು
ಆರ್‌ಟಿಪಿಎಸ್
ನುಂಗುತ್ತಿರುವ
ಕಳ್ಳರು

ಚಾನೆಲ್ ಚೇಂಜ್ ಮಾಡದೇ ನೋಡ್ತಾ ಇರಿ

ಅಂಚಿನಿಂದ....



ಡಾ.ವಾಸು ಎಚ್.ವಿ.

ಈ ವಾಕ್ಯವನ್ನು ಒಂದು ಕನ್ನಡ ಚಾನೆಲ್ ತನ್ನ ಘೋಷ ವಾಕ್ಯ ಮಾಡಿಕೊಂಡಿದೆ. ಅವರಿಗೂ ಗೊತ್ತು ವೀಕ್ಷಕರು ಚಾನೆಲ್ ಬದಲಾಯಿಸುತ್ತಿರುತ್ತಾರೆ ಅಂತ. ಹಾಗಾಗಿ ಪ್ರತೀ ಕ್ಷಣ ಅವರ ಚಾನೆಲ್ಲನ್ನೇ ನೋಡ್ತಾ ಇರಬೇಕೆಂದು, ಒಂದೇ ಬಾರಿ ಮೂರ್‍ನಾಲ್ಕು 'ಐಟಂ'ಗಳನ್ನು ಪ್ರತಿಯೊಂದು ಚಾನೆಲ್ ಕೊಡುತ್ತಲೇ ಇರುತ್ತದೆ. ನ್ಯೂಸ್ ಓದ್ತಾ ಕೂತಿರೋರ ಮಧ್ಯೆ ಒಂದು ವಿಶ್ಯುಯಲ್, ಕೆಳಗೆ ಒಂದಲ್ಲಾ ಎರಡು ಸಾಲಿನಲ್ಲಿ ಹರಿಯುತ್ತಿರುವ ಸುದ್ದಿಗಳು. ಆಗಾಗ್ಗೆ 'ಬ್ರೇಕಿಂಗ್ ನ್ಯೂಸ್' ಎಂದು ಮಿಣುಕುವ ಸಾಲುಗಳು. ಕೇವಲ ಇಷ್ಟೇ ಆಗಿದ್ದರೆ ತೊಂದರೆಯಿರಲಿಲ್ಲ. ಕನ್ನಡದ ದೊಡ್ಡ ಪತ್ರಿಕೆಯೊಂದು ಕನಿಷ್ಠ 50 ಸಣ್ಣ ಐಟಂಗಳನ್ನು ಸ್ಥಿರ ಶೀರ್ಷಿಕೆಗಳಾಗಿ ಒದಗಿಸುತ್ತಿದೆ. ಹೆಚ್ಚಿನವು ಮಾಹಿತಿಯನ್ನೋ, ರಂಜನೆಯನ್ನೋ ನೀಡುವ ತುಣುಕುಗಳು.

ದಿಕ್ಕು - ದಿಸೆಯಿಲ್ಲದೇ ರಾಶಿಗಟ್ಟಲೆ ಸುರಿಯುವ ಮಾಹಿತಿಯ ಮಹಾಪೂರವೂ ಸಮಸ್ಯೆಯೇ. ಟಿವಿ ಚಾನೆಲ್‌ಗಳಿಗಿಂತ ಇಂಟರ್ನೆಟ್ ಲೋಕ ಅಂತಹ ಮಾಹಿತಿ ಕಣಜವನ್ನು ಕಣಜಗಟ್ಟಲೇ ಹೊಂದಿದೆ. ಆದರೆ ಟಿವಿಯದ್ದು ಅದಕ್ಕಿಂತ ಹಲವು ರೀತಿಯಲ್ಲಿ ಭಿನ್ನ. ಟಿವಿಯು ಅಸಂಖ್ಯಾತ ಜನರ ಬದುಕಿನ ಭಾಗವಾಗಿ ಹೋಗಿದೆ. ಆಗಿಂದಾಗ್ಗೆ ನಡೆವ ಸುದ್ದಿಯನ್ನು ಸುದ್ದಿಯಾಗಿ ಅಥವಾ ಮಾಹಿತಿಯಾಗಿ ನೀಡಿದರೆ ಅದರಲ್ಲೇನೂ ವಿಶೇಷವಿಲ್ಲ ಎಂದು ಅವು ಭಾವಿಸಿವೆ. ಹಾಗಾಗಿ ಸುದ್ದಿಯನ್ನು ರೂಪಿಸುವ ಇಲ್ಲದಿದ್ದರೆ ಸುದ್ದಿಯನ್ನು ಸೃಷ್ಟಿಸುವ ಕೆಲಸವನ್ನು ಯಶಸ್ವಿಯಾಗಿ ಮಾಡುತ್ತಿವೆ.

ಇರಾಕ್ ಯುದ್ಧಕ್ಕೆ ಮುಂಚೆ, ಇರಾಕ್ ಯುದ್ಧದ ಸಂದರ್ಭದಲ್ಲಿ ಮತ್ತು ನಂತರ ಅಮೆರಿಕ ಬಾಂಬ್‌ಗಳ ಜೊತೆಯಲ್ಲಿ ಮಾಧ್ಯಮ ದಾಳಿಯನ್ನೂ ಯಶಸ್ವಿಯಾಗಿ ನಡೆಸಿದ್ದರ ಕುರಿತು ಆನಂತರ ಸಾಕಷ್ಟು ಮಾಹಿತಿ ಲಭ್ಯವಾಯಿತು. ಕೇವಲ 30-40 ಜನರು ಸೇರಿ ಸದ್ದಾಂ ಹುಸೇನ್‌ನ ಪ್ರತಿಮೆಯನ್ನು ಇಳಿಸುತ್ತಿದ್ದುದನ್ನು, ಸಹಸ್ರಾರು ಜನರು ಸೇರಿ ಪ್ರತಿಮೆಯ ಮೇಲೆ ದಾಳಿ ನಡೆಸುತ್ತಿದ್ದಂತೆ ತೋರಿಸುವಲ್ಲಿ ಅದು ಯಶಸ್ವಿಯಾಗಿತ್ತು, ಆ ರೀತಿಯ ಒಂದು 'ದಾಳಿ'ಯ ಇಮೇಜ್ ಟಿವಿ ನೋಡುಗರ ಮೇಲೆ ಯಾವ ಪರಿಣಾಮ ಬೀರುತ್ತದೆಂಬುದರ ಅರಿವು ಅಮೆರಿಕಾದ ಆಳುವವರಿಗೆ ಚೆನ್ನಾಗಿಯೇ ಇತ್ತು.

ಒಂದು ನಿರ್ದಿಷ್ಟ ವರ್ಗದ ಪರವಾಗಿ ಅಥವಾ ವಿರುದ್ಧವಾಗಿ ಮಾಧ್ಯಮಗಳ ಹಿತಾಸಕ್ತಿಗಳು ಕೆಲಸ ಮಾಡುವ ವಿಚಾರ ಪಕ್ಕಕ್ಕಿರಲಿ; ಆದರೆ ನಿರಂತರವಾಗಿ 'ಜನ ನೋಡುವ' ಸುದ್ದಿಯನ್ನು ನೀಡುತ್ತಲೇ ಇರಬೇಕಾದ ಪರಿಸ್ಥಿತಿಗೆ ಈ ಚಾನೆಲ್‌ಗಳು ಬದ್ಧವಾಗಿರುವ ಪರಿ ಸಾಮಾಜಿಕ ಸ್ವಾಸ್ಥ್ಯಕ್ಕೆ ಅಪಾಯಕಾರಿಯಾಗಿದೆ. ಬೆಳಗ್ಗೆ ಮನೆಯಿಂದ ನಿಮ್ಮ ನಿಮ್ಮ ಕೆಲಸಗಳಿಗೆ ಹೋಗಿರುತ್ತೀರಿ. ಸಂಜೆಯ ಒಳಗೆ ಇದ್ದಕ್ಕಿದ್ದಂತೆ 'ಜಗತ್ತೇ ಗಾಬರಿ ಬೀಳಬೇಕಾದ' ಸುದ್ದಿಯೊಂದನ್ನು ಎಲ್ಲಾ ಚಾನೆಲ್‌ಗಳು ಸೇರಿಕೊಂಡು ಪೈಪೋಟಿಯ ಮೇಲೆ ಸೃಷ್ಟಿಸಿರುತ್ತಾರೆ. ಸಹಜವಾಗಿ ನೀವೂ ಗಾಬರಿ ಬೀಳುತ್ತೀರಿ. ಮುಂದಿನ ಮೂರ್‍ನಾಲ್ಕು ದಿನಗಳಲ್ಲಿ ಆ ಗಾಬರಿಯು ನಿಮ್ಮ ದಿನನಿತ್ಯದ ನಡವಳಿಕೆಗಳ ಮೇಲೇ ಪರಿಣಾಮ ಬೀರಿರುತ್ತದೆ. ನೀವು ಯೋಚಿಸುತ್ತಿರುವ ರೀತಿ ಸರಿಯೋ ತಪ್ಪೋ ಗೊತ್ತಾಗದ ಗೊಂದಲವೂ ನಿಮ್ಮನ್ನು ಆವರಿಸುತ್ತಿರುತ್ತದೆ. ಈ ಗೊಂದಲದಲ್ಲಿ ನೀವು ಇನ್ನೊಂದು ದಿನ ಮನೆ ಬಿಟ್ಟು, ಕೆಲಸ ಮುಗಿಸಿ ಸಂಜೆ ವಾಪಸ್ ಬಂದು ಟಿವಿ ನೋಡುತ್ತಿರುವ ಹೊತ್ತಿಗೆ, ಬೇರೆ ಒಂದು ಸುದ್ದಿಯ ಕುರಿತು ಟಿವಿಯ ನಿರೂಪಕ/ಕಿ ಕೂಗುತ್ತಿರುತ್ತಾರೆ. ಈ ಚಾನೆಲ್‌ನವರದ್ದೇನೋ ಸಮಸ್ಯೆ ಇರಬೇಕೆಂದು ತಿಳಿದು, ರಿಮೋಟ್ ಮೂಲಕ ಅದನ್ನು ಬದಲಿಸುತ್ತೀರಿ. ಇನ್ನೊಂದರಲ್ಲೂ ಅದೇ, ಮತ್ತೊಂದರಲ್ಲೂ ಅದೇ. ನಿನ್ನೆಯ ತನಕ ನಿಮ್ಮನ್ನು ಕಾಡಿಸಿದ ಬೇರೊಂದು ಸುದ್ದಿಗೆ ಅಲ್ಲೆಲ್ಲೂ ಜಾಗವಿದ್ದಂತೆ ಇಲ್ಲ. ಹಳೆಯ ಗೊಂದಲದ ಬಗ್ಗೆ ಗೊಂದಲ ಪಟ್ಟುಕೊಳ್ಳಲೇ ಆಸ್ಪದವಿಲ್ಲದಂತೆ ಎಲ್ಲಾ ಚಾನೆಲ್‌ಗಳೂ ನಿಮ್ಮಲ್ಲಿ ಮತ್ತೊಂದು ರೋಚಕತೆಯನ್ನು ಉನ್ಮಾದವಾಗಿ ಹಬ್ಬಿಸಲು ಪೈಪೋಟಿಗೆ ಬಿದ್ದಿರುತ್ತಾರೆ.

ಇನ್ನು ಈ ಲೋಕ ಮುಳುಗಿಹೋಗಿ ಬಿಡುತ್ತದೇನೋ ಎಂಬ ರೀತಿಯಲ್ಲಿ ಪ್ರಳಯೋನ್ಮಾದ ಮೂಡಿಸಿದ ಕಥೆಯನ್ನು ಬಿಟ್ಟೇ ಬಿಡಿ. ಅದು ಎಲ್ಲರಿಗೂ ಗೊತ್ತಿದೆ. ಆದರೆ ಎಚ್ 1 ಎನ್ 1 ಎಂಬ ವೈರಸ್ಸನ್ನು ಎಲ್ಲಾ ಮಾಧ್ಯಮಗಳೂ ಸೇರಿ ಹಬ್ಬಿಸಿದ್ದನ್ನು ನೆನೆಸಿಕೊಳ್ಳಿ. ಆ ವೈರಸ್ಸು ತನ್ನ ರೋಗಕಾರಕ ಸಾಮರ್ಥ್ಯದಿಂದ ಹಬ್ಬಿದ್ದಲ್ಲ; ಟಿವಿ ಚಾನೆಲ್‌ಗಳಿಗೆ ಬಡಿದಿರುವ ರೋಗದ ಕಾರಣಕ್ಕೆ ಹಬ್ಬಿತು. ಜನರು ಬೀದಿಗಳಲ್ಲಿ ಮಾಸ್ಕ್ ಹಾಕಿಕೊಳ್ಳಲು ಶುರು ಮಾಡಿದರು. ಎದುರಿಗೆ ಸಿಕ್ಕ ಸ್ನೇಹಿತರ ಕೈ ಕುಲುಕುವುದನ್ನು ನಿಲ್ಲಿಸಿದವರೂ ಇದ್ದರು. ಕೆಲವು ಸಾಮೂಹಿಕ ಕಾರ್ಯಕ್ರಮಗಳಿಗೆ ಜನರು ಹೋಗಲು ಗಾಬರಿ ಪಡುತ್ತಿದ್ದರು. ಇದ್ದಕ್ಕಿದ್ದಂತೆ ವೈರಸ್ಸು ನಿಂತಿತು. ಅದರ ರೋಗಕಾರಕ ಸಾಮರ್ಥ್ಯ ಕುಸಿದಿದ್ದರಿಂದಲ್ಲ, ಆಂಧ್ರದ ಮುಖ್ಯಮಂತ್ರಿ ವೈ.ಎಸ್.ರಾಜಶೇಖರರೆಡ್ಡಿ ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್ ನಾಪತ್ತೆಯಾಗಿಬಿಟ್ಟಿತ್ತು. ಅದು ಮತ್ತೆ ಪತ್ತೆಯಾಗಲು 3 ದಿನ ತೆಗೆದುಕೊಂಡಿತು ಮತ್ತು ಆನಂತರ ಅಂತ್ಯಕ್ರಿಯೆ ಮುಗಿದು ಪರಿಸ್ಥಿತಿ ಶಾಂತವಾಗಲು ಒಟ್ಟು 7-8 ದಿನ ಬೇಕಾಯಿತು. ಅಷ್ಟರಲ್ಲಿ ಎಚ್ ಒನ್ನೂ ಇಲ್ಲ, ಎನ್ ಒನ್ನೂ ಇಲ್ಲ.

ತೀರಾ ಇತ್ತೀಚಿನ ಉದಾಹರಣೆಯನ್ನು ನೋಡೋಣ. ದಿನನಿತ್ಯ ಮೋದಿ ಎಲ್ಲಾ ಚಾನೆಲ್‌ಗಳಲ್ಲೂ ರಾರಾಜಿಸುತ್ತಿದ್ದ. ಈ ಚಾಟಿ ಪ್ರಚಾರವು ಆತನಿಗೇ ಮುಳುವಾಗಿಬಿಡಬಹುದೆನ್ನುವ ಮಟ್ಟಿಗೆ ಇದು ಹಿಗ್ಗುತ್ತಿತ್ತು, ಯಾವಾಗ ದೆಹಲಿ ಚುನಾವಣಾ ಫಲಿತಾಂಶ ಬಂದು, ಆಮ್ ಆದ್ಮಿ ಪಕ್ಷವು ಸರ್ಕಾರ ರಚಿಸುವ ಸನಿಹಕ್ಕೆ ಬಂದಿತೋ, ಅಲ್ಲಿಂದ ಮೋದಿ ಕಣ್ಮರೆ. ಎಲ್ಲಿ ನೋಡಿದರೂ ಅರವಿಂದ್ ಕೇಜ್ರಿವಾಲ್‌ರ ಕುರಿತು ಕಾರ್ಯಕ್ರಮಗಳು. ಅದಕ್ಕೆ ತಕ್ಕಂತೆ ಆಮ್ ಆದ್ಮಿ ಪಕ್ಷದ 'ಸಾಂಕೇತಿಕ ರಾಜಕಾರಣ'ದ ನಡೆಗಳು ಟಿವಿ ಚಾನೆಲ್‌ಗಳಿಗೆ ಮೃಷ್ಟಾನ್ನ ಭೋಜನವಾಗಿ ಬಿಟ್ಟವು. ದೆಹಲಿಯಲ್ಲಿ ಕ್ರಾಂತಿ ಸಂಭವಿಸಿ ಬಿಟ್ಟಿದೆ ಎಂದು ಬಹುತೇಕ ಚಾನೆಲ್‌ಗಳು ಏಕಕಂಠದಲ್ಲಿ ಘೋಷಿಸಿಬಿಟ್ಟವು.

ಈ ಲೇಖನ ಬರೆಯುವ ಹೊತ್ತಿಗೆ ಮತ್ತೆ ಚಕ್ರ ತಿರುಗಿದೆ. ಇನ್ನೂ ಒಂದು ತಿಂಗಳೂ ಆಗಿಲ್ಲ, ಆಗಲೇ ಎಲ್ಲರೂ ಕೇಜ್ರಿವಾಲ್ ಮೇಲೆ ಮುರಿದುಕೊಂಡು ಬಿದ್ದಿದ್ದಾರೆ. ಕಾಶ್ಮೀರದ ಕುರಿತು ಪ್ರಶಾಂತ್ ಭೂಷಣ್ ಹೇಳಿಕೆ, ದೆಹಲಿಯ ಕಾನೂನು ಮಂತ್ರಿ ಭಾರ್ತಿಯ ಒಂದು 'ಹಗರಣ', ಇನ್ನೂ ಎಲ್ಲರಿಗೂ ನೀರು ಮತ್ತು ಕರೆಂಟು ಕೊಡಲಾಗದಿರುವುದು, ಆಮ್ ಆದ್ಮಿ ಪಕ್ಷದ ಶಾಸಕ ಬಿನ್ನಿ ಭಿನ್ನಮತ ಸೂಚಿಸಿರುವುದು, ಮಲ್ಲಿಕಾ ಸಾರಾಭಾಯಿ-ಕುಮಾರ್ ವಿಶ್ವಾಸ್ ನಡುವಿನ ನಾಲ್ಕಾರು ವಾಕ್ಯಗಳ ಮಾತಿನ ಜಟಾಪಟಿ ಎಲ್ಲವೂ ಆಪ್‌ನ ವೈಫಲ್ಯದ ಸಂಕೇತಗಳಾಗಿ ಬಿಂಬಿತವಾಗುತ್ತಿವೆ. ಇಂದು ಎಲ್ಲಾ ಹಿಂದಿ ಮತ್ತು ಇಂಗ್ಲಿಷ್ ಚಾನೆಲ್‌ಗಳಲ್ಲಿ ಅದರದ್ದೇ ಕೂಗಾಟ, ಮತ್ತು ವಾಗ್ವಾದವಾಗಿದ್ದರೆ, ಎಲ್ಲಾ ಕನ್ನಡ ಚಾನೆಲ್‌ಗಳಲ್ಲಿ ಗುಲ್ಬರ್ಗಾದ ಮೃತ ಎಸ್‌ಐ ಮಲ್ಲಿಕಾರ್ಜುನ ಬಂಡೆಯ ಕುರಿತು ಕಾರ್ಯಕ್ರಮಗಳು.

ಮಲ್ಲಿಕಾರ್ಜುನ ಬಂಡೆ ಒಬ್ಬ ಪ್ರಾಮಾಣಿಕ ಮತ್ತು ದಕ್ಷ ಸಬ್ ಇನ್ಸ್‌ಪೆಕ್ಟರ್ ಆಗಿದ್ದರೆಂದು ಗುಲ್ಬರ್ಗಾದ ಸ್ನೇಹಿತರು ಹೇಳುತ್ತಾರೆ. ಹೆದ್ದಾರಿಯ ದರೋಡೆಯಿಂದ ಹಿಡಿದು, ಲೈಂಗಿಕ ಕಿರುಕುಳ ನೀಡಿದ ಪ್ರೊಫೆಸರ್ ದಶರಥನಾಯಕ್ ಬಂಧನದವರೆಗೆ ಬಂಡೆ ತಮ್ಮ ದಕ್ಷತೆ ತೋರಿದ್ದರು. ಅವರ ಸಾವಿನ ಕುರಿತು ವಿಷಾದ, ಆಕ್ರೋಶ, ನೋವು ಸಹಜ. ಈ ಎನ್‌ಕೌಂಟರ್‌ನ ಸುತ್ತಲೂ ತನಿಖೆಯಾಗಬೇಕು; ಒಂದು ವೇಳೆ ಸರ್ಕಾರ ಅವರನ್ನು ಉಳಿಸಿಕೊಳ್ಳುವಲ್ಲಿ ನಿರ್ಲಕ್ಷ್ಯ ತೋರಿದ್ದರೆ ಅದರ ಬಗ್ಗೆಯೂ ಸೂಕ್ತ ಚರ್ಚೆ, ತನಿಖೆ, ಶಿಕ್ಷೆ ಎಲ್ಲವೂ ಆಗಬೇಕು. ಆದರೆ ಇದನ್ನು ಸಮಾಧಾನದಲ್ಲಿ ಮಾತಾಡುವ ವಾತಾವರಣವಂತೂ ಇಲ್ಲ. ಬಂಡೆಯವರ ಕುಟುಂಬದ ಸುತ್ತ ಅಥವಾ ಗುಲ್ಬರ್ಗಾದ ಜನಸಾಮಾನ್ಯರ ಆಸುಪಾಸಿನಲ್ಲಿ ಅಲ್ಲ, ಬೆಂಗಳೂರಿನ ಟಿವಿ ಸ್ಟುಡಿಯೋಗಳಲ್ಲಿ! ಇದು ನಿರ್ಲಜ್ಜ ಸರ್ಕಾರ, ಇವರಿಗೆ ಮಾನ-ಮರ್ಯಾದೆ ಇಲ್ಲ, ಇವರು ಲಜ್ಜೆಗೇಡಿಗಳು ಎಂದು ಜೋರಾದ ಕಂಠದಲ್ಲಿ ಟಿವಿ ನಿರೂಪಕರು ಕೂಗುತ್ತಿದ್ದಾರೆ. ರಾತ್ರಿ 9.15ರ ಹೊತ್ತಿಗೆ ಒಬ್ಬ ಟಿವಿ ನಿರೂಪಕರು 'ಸರ್ಕಾರ ಘೋಷಿಸಿದ 15 ಲಕ್ಷ ರೂ.ಗಳನ್ನು ಅವರ ಮುಖಕ್ಕೆಸೆಯಬೇಕು, ಬೇಕಾದರೆ ಜನಸಾಮಾನ್ಯರು 15 ಲಕ್ಷ ರೂ.ಗಳನ್ನು ಸಂಗ್ರಹಿಸಿ ಕೊಡುತ್ತಾರೆ' ಎಂದು ಹೇಳುತ್ತಾರೆ. ಅದೇ ಟಿವಿಯಲ್ಲಿ ಆ ನಿರೂಪಕರಿನ್ನೂ ಎದ್ದಿರುವುದಿಲ್ಲ; ರಾತ್ರಿ 10.10ಕ್ಕೆ, ಅವರ ನೇರ ಪ್ರಸಾರದ ಸಹಕಾರದೊಂದಿಗೆ ಗುಲ್ಬರ್ಗಾದ ಬೀದಿಗಳಲ್ಲಿ ಜನರು 'ನಾವು 15 ಲಕ್ಷ ರೂ. ಸಂಗ್ರಹಿಸಿ ಕೊಡುತ್ತೇವೆ' ಎಂದು ಘೋಷಿಸುತ್ತಾರೆ!

ಮಲ್ಲಿಕಾರ್ಜುನ ಬಂಡೆಯಂತಹ ಅಥವಾ ಪ್ರಾಮಾಣಿಕವಾಗಿ ಕೆಲಸ ಮಾಡುವ ಇನ್ನಾವುದೇ ಸರ್ಕಾರೀ ನೌಕರರಿಗೆ ರಕ್ಷಣೆ ಕೊಡಬೇಕಾದರೆ, ಅದೇ ಸಂದರ್ಭದಲ್ಲಿ ಎಲ್ಲಾ ಜನಸಾಮಾನ್ಯರನ್ನೂ ಕಾಪಾಡುವ ರೀತಿಯಲ್ಲಿ ಕೆಲಸ ಮಾಡಬೇಕಾದರೆ ಸರ್ಕಾರ ಏನು ಮಾಡಬೇಕೆಂಬುದರ ಕುರಿತು ಸಾವಧಾನದ ನಾಲ್ಕು ಮಾತುಗಳೂ ಅಲ್ಲಿ ಸಾಧ್ಯವಿರಲಿಲ್ಲ, ಥರ್ಮಾಮೀಟರ್‌ಗೇ ಜ್ವರ ಬಂದು ಬಿಟ್ಟಿತ್ತು.

ಶ್ರೀಕಂಠದತ್ತ ಒಡೆಯರ್‌ರು ನಿಧನರಾದಾಗಲೂ ನಮ್ಮ ಟಿವಿ ಚಾನೆಲ್‌ಗಳು ಹಾಗೆಯೇ ವರ್ತಿಸಿದವು. ಬೆಂಗಳೂರಿನಿಂದ ಮೈಸೂರಿನವರೆಗೆ ಶವದ ವಾಹನದ ಹಿಂದೆ ಓಬಿ ವ್ಯಾನ್‌ಗಳನ್ನು ಕಳಿಸಲಾಯಿತು. ಆ ಸಂದರ್ಭದಲ್ಲಿ ಅಥವಾ ನಂತರ ಒಡೆಯರ್ ಕುಟುಂಬದ ಸಮಕಾಲೀನತೆಯ ಕುರಿತು, ಪ್ರಜಾಪ್ರಭುತ್ವದಲ್ಲಿ ಇಂತಹವರ ಸ್ಥಾನಮಾನದ ಕುರಿತು ಒಂದು ಸಣ್ಣ ಅರ್ಥ ಮಾತು ಸಾಧ್ಯವಿಲ್ಲ ಎಂಬ ಪರಿಸ್ಥಿತಿ ಸೃಷ್ಟಿಸಲಾಯಿತು. ಈ ದೇಶದಲ್ಲಿ ಇನ್ನೂ ರಾಜಪ್ರಭುತ್ವದ ವ್ಯವಸ್ಥೆಯೇ ಇದೆ ಎಂದು ಭಾವಿಸಬೇಕಾದಷ್ಟು ಮಟ್ಟಿಗೆ ಮಾಧ್ಯಮಗಳ ಅಬ್ಬರವಿತ್ತು.

ಒಂದು ಸುದ್ದಿಯಿಂದ ಇನ್ನೊಂದು ಸುದ್ದಿಗೆ ಓಡುವುದಷ್ಟೇ ಇದರಲ್ಲಿನ ಸಮಸ್ಯೆಯಲ್ಲ, ಸುದ್ದಿಯ ಆದ್ಯತೆ ಯಾವುದು ಎನ್ನುವುದರ ಬಗ್ಗೆಯೂ ಆಲೋಚಿಸಬೇಕು. ಈ ರೀತಿ ಆಯ್ದುಕೊಳ್ಳುವುದರಲ್ಲಿ ಯಾವ ರೀತಿ ಪೂರ್ವಗ್ರಹ ಕೆಲಸ ಮಾಡುತ್ತದೆ ಎಂಬುದರ ಕುರಿತೂ ಚಿಂತಿಸಬೇಕಿದೆ. ದೆಹಲಿಯ ನಿರ್ಭಯಾ ಪ್ರಕರಣಕ್ಕೆ ಮಾಧ್ಯಮಗಳು ನೀಡಿದ ಕವರೇಜ್ ಕೇವಲ ಒಂದು ಪ್ರಕರಣದ ಸಂತ್ರಸ್ತೆ ಮತ್ತು ದುರಂತಕ್ಕೆ ಮಾತ್ರ ನ್ಯಾಯ ಸಲ್ಲಿಸಿದ್ದಲ್ಲ, ಅದು ಸಮಾಜದ ಅಂತಃಸಾಕ್ಷಿ ಕಲಕುವ ರೀತಿಯಲ್ಲಿ ಮಾಡಿದ್ದರಲ್ಲಿ ಮಾಧ್ಯಮಗಳ ಪಾತ್ರವಿತ್ತು, ಆದರೆ ಅದಾದ ಮೇಲೆ ನಮ್ಮ ದಿನಪತ್ರಿಕೆಗಳಲ್ಲಿ ಒಂದೇ ದಿನ ಒಂದೇ ಪುಟದಲ್ಲಿ ಸಣ್ಣ ಸಣ್ಣದಾಗಿ 5 ಅತ್ಯಾಚಾರದ ಸುದ್ದಿಗಳು ಪ್ರಕಟವಾಗುತ್ತವಾದರೂ, ಅವ್ಯಾವೂ ಯಾರಲ್ಲೂ ತಲ್ಲಣ ಉಂಟುಮಾಡದ ಹಾಗೆ ಆಗುವುದು ಏಕೆ? ಈ ರೀತಿ ಒಂದೇ ದಿನ 5 ಸುದ್ದಿ ಪ್ರಕಟವಾದ ದಿನವೇ, ಬೆಂಗಳೂರಿನ ಆಸ್ಪತ್ರೆಯಲ್ಲಿ 12 ವರ್ಷದ ಒಂದು ಬಾಲಕಿ ತನ್ನ ಮನೆಯೆದುರಿನ ವ್ಯಕ್ತಿಯಿಂದ ಅತ್ಯಾಚಾರಕ್ಕೊಳಗಾಗಿ, ಹಿಸ್ಟೀರಿಕ್ ಆಗಿ ಕಿರುಚುತ್ತಿದ್ದಳು. ಆಕೆಯ ಅತ್ಯಾಚಾರದ ಸುದ್ದಿ ಪತ್ರಿಕೆಗಳಲ್ಲಿ ಬಂದಿರಲಿಲ್ಲ! ಈ ಪ್ರಮಾಣದಲ್ಲಿ ನಡೆಯುತ್ತಿರುವ ಪ್ರಕರಣಗಳನ್ನು ತಡೆಯಬೇಕಾದರೆ, ಒಂದು ದಿನದ ಅಥವಾ ಒಂದು ವಾರದ ಸುದ್ದಿ ಉನ್ಮಾದದ ಆಚೆಗೆ ಗಂಭೀರ ಚರ್ಚೆ ನಡೆಯುವ ಅಗತ್ಯ ನಮ್ಮ ಮಾಧ್ಯಮಗಳಿಗೆ ಕಾಣದೇ ಇರುವುದು ಕೇವಲ ಆಕಸ್ಮಿಕವೂ ಅಲ್ಲ; ಅಥವಾ ಟಿಆರ್‌ಪಿಯ ಕಾರಣಕ್ಕೆ ಉನ್ಮಾದ ಬಿತ್ತಲೇಬೇಕಾದ ಅನಿವಾರ್ಯತೆಯ ಕಾರಣಕ್ಕೆ ಮಾತ್ರವೂ ಅಲ್ಲ.

ಇದು ಆದ್ಯತೆ ಮತ್ತು ಹಿತಾಸಕ್ತಿಯ ಪ್ರಶ್ನೆಯೂ ಹೌದು. ನಮ್ಮ ಹೆಚ್ಚಿನ ಚಾನೆಲ್‌ಗಳು ಮಧ್ಯಮ ಪ್ರಮಾಣದ ಕಾರ್ಪೋರೇಟ್ ಸಂಸ್ಥೆಗಳ ಕೈಗಳಲ್ಲಿದ್ದವು. ಈಗ ಅವು ದೊಡ್ಡ ಕಾರ್ಪೋರೇಟ್ ಸಂಸ್ಥೆಗಳ ಕೈಗೆ ಜಾರುತ್ತಿವೆ. ಮುಖೇಶ್ ಅಂಬಾನಿ ದೇಶದ ಅತ್ಯಂತ ದೊಡ್ಡ ಮಾಧ್ಯಮ ಕ್ಷೇತ್ರದ ಮಾಲೀಕನಾಗಲು ಹೊರಟಿದ್ದಾನೆ. ಸಿಎನ್‌ಎನ್ - ಐಬಿಎನ್‌ನಂತಹ ಸುದ್ದಿ ವ್ಯಾಪಾರ ಚಾನೆಲ್‌ಗಳ ಜೊತೆಗೆ ಈ ಟಿವಿ ಸಮೂಹದ ಪ್ರಾದೇಶಿಕ ಚಾನೆಲ್‌ಗಳನ್ನೂ ಆತ ಕೊಂಡುಕೊಂಡಿದ್ದಾನೆ. ಇದರ ತಾರ್ಕಿಕ ಮುಂದುವರಿಕೆ ಏನಾಗಿರಬಹುದು? ವಿಕೃತ ಬಂಡವಾಳಶಾಹಿ ಬೆಳವಣಿಗೆಯ ಪ್ರತೀಕವಾದ ಅಂಬಾನಿ ಸೋದರರ ಸಾಮ್ರಾಜ್ಯಕ್ಕೆ ಸೇರಿಕೊಳ್ಳುವ ಮಾಧ್ಯಮ ಸಂಸ್ಥೆಗಳು ವಿಕೃತ ಮಾಧ್ಯಮ ಸಂಸ್ಕೃತಿಯನ್ನು ಬಲಪಡಿಸಲಾರವೇ?

ಹೌದು, ಇವೆಲ್ಲದರಾಚೆಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರಶ್ನೆ ಇದ್ದೇ ಇರುತ್ತದೆ. ಮಾಧ್ಯಮಗಳಲ್ಲಿ ಏನು ಬರಬೇಕು, ಏನು ಬರಬಾರದು ಎಂಬುದನ್ನು ಯಾರೋ ಕೆಲವರು ಅಥವಾ ಸರ್ಕಾರ ತೀರ್ಮಾನಿಸಬೇಕು ಎಂದು ಹೇಳಲಾಗದು. ಅದಕ್ಕೊಂದು ಸ್ವಾಯತ್ತತೆಯ ಅಗತ್ಯವಿದ್ದೇ ಇರುತ್ತದೆ. ಆದರೆ ಅಂಬಾನಿಯ ಕೈನಲ್ಲಿ ಇರುವ ಚಾನೆಲ್‌ಗೆ ಯಾವ ಸ್ವಾಯತ್ತತೆ ಇರಲು ಸಾಧ್ಯ? ಮಾಧ್ಯಮಗಳ ಸಾಮಾಜಿಕ ಜವಾಬ್ದಾರಿ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ನಡುವೆ ಯಾವುದು ಎಷ್ಟು ಮುಖ್ಯ? ಜನ ನೋಡುವುದನ್ನು ಕೊಡುತ್ತೇವೆ ಎಂದು ಹೇಳುವ ಮತ್ತು ಆ ಮೂಲಕ ತಮ್ಮ ಕಾರ್ಯಕ್ರಮಗಳ ಸ್ವರೂಪ ಮತ್ತು ಅದರೊಳಗಿನ ವಿಚಾರಗಳ ಹೊಣೆಗಾರಿಕೆಯನ್ನು ಜನರ ಮೇಲೆ ರವಾನಿಸುವ ವಾದದಲ್ಲಿ ಹೆಚ್ಚೇನೂ ಹುರುಳಿಲ್ಲ, ಜನರ ಅಭಿರುಚಿಗೆ ತಕ್ಕದ್ದನ್ನು ನೀಡುತ್ತೇವೆನ್ನುವವರು, ಜನರ ಅಭಿರುಚಿಯನ್ನು ತಾವೇ ವಿಕೃತವಾಗಿ ರೂಪಿಸಿ, ಅದನ್ನು ಕಾಪಾಡುತ್ತಾ ಹೋಗುವುದರಲ್ಲೇ ತಮ್ಮ ಲಾಭ ಇದೆ ಎಂದು ಕಂಡುಕೊಂಡಿರುವವರಾಗಿರುತ್ತಾರೆ. ಈ ಮಾತು ಸಿನೆಮಾಕ್ಕೂ, ಸಾಹಿತ್ಯಕ್ಕೂ, ಮಾಧ್ಯಮಗಳಿಗೂ ಎಲ್ಲರಿಗೂ ಅನ್ವಯಿಸುತ್ತದೆ.

'ಗಾಂಧಿ ಬಂದ' ಎಂಬ ನಾಟಕ ಮತ್ತು ಗೆಳತಿಯರು...

ಎಚ್. ನಾಗವೇಣಿ ಅವರು ಬರೆದಿರುವ 'ಗಾಂಧಿ ಬಂದ' ಕಾದಂಬರಿಯು ಕಳೆದ ಎರಡು ದಶಕಗಳಲ್ಲಿ ಹೊರಬಂದಿರುವ ಕನ್ನಡದ ಕೃತಿಗಳಲ್ಲಿ ಪ್ರಮುಖವಾದದ್ದು ಎಂದರೆ ತಪ್ಪಾಗಲಾರದು. ಕಳೆದ ಮೂರು ವರ್ಷಗಳಿಂದ ಈ ಕಾದಂಬರಿಯನ್ನಾಧರಿಸಿರುವ ನಾಟಕ ಬೆಂಗಳೂರಿನಲ್ಲಿ ಹಲವಾರು ಬಾರಿ ಪ್ರದರ್ಶನ ಕಂಡಿದ್ದರೂ, ಅದರ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ನಾನು ಕೇಳಿದ್ದರೂ ಅದ್ಯಾಕೋ ಅದನ್ನು ನೋಡುವುದಕ್ಕೆ ಸಮಯ ಕೂಡಿ ಬಂದಿರಲಿಲ್ಲ. ಸುಮಾರು ಎರಡು ವರ್ಷಗಳ ಹಿಂದೆ ಕರಾವಳಿಯ ಹಲವು ಚೆಡ್ಡಿಗಳು ಈ ಪುಸ್ತಕದ ವಿರುದ್ಧ ವಿವಾದವನ್ನು ಸೃಷ್ಟಿಸಿದ ನಂತರ ಈ ನಾಟಕದ ಪ್ರದರ್ಶನವೂ ನಿಂತಗೊಂಡಾಗ ಅದನ್ನು ನೋಡದಿದ್ದರ ಬಗ್ಗೆ ನನಗೆ ಬೇಸರವಾಗಿತ್ತು.

ಆದರೆ ಎರಡು ವಾರಗಳ ಹಿಂದೆ ಈ ನಾಟಕವನ್ನು ರಂಗಕ್ಕೆ ತಂದಿದ್ದ 'ರಂಗಮಂಟಪ' ತಂಡದ ಸದಸ್ಯರೊಬ್ಬರು ಭೇಟಿಯಾಗಿ ನಾಟಕದ ಇನ್ನೇ ಪ್ರದರ್ಶನ ಇದೆ ಎಂದು ಹೇಳಿದಾಗ ಯಾವ ಕಾರಣಕ್ಕೂ ಈ ಬಾರಿ ಮಿಸ್ ಮಾಡಿಕೊಳ್ಳಬಾರದೆಂದು ನಿರ್ಧರಿಸಿದೆ. ನಾಟಕದ ಪ್ರದರ್ಶನವಿದ್ದ ದಿನ ಇನ್ನೇನು ಆಫೀಸಿನಿಂದ ರವೀಂದ್ರ ಕಲಾಕ್ಷೇತ್ರಕ್ಕೆ ಹೊರಡಬೇಕು, ಅಷ್ಟರಲ್ಲೇ ಅದ್ಯಾರೋ ಒಬ್ಬರು ಗಹನವಾದ ವಿಚಾರವನ್ನು ನನ್ನೊಂದಿಗೆ ಚರ್ಚಿಸಲು ಬಂದರು. ಇವರಿಂದಾಗಿ ಎಲ್ಲಿ ಮತ್ತೊಮ್ಮೆ ನಾಟಕ ಮಿಸ್ ಆಗುತ್ತದೋ ಎಂದು ಭಾವಿಸಿದ್ದೆ. ಎಷ್ಟು ಹೊತ್ತಾದರೂ ಅವರು ಹೊರಡದೆ ಇದ್ದಾಗ ಮಾರನೆ ದಿನ ಅವರನ್ನು ಭೇಟಿ ಮಾಡುವೆ ಎಂದು ಹೇಳಿ ಕಲಾಕ್ಷೇತ್ರಕ್ಕೆ ದೌಡಾಯಿಸಿದೆ. ಅಷ್ಟು ಹೊತ್ತಿಗೆ ಅಲ್ಲಿ ನಾನೂರು ಜನ ಸೇರಿದ್ದರೂ ಟಿಕೆಟ್ ಇನ್ನೂ ಲಭ್ಯವಿತ್ತು, ನಾಟಕ ಪ್ರಾರಂಭವಾಗುವ ಮುನ್ನ 'ವಾರ್ತೆ' ಎಂಬ ಪುಡಪೋಸಿ 'ಪ್ರಭಾವ' ಬೀರಿ ಮೊದಲನೆ ಸಾಲಿನಲ್ಲೊಂದು ಸೀಟು ಗಿಟ್ಟಿಸಿಯೂ ಬಿಟ್ಟೆ!

ಸುಮಾರು ಮುನ್ನೂರು ಪುಟಗಳಷ್ಟು ವಿಸ್ತಾರವಾಗಿರುವ ಈ ಕಾದಂಬರಿಯನ್ನು ರಂಗಕ್ಕೆ ಅಳವಡಿಸುವುದು ಸಾಮಾನ್ಯ ಕೆಲಸವಲ್ಲ, ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ಭಾಷೆ, ಬದುಕು, ಸಂಸ್ಕೃತಿಗಳನ್ನೂ, ಸಮುದಾಯಗಳ ನಡುವಿನ ತಿಕ್ಕಾಟಗಳನ್ನೂ ಸುಮಾರು ಒಂದೂವರೆ ಗಂಟೆಗಳಲ್ಲಿ ತೆರೆದಿಡುವುದೂ ಸಲೀಸಿನ ಕೆಲಸವಲ್ಲ. ಆದರೆ ಚಂಪಾ ಶೆಟ್ಟಿ ಇವೆರಡನ್ನೂ ಅದ್ಭುತವಾಗಿ ಮಾಡಿದ್ದಾರೆ. ಲೇಖಕಿ ನಾಗವೇಣಿ ಮತ್ತು ಚಂಪಾ ಶೆಟ್ಟಿ ಇದನ್ನು ರಂಗಕ್ಕೆ ಸೂಕ್ತವಾಗಿ ಅಳವಡಿಸಿದ್ದಾರಲ್ಲದೆ ಚಂಪಾ ಅವರು ಇದನ್ನು ನಿರ್ದೇಶಿಸಿದ್ದಾರೆ ಕೂಡ.



ಚಂಪಾ ಶೆಟ್ಟಿ

ಪಟೇಲ ಸೀನಪ್ಪ ಹೆಬ್ಬಾರನ ಚುಗುಟುತನ, ಯುವ ವಿಧವೆ ದ್ರೌಪದಿಯ ಏಕಾಂತ, ಅದ್ರಾಮನ ಪ್ರಾಮಾಣಿಕ ಕಾಳಜಿ, ಸೂರಕ್ಕನ ತೀಕ್ಷ್ಣತೆ... ಆ ಪ್ರದೇಶದ ಕಂಬಳದ ದೃಶ್ಯ ಭೂತದ ಕುಣಿತ... ರಂಗದ ಮೇಲೆ ಬರದೆ ಇದ್ದರೂ ಇವರೆಲ್ಲರ ಬದುಕಿನ ಮೇಲೆ ಪ್ರಭಾವ ಬೀರಿರುವ ಗಾಂಧಿಯ ಸ್ವಾತಂತ್ರ ಹೋರಾಟ... ಇವೆಲ್ಲವೂ ರಂಗದ ಮೇಲೆ ಚೆನ್ನಾಗಿ ಮೂಡಿಬಂದಿದೆ. ಕೆಲವು ದೃಶ್ಯ ಗಳಂತೂ ಎಷ್ಟು ಮನಮುಟ್ಟು ವಂತಿದೆ ಎಂದರೆ ನಾನು ಕಣ್ಣೀರಿಟ್ಟೆ.

ನಿಜವಾಗಲೂ ಚಂಪಾ ಶೆಟ್ಟಿ ಒಂದು ಉತ್ತಮ ನಾಟಕವನ್ನು ಕನ್ನಡಿಗರಿಗೆ ಕೊಟ್ಟಿದ್ದಾರೆ. ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.



ಈ ನಾಟಕ ಜನವರಿ 28ರಂದು ಬೆಂಗಳೂರಿನ ರಂಗಶಂಕರದಲ್ಲಿ ಮತ್ತೆ ಪ್ರದರ್ಶನ ಕಾಣುತ್ತಿದೆ. ನನ್ನಂತೆ ಇಷ್ಟು ದಿನ ಇದನ್ನು ನೋಡದಿರುವವರು ಇದ್ದರೆ ದಯವಿಟ್ಟು ಇದನ್ನು ನೋಡಿ ಎಂದು ವಿನಂತಿಸಿಕೊಳ್ಳುತ್ತೇನೆ.

ಇಷ್ಟೆಲ್ಲ ಹೇಳಿದನಂತರ ಒಂದೆರಡು ಬೇಸರದ ಸಂಗತಿಗಳನ್ನೂ ಇಲ್ಲಿ ಹೇಳಬೇಕಿದೆ. ಆದರೆ ಅದು ಈ ನಾಟಕಕ್ಕೆ ಸಂಬಂಧಿಸಿದ್ದಲ್ಲ, ಬದಲಾಗಿ ನಮ್ಮ ಜನರ ಅಸೂಕ್ಷ್ಮತೆಗೆ ಸಂಬಂಧಿಸಿದ್ದು.

ರಂಗಶಂಕರದಲ್ಲಿ ನಾಟಕ ಪ್ರಾರಂಭವಾಗುವ ಮುನ್ನ ಪ್ರೇಕ್ಷಕರೆಲ್ಲರಿಗೂ ತಮ್ಮ ಮೊಬೈಲ್ ಫೋನ್‌ಗಳನ್ನು ಸ್ವಿಚ್ ಆಫ್ ಮಾಡಿಕೊಳ್ಳಲು 'ವಿನಂತಿ'ಸಲಾಗುತ್ತದೆ. ಆ 'ವಿನಂತಿ'ಯನ್ನು ರಂಗಶಂಕರಕ್ಕೆ ಬರುವ ಪ್ರೇಕ್ಷಕರು 'ಆದೇಶ'ದಂತೆ ಪಾಲಿಸುತ್ತಾರೆ.

ಆದರೆ ರವೀಂದ್ರ ಕಲಾಕ್ಷೇತ್ರದಲ್ಲಿ ಹಾಗಲ್ಲ, 'ಗಾಂಧಿ ಬಂದ' ನಾಟಕ ಪ್ರಾರಂಭವಾಗುವ ಮುನ್ನ ಎರಡೆರಡು ಬಾರಿ ಎಲ್ಲರಿಗೂ ತಮ್ಮ ಮೊಬೈಲ್ ಫೋನ್‌ಗಳನ್ನು ಸ್ವಿಚ್ ಆಫ್ ಮಾಡಿಕೊಳ್ಳಲು ವಿನಂತಿಸಿಕೊಳ್ಳಲಾಗಿತ್ತು. ಆದರೆ ನಾಟಕ ಪ್ರಾರಂಭವಾದ ನಂತರವೂ ಮೂವರು ಕ್ಯುಯಿಗುಟ್ಟಿದ ತಮ್ಮ ಫೋನ್ ಕರೆಗಳನ್ನು ಸ್ವೀಕರಿಸಿದರಲ್ಲದೆ ಕೆಲವು ನಿಮಿಷಗಳ ಕಾಲ ಸಂಭಾಷಣೆಗಳನ್ನೂ ನಡೆಸಿದರು. ಇಂತಹ ಜನರಿಗೆ ಬುದ್ಧಿ ಬರುವುದು ಎಂದು?

ಎರಡನೆ ವಿಷಯ ತಮ್ಮ ಜನರ ಕಲಾಭಿಮಾನಕ್ಕೆ ಸಂಬಂಧಿಸಿದ್ದು. ನಿರ್ದೇಶಕಿ ಚಂಪಾ ಶೆಟ್ಟಿ ನಾಟಕಗಳಲ್ಲಿ, ಸಿನಿಮಾಗಳಲ್ಲಿ ಮತ್ತು ಧಾರಾವಾಹಿಗಳಲ್ಲೂ ನಟಿಸಿದ್ದಾರೆ. ನಾಟಕ ಮುಗಿದನಂತರ ಅವರನ್ನು ಭೇಟಿಯಾಗಿ ಅಭಿನಂದಿಸಿದೆ. ನನ್ನ ಹಿಂದೆಯೇ ನಿಂತಿದ್ದ ಮಹಿಳೆಯೋರ್ವರೂ ಒಂದು ಉತ್ತಮ ನಾಟಕ ಕೊಟ್ಟಿದ್ದಕ್ಕೆ ಚಂಪಾ ಅವರನ್ನು ಅಭಿನಂದಿಸುತ್ತಾರೆ ಎಂದುಕೊಂಡಿದ್ದೆ. ಆದರೆ ಆ ಮಹಿಳೆ ನಾಟಕವನ್ನು ಸಂಪೂರ್ಣವಾಗಿ ಮರೆತು, ಚಂಪಾ ಅವರ ಕೈಹಿಡಿದು "ನೀವು .... ಧಾರಾವಾಹಿಯಲ್ಲಿ ಚೆನ್ನಾಗಿ ನಟಿಸಿದ್ದೀರಿ" ಎನ್ನಬೇಕೆ?!

ಅದನ್ನು ಕೇಳಿ "ಅಯ್ಯೋ ದೇವರೇ" ಎಂದು ಮನಸ್ಸಿನಲ್ಲೇ ಅಂದುಕೊಳ್ಳುತ್ತಾ ಮನೆಗೆ ಹೊರಟೆ...



• ಗೌರಿ ಲಂಕೇಶ್

editorlankesh@gmail.com

******

ಪುರುಷರ ನಡುವಿನ ಸ್ನೇಹಕ್ಕೆ ಹೋಲಿಸಿದರೆ ಮಹಿಳೆಯರ ನಡುವಿನ ಸ್ನೇಹ ವಿವಿಧ ಆಯಾಮಗಳನ್ನು ಹೊಂದಿರುತ್ತದೆ ಅನ್ನಿಸುತ್ತದೆ. ಏಕೆಂದರೆ ಅಲ್ಲಿ ಬರೀ ಮಾತಿನ ಗೆಳೆತನ ಇರುವುದಿಲ್ಲ, ಜೊತೆಗೆ ವಿವಿಧ ತರಹದ ಪ್ರೀತಿಯ ಅಭಿವ್ಯಕ್ತಿಯೂ ಇರುತ್ತದೆ.

ಇತ್ತೀಚೆಗೆ ಗೆಳತಿ ಮಲ್ಲಿಕಾ ಘಂಟಿ ನಮ್ಮ ಆಫೀಸಿಗೆ ಬಂದಿದ್ದರು. ಅವರು ಶಿವಮೊಗ್ಗೆಯ ಕುವೆಂಪು ವಿಶ್ವವಿದ್ಯಾಲಯಕ್ಕೆ ಕುಲಸಚಿವೆಯಾಗಿ ನೇಮಕಗೊಂಡ ನಂತರ ಪ್ರಥಮಬಾರಿಗೆ ನಾವಿಬ್ಬರು ಭೇಟಿ ಆಗುತ್ತಿದ್ದೆವು. ಕಳೆದ ಹಲವು ವರ್ಷಗಳಿಂದ ಮಲ್ಲಿಕಾ ಘಂಟಿಯೊಂದಿಗೆ ಪತ್ರಿಕೆ ನಿಕಟನಂಟು ಹೊಂದಿದೆ. ದಲಿತ ವಿದ್ಯಾರ್ಥಿಗಳು ಅವರ ವಿರುದ್ಧ ಕಪೋಲಕಲ್ಪಿತ ಆರೋಪಗಳನ್ನು ಮಾಡಿದಾಗ, ಇತ್ತೀಚೆಗೆ ವಿವಿಯ ಕುಲಪತಿಯೊಬ್ಬರು ಆಕೆಗೆ ಹಲವಾರು ರೀತಿಯಲ್ಲಿ ತೊಂದರೆಗಳನ್ನು ಕೊಟ್ಟಾಗ ಪತ್ರಿಕೆ ಮಲ್ಲಿಕಾ ಪರ ನಿಂತಿತ್ತು, ಅದಕ್ಕೆ ಮಲ್ಲಿಕಾ ಅವರ ಪ್ರಾಮಾಣಿಕತೆ, ದೀನದಮನಿತರ ಪರವಾಗಿನ ಅವರ ಹೋರಾಟ, ಮಹಿಳಾ ಸಂವೇದನೆ ಎಲ್ಲವೂ ಕಾರಣ.

ಮೊನ್ನೆ ನಮ್ಮ ಆಫೀಸಿಗೆ ಮಲ್ಲಿಕಾ ಅವರು ಬಂದಾಗ ಒಂದು ಕೈಯಲ್ಲಿ ಹೂಗುಚ್ಛ, ಇನ್ನೊಂದು ಕೈಯಲ್ಲಿ ಸಿಹಿ ತಿನಿಸುಗಳನ್ನು ಹಿಡಿದು ಬಂದಿದ್ದರು. ನಾವೆಲ್ಲ ಎರಡು ದಿನ ಆ ಸಿಹಿ ತಿನಿಸುಗಳನ್ನು ಆನಂದಿಸಿದೆವು.

ಗೆಳತಿ ಡಾ.ಎಂ.ಎಸ್.ಆಶಾದೇವಿ ಕೂಡ ಎಂದೂ ಬರಿಗೈಯಲ್ಲಿ ಬರುವುದೇ ಇಲ್ಲ, ಅವರು ಬರುವಾಗ ಏನಿಲ್ಲವೆಂದರೂ ಅವರ ತಾಯಿ ಪ್ರೀತಿಯಿಂದ ತಯಾರಿಸಿರುವ ಚಟ್ನಿಪುಡಿ ಪೊಟ್ಟಣವನ್ನಾದರೂ ತಂದೇ ತರುತ್ತಾರೆ. ಆಶಾ ಮನೆಗೆ ಹೋದರೆ ಅಲ್ಲಿ ದೊಡ್ಡ ಔತಣವೇ ಕಾದಿರುತ್ತದೆ. ಇಷ್ಟು ವರ್ಷಗಳ ಗೆಳೆತನದಲ್ಲಿ ಆಶಾದೇವಿ ನನಗೆ ಉಡುಗೊರೆಯಾಗಿ ಕೊಟ್ಟಿರುವ ಉಡುಪುಗಳಿಗೆ ಲೆಕ್ಕವಿಲ್ಲ.

ಮಂಗಳೂರಿನ ಸಬಿಹಾ ಭೂಮಿಗೌಡ ಕೂಡ ಅಷ್ಟೇ. ಅವರ ಮನೆಗೆ ಹೋದಾಗಲೆಲ್ಲ ನಮ್ಮೆಲ್ಲರನ್ನೂ ಸಬಿಹಾ ಮತ್ತು ಭೂಮಿ ಇಬ್ಬರೂ ಚೆನ್ನಾಗಿ ನೋಡಿಕೊಳ್ಳುತ್ತಾರೆ. ಬೆಂಗಳೂರಿಗೆ ಬರುವಾಗ ಒಂದು ಪ್ಯಾಕ್ ಗೋಡಂಬಿಯನ್ನು ಮರೆಯದೆ ತರುತ್ತಾರೆ.

ಇತ್ತೀಚೆಗೆ ಸಬಿಹಾ ನಮ್ಮ ಆಫೀಸಿಗೆ ಬಂದಾಗ ನಾವು ಒಂದಿಷ್ಟು ಜನ ಜೊತೆಗೂಡಿ ಶಾಲಾ ಪಠ್ಯಪುಸ್ತಕಗಳ ಕೇಸರೀಕರಣದ ಬಗ್ಗೆ ಚರ್ಚೆ ಮಾಡುವುದಾಗಿ ಪೂರ್ವಭಾವಿಯಾಗಿ ನಿರ್ಧರಿಸಲಾಗಿತ್ತು. ಎಲ್ಲರೂ ಕೈಬೀಸಿಕೊಂಡು ಬಂದರು. ಆದರೆ ಸಬಿಹಾ ಮಾತ್ರ ಎಲ್ಲರಿಗೂ ಸಾಕಾಗಿ ಮಿಗುವಷ್ಟು ಸ್ವೀಟ್ಸ್ ಮತ್ತು ಕೋಡುಬಳೆಗಳನ್ನು ತಂದಿದ್ದರು.

ಕವಿಯತ್ರಿ ಕೆ.ಶರೀಫಾ ಅಪ್ಪಟ ತಾಯಿ ಹೃದಯಿ. ಹಲವು ವರ್ಷಗಳ ಹಿಂದೆ ಶರೀಫಾ ಹರಿಹರದಲ್ಲಿ ವಾಸವಿದ್ದರು. ಆಗ ಒಮ್ಮೆ ನಾವು ದಾವಣಗೆರೆಯಲ್ಲಿ ಒಂದು ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದೆವು. ನಾನು ಒಂದು ದಿನದ ಮಟ್ಟಿಗೆ ದಾವಣಗೆರೆಯಲ್ಲಿ ಇರುತ್ತೇನೆಂದು ಗೊತ್ತಾಗಿದ್ದೇ ತಡ, ಯಾವುದೋ ಸಾಹಿತ್ಯ ಗೋಷ್ಠಿಗೆಂದು ಬೇರೆ ಊರಿಗೆ ಹೋಗಿದ್ದ ಶರೀಫಾ ರಾತ್ರಿಯೆಲ್ಲ ಪ್ರವಾಸ ಮಾಡಿ ಹರಿಹರಕ್ಕೆ ವಾಪಸ್ ಆಗಿದ್ದರಲ್ಲದೆ, ಬೆಳಗ್ಗೆಯೇ ರುಚಿಕರವಾದ ಅಡುಗೆ ಮಾಡಿ, ಅದನ್ನೆಲ್ಲ ಕಟ್ಟಿಕೊಂಡು ಮಧ್ಯಾಹ್ನದ ಹೊತ್ತಿಗೆ ದಾವಣಗೆರೆಯಲ್ಲಿ ಪ್ರತಿಭಟನೆ ನಡೆಯುತ್ತಿದ್ದಲ್ಲಿಗೆ ಬಂದಿದ್ದರು. ಅಲ್ಲೇ ಕಾರೊಂದರಲ್ಲಿ ನನ್ನನ್ನು ಕೂರಿಸಿ, ಶರೀಫಾ ತಂದಿದ್ದ ಬಿರಿಯಾನಿ, ಕಬಾಬ್ ಎಲ್ಲವನ್ನೂ ನನಗೆ ತಿನ್ನಿಸಿದ್ದನ್ನು ಎಂದೂ ಮರೆಯಲು ಸಾಧ್ಯವಿಲ್ಲ.


ಹಿರಿಯ ಸಂಶೋಧಕ ದಿವಂಗತ ಎಲ್.ಬಸವರಾಜು ಅವರ ಪತ್ನಿ ವಿಶಾಲಾಕ್ಷಮ್ಮನವರೂ ಅಷ್ಟೇ ಮಮತೆ ತೋರುವವರು. ಇತ್ತೀಚೆಗೆ ಬಸವರಾಜು ಅವರನ್ನು ಕುರಿತ ಪುಸ್ತಕವನ್ನು ಬಿಡುಗಡೆ ಮಾಡಲು ನನ್ನನ್ನು ವಿಶಾಲಾಕ್ಷಮ್ಮನವರು ಮೈಸೂರಿಗೆ ಆಹ್ವಾನಿಸಿದ್ದರು. ಅದಕ್ಕೂ ಮುನ್ನ ನಾನು ವಿಶಾಲಾಕ್ಷಮ್ಮನವರನ್ನು ಭೇಟಿಯೇ ಆಗಿರಲಿಲ್ಲ, ಆದರೂ ಅವರು ನನ್ನನ್ನು ಅಪಾರ ಪ್ರೀತಿಯಿಂದ ಬರ ಮಾಡಿಕೊಂಡರು. ಅವತ್ತು ಸಭೆ ಮುಗಿದನಂತರ ನಾನು ಹೊಟ್ಟೆ ತುಂಬ ಊಟ ಮಾಡಿದ್ದೇನೋ ಇಲ್ಲವೋ ಎಂದು ವಿಚಾರಿಸಿಕೊಂಡ ವಿಶಾಲಾಕ್ಷಮ್ಮನವರು ನಾನು ಹೊರಡುವ ಮುನ್ನ ನನ್ನ ಕೈಗೆ ಒಂದು ಪ್ಯಾಕೆಟ್ ಇಟ್ಟು "ನೀನು ಸೀರೆ ಉಡಲ್ಲ ಅಂತ ಗೊತ್ತು, ಅದಕ್ಕೆ ಇದನ್ನು ಕೊಟ್ಟಿದ್ದೀನಿ. ನಿನಗೆ ಬೇಕಾದನ್ನು ಖರೀದಿಸಿ ಮುಂದಿನ ಸಾರಿ ನಮ್ಮ ಮನೆಗೆ ಬರುವಾಗ ಅದನ್ನು ತೊಟ್ಟುಕೊಂಡು ಬಾ" ಎಂದರು. ಬೆಂಗಳೂರಿಗೆ ವಾಪಸ್ ಬಂದನಂತರ ಆ ಪ್ಯಾಕೆಟ್ ತೆಗೆದು ನೋಡಿದರೆ ಅದರಲ್ಲಿ ನಾಲ್ಕು ಸಾವಿರ ರೂಪಾಯಿಗಳಿದ್ದವು!

ಹೀಗೆ ಅದೆಷ್ಟೋ ಗೆಳತಿಯರಿದ್ದಾರೆ. ನನ್ನ ಮತ್ತು ಗೆಳತಿಯರ ನಡುವಿನ ಈ ಕೊಟ್ಟುಕೊಡುವಿಕೆಯನ್ನು ನೋಡಿ ಮಿತ್ರ ಶಿವಸುಂದರ್ ಒಮ್ಮೆ "ನೀವು ಮಹಿಳೆಯರು ಬೇರೆ ತರಹ ಕಂಡ್ರಿ. ನಾವು ಪುರುಷರು ಹೀಗೆಲ್ಲ ಏನನ್ನಾದರೂ ತೆಗೆದುಕೊಂಡು ಹೋಗಬೇಕೆಂದು ಯೋಚಿಸುವುದೇ ಇಲ್ಲ" ಎಂದು ಅಚ್ಚರಿ ವ್ಯಕ್ತಪಡಿಸಿದ್ದರು.

ಹಾಗೆ ನೋಡಿದರೆ, ನನ್ನ ಗೆಳತಿಯರಿಗೆ ಹೋಲಿಸಿದರೆ 'ಗಂಡುಬೀರಿ' ನಾನೆ ಎನಿಸುತ್ತದೆ. ಯಾಕೆಂದರೆ ಪುರುಷರಂತೆ ಕೈಬೀಸಿಕೊಂಡು ಹೋಗುವುದು ನನ್ನ ಕೆಟ್ಟ ಚಾಳಿ! ನನಗೆ ಅಪಾರ ಪ್ರೀತಿ ತೋರಿರುವ ಗೆಳತಿಯರು ನನ್ನನ್ನು ಕ್ಷಮಿಸಲಿ!! •

ಕೆನರಾ ಲೋಕಸಭಾ ಅಖಾಡ

ಕಾಂಗ್ರೆಸ್‌ಗೆ ಯಾರು ಹಿತವರು ಈ ಮೂವರೊಳಗೆ?



ಹರಿಪ್ರಸಾದ್



ಪ್ರಶಾಂತ್ ದೇಶಪಾಂಡೆ



ನಿವೇದಿತ್ ಆಳ್ವ

ಉತ್ತರ ಕನ್ನಡ ಲೋಕಸಭಾ ಚುನಾವಣೆ ಅಖಾಡದಲ್ಲಿ ಮಜ್‌ಮಜಾ ತಾಲೀಮುಗಳು ನಡೆಯುತ್ತಿವೆ. ಕಾಂಗ್ರೆಸ್-ಬಿಜೆಪಿ ಮತ್ತು ಜೆಡಿಎಸ್‌ನ ಟಿಕೆಟ್ ಕೊಡಿಸುವ, ಟಿಕೆಟ್ ತಪ್ಪಿಸುವ ಒಳಹಿಕಮತ್ತುಗಳಿಗೆ ದಿನಕ್ಕೊಂದು ಬಣ್ಣ ಬರುತ್ತಿದೆ. ಉತ್ತರ ಕನ್ನಡ ಜಿಲ್ಲೆಯೊಂದಿಗೆ ಬೆಳಗಾವಿ ಜಿಲ್ಲೆಯ ಖಾನಾಪುರ ಮತ್ತು ಕಿತ್ತೂರು ವಿಧಾನಸಭಾ ಕ್ಷೇತ್ರ ಒಳಗೊಂಡಿರುವ ಕೆನರಾ ಕ್ಷೇತ್ರದಲ್ಲಿ ನೇರಾನೇರ ಬಡಿದಾಟ ಏನಿದ್ದರೂ ಪುರೋಹಿತಶಾಹಿ ಹಿಡಿತದ ಬಿಜೆಪಿ ಮತ್ತು ಎಡಬಿಡಂಗಿ ಕಾಂಗ್ರೆಸ್ ನಡುವೆ ಮಾತ್ರ. ಆದರೂ ಬೆನ್ನೆಲುಬಿಲ್ಲದ ಜೆಡಿಎಸ್ ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಅಚಾನಕ್ ಸಿಕ್ಕಿದ ಮತದ ಬಲದ ಭ್ರಮೆಯಲ್ಲಿ ತಾನೂ ಕ್ಯಾಂಡಿಡೇಟ್ ಹಾಕಿ ಒಂದು ಕೈ ನೋಡಬಾರದೇಕೆಂಬ ಲೆಕ್ಕಾಚಾರದಲ್ಲಿದೆ. ಜೆಡಿಎಸ್ ಕೆನರಾ ಕದನ ಭೂಮಿಯಲ್ಲಿ ತ್ರಿಕೋನ ಕಾಳಗದ ಕುತೂಹಲ ಕೆರಳಿಸಿದರೂ ಅದು ಆಟಕ್ಕೆ, ಅಷ್ಟೇ!



ಈಗ ಕೆನರಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವಾತ ಬಿಜೆಪಿಯ ಅರಣ್ಯ ಕಳ್ಳ, ಕಡಿ-ಕೊಚ್ಚು ಸಂಸ್ಕೃತಿಯ ಸೋಗಲಾಡಿ ಅನಂತ್‌ಕುಮಾರ್ ಹೆಗಡೆ ಯಾನೆ ಅನಂತ್ಮಾಣಿ. ದೇಶಪ್ರೇಮ-ಹಿಂದೂತ್ವದ ಉದ್ದುದ್ದ ಭಾಷಣ ಬಿಗಿಯುತ್ತಲೇ ಈಗ ಅಕ್ರಮ-ಅನ್ಯಾಯ-ಅವ್ಯವಹಾರ-ಅವಾಂತರ ನಡೆಸಿ ಕೋಟ್ಯಾಧೀಶನಾಗಿಬಿಟ್ಟಿದ್ದಾನೆ. ಇಂಥ ಹೀನ ಚರಿತ್ರೆಯ ಅನಂತ್ಮಾಣಿ ಕಂಡರೆ ಕಟ್ಟಾ ಚೆಡ್ಡಿಗಳೇ ಈಗ ಕ್ಯಾಕರಿಸಿ ಉಗಿಯುವಂತಾಗಿದೆ. ಈ ನಾಲಾಯಕನೇ ಕ್ಯಾಂಡಿಡೇಟಾದರೆ ಬಿಜೆಪಿ ಭರ್ಕತ್ತಾಗುವುದಿಲ್ಲ ಎಂಬ ತೀರ್ಮಾನಕ್ಕೆ ಸಂಘಪರಿವಾರ ಒಂದು ಹಂತದಲ್ಲಿ ಬಂದಿತ್ತು, ಇದಕ್ಕೆ ಆತನ ಹಿತಶತ್ರು ಮಾಜಿ ಮಂತ್ರಿ ಕಾಗೇರಿ ಮಾಣಿಯ ಕಿತಾಪತಿಯೂ ಸೇರಿಕೊಂಡಿತ್ತು, ಆದರೆ "ಮತ್ತೆಂದಿಗೂ ತಪ್ಪು ಮಾಡೋದಿಲ್ಲ... ಇದೊಂದು ಬಾರಿ ಲಾಸ್ಟ್ ಛಾನ್ಸ್ ಕೊಡಿ..." ಎಂದು ಅನಂತ್ಮಾಣಿ ದೊಡ್ಡವರ ಕಾಲಿಗೆ ಬಿದ್ದು ಟಿಕೆಟ್ ಖಾತ್ರಿಪಡಿಸಿಕೊಂಡಿದ್ದಾನೆ.

ಅಲ್ಲಿಗೆ ಬಿಜೆಪಿ ಹುರಿಯಾಳು ಯಾರೆಂಬುದು ಬಹಿರಂಗವಾಗಿದೆ. ಅನಂತ್ಮಾಣಿ ತಾನೇ ಕ್ಯಾಂಡಿಡೇಟ್ ಎಂದು ಹಿಂದೂತ್ವದ ಹಿಕಮತ್ತು-ಬ್ರಾಹ್ಮಣಿಕೆ ಬಡಬಡಿಕೆಯೊಂದಿಗೆ ಯುದ್ಧ ರಂಗಕ್ಕೆ ಧುಮುಕಿಬಿಟ್ಟಿದ್ದಾನೆ. ಆದರೆ ಆತನಿಗೆ ಹೋದಲೆಲ್ಲ ಅಪಶಕುನವೇ ಎದುರಾಗುತ್ತಿದೆ. ಜನ ಕಂಡ-ಕಂಡಲ್ಲಿ "ನೀನು ಹದಿನೈದು ವರ್ಷ ಎಂಪಿಯಾಗಿ ಮಾಡಿದ್ದೇನು... ಮಗನೇ..." ಎಂದು ಕೇಳುತ್ತಿದ್ದಾರೆ. ಕಳೆದ ಬಾರಿ ಆತ ದಡ ಸೇರಿದ್ದೇ ಖಾನಾಪುರ-ಕಿತ್ತೂರು ಭಾಗದ ಓಟಿನಿಂದಾಗಿತ್ತು. ಇವತ್ತು ಅಲ್ಲೇ ಆತನಿಗೆ ತಲೆ ಎತ್ತಿ ಓಡಾಡದಂತಾಗಿದೆ. ಮೋದಿ ಅಲೆಯೂ ಕೆನರಾದಲ್ಲಿ ಇಲ್ಲ, ಪಕ್ಕಾ ಸಂಘ ಪರಿವಾರಿಗಳೂ ಬೆನ್ನಿಗೆ ಬರುತ್ತಿಲ್ಲ, ಅನಂತ್ಮಾಣಿ ಈಗಲೇ ಜಂಘಾಬಲ ಉಡುಗಿದಂತೆ ಅಂಡಲೆಯುತ್ತಿದ್ದಾನೆ, ಪಾಪ!


ಈ ಬಾರಿ ಬಿಜೆಪಿಯ ದೌರ್ಬಲ್ಯ ಬಳಸಿಕೊಂಡು ಗೆಲ್ಲುವ ಅವಕಾಶ ಕಾಂಗ್ರೆಸ್‌ಗೆ ನೂರಾರಿದೆ. ಆದರೆ ಈ ಜಗಳಗಂಟರ ಗ್ಯಾಂಗ್‌ವಾರೇ ಮುಗಿಯುತ್ತಿಲ್ಲ, ಒಂದು ಕಡೆ ರಾಜಸ್ತಾನದ ರಾಜ್ಯಪಾಲೆ ಮಾರ್ಗರೆಟ್ ಆಳ್ವ ಎಂಬ ಕಾಂಗ್ರೆಸ್ ಹೈಕಮಾಂಡ್‌ನಲ್ಲಿ ಆವಾಜ್ ಇರುವ ಅಜ್ಜಿ ಮತ್ತೊಂದೆಡೆ ತನ್ನ ಧನಬಲದಿಂದಲೇ ಹೈಕಮಾಂಡ್‌ನ ದಾರಿ ತಪ್ಪಿಸಬಲ್ಲ ಮುದಿ ನರಿಯಣ್ಣ ದೇಶಪಾಂಡೆ ಜಿಲ್ಲಾ ಕಾಂಗ್ರೆಸ್‌ನ್ನು ಎಳೆದಾಡಿ ಚಿಂದಿ ಎಬ್ಬಿಸಿಬಿಟ್ಟಿದ್ದಾರೆ. ಕಳೆದ ಬಾರಿ ದೇಶಪಾಂಡೆಯ ದ್ರೋಹದಿಂದಾಗಿಯೇ ಮ್ಯಾಗಿ ಬರೀ 27 ಸಾವಿರ ಚಿಲ್ಲರೆ ಮತದಿಂದ ಸೋತಿದ್ದರು. ಆದರೂ ಈ ಕಾಗೆಗಳನ್ನು ಕಾಂಗ್ರೆಸ್‌ನ ದೊಡ್ಡವರಿಗೆ ಕಂಟ್ರೋಲ್ ಮಾಡಲಾಗಿಲ್ಲ!

ಕಳೆದ ಬಾರಿ ಚುನಾವಣೆ ಹೊತ್ತಲ್ಲಿ ಮ್ಯಾಗಿ "ಇದು ನನ್ನ ಕೊನೆಯ ಆಟ... ಮುಂದಿನ ಸಲ ಪ್ರಶಾಂತ್(ದೇಶಪಾಂಡೆ ಪುತ್ರ)ಗೇ ಟಿಕೆಟ್..." ಎಂದು ಗೋಗರೆದಿದ್ದರು. ಆದರೂ ದೇಶಪಾಂಡೆಗೆ ಕರುಣೆ ಬರಲಿಲ್ಲ, ಆತ ಬಿಜೆಪಿಯ ಅನಂತ್ಮಾಣಿಯನ್ನು ಗೆಲ್ಲಿಸಿ ಚಟ ತೀರಿಸಿಕೊಂಡಿದ್ದರು. ಈಗ ತನ್ನ ಮಗ ಪ್ರಶಾಂತ್‌ಗೆ ಕಾಂಗ್ರೆಸ್ ಟಿಕೆಟ್ ಕೊಡಿಸಲು ಉತ್ತರ ಕನ್ನಡ-ಬೆಂಗಳೂರು-ದಿಲ್ಲಿಯನ್ನೆಲ್ಲ ಒಂದು ಮಾಡಿ ಒದ್ದಾಡುತ್ತಿದ್ದಾರೆ. ಅತ್ತ ಮ್ಯಾಗಿ ದಿಲ್ಲಿ ಅಂತಃಪುರದಲ್ಲಿ ತನ್ನೆಲ್ಲ ಶಕ್ತಿ-ಸಾಮರ್ಥ್ಯ ಪ್ರಯೋಗಿಸಿ ಪುತ್ರರತ್ನ ನಿವೇದಿತ್‌ನನ್ನು ಅಭ್ಯರ್ಥಿಯಾಗಿ ಮಾಡಲು ಶತಾಯಗತಾಯ ಹೋರಾಡುತ್ತಿದ್ದಾರೆ. ಉತ್ತರ ಕನ್ನಡ ಕಾಂಗ್ರೆಸ್‌ನ ದುರಂತ ಅದೆಂಥದೆಂದರೆ, ಈ ದೊಡ್ಡವರ ಹೆಡ್ಡ ಮಕ್ಕಳನ್ನು ಬಿಟ್ಟರೆ ಸ್ಥಳೀಯರ್‍ಯಾರನ್ನೂ ಕೆಪಿಸಿಸಿ ಪರಿಗಣನೆಗೇ ತೆಗೆದುಕೊಂಡಿಲ್ಲ, ಕೆಪಿಸಿಸಿ ಸಿದ್ಧಪಡಿಸಿದ ಪಟ್ಟಿಯಲ್ಲಿ ಬಿ.ಕೆ. ಹರಿಪ್ರಸಾದ್ ಹೆಸರು ನಂಬರ್ ಒನ್ ಸ್ಥಾನದಲ್ಲಿದೆ. ಡುಮ್ಮಿಯಾಗಿ ಪ್ರಶಾಂತ್ ದೇಶಪಾಂಡೆ, ನಿವೇದಿತ್ ಆಳ್ವಾರ ಹೆಸರನ್ನು ಇಟ್ಟುಕೊಳ್ಳಲಾಗಿದೆ.

ಆದರೆ ಮ್ಯಾಗಿ ಮತ್ತು ದೇಶಪಾಂಡೆಯ ಪುತ್ರ ವ್ಯಾಮೋಹದ ನಿರ್ಲಜ್ಜ ರಾಜಕಾರಣದಿಂದ ಹೇಸಿಹೋಗಿರುವ ಸ್ಥಳೀಯ ಕಾಂಗ್ರೆಸಿಗರು ಎಐಸಿಸಿ ಪ್ರಧಾನ ಕಾರ್ಯದರ್ಶಿ ಹರಿಪ್ರಸಾದ್ ಬೆಟರ್ ಕ್ಯಾಂಡಿಡೇಟ್ ಎಂಬ ಅಹವಾಲು ಕೆಪಿಸಿಸಿ ಕಿಂಗ್‌ಗಳಿಗೆ ಅರುಹಿದ್ದಾರೆ. ಜತೆಗೆ ಹರಿಗೆ ಎಐಸಿಸಿಯಲ್ಲಿರುವ ತಾಕತ್ತು ಸೇರಿಕೊಂಡಿದೆ. ಹೀಗಾಗಿ ಮೊನ್ನೆ ಸಭೆ ಸೇರಿದ್ದ ಕೆಪಿಸಿಸಿಯ ಚುನಾವಣಾ ಟಿಕೆಟ್ ಕಮಿಟಿ ಹರಿ, ನಿವೇದಿತ್ ಮತ್ತು ಪ್ರಶಾಂತ್ ಗುಣಾವಗುಣಗಳ ಪರಿಶೀಲನೆ ನಡೆಸುವಂತಾಗಿದೆ. ಹರಿ ಮತ್ತು ನಿವೇದಿತ್‌ರನ್ನು ಬದಿಗೆ ಸರಿಸಿ ತನ್ನ ವಂಶೋದ್ಧಾರಕನೇ ಅರ್ಹ ಅಭ್ಯರ್ಥಿಯೆಂದು ಬಿಂಬಿಸಲು ದೇಶಪಾಂಡೆ ಕೆಪಿಸಿಸಿಯಲ್ಲಿ ನಡೆಸಿದ ಲಾಬಿ-ತರ್ಕಗಳು ಮೋಜಾಗಿದೆ. ಹರಿ ಮತ್ತು ಮ್ಯಾಗಿ ಮಗ ನಿವೇದಿತ್ ಹೊರಗಿನವರು; ಉತ್ತರ ಕನ್ನಡ ಜಿಲ್ಲೆಯಲ್ಲಿ ಅವರಿಬ್ಬರಿಗೆ ತನ್ನ ಮಗನಷ್ಟು ಚಾರಿಷ್ಮ ಇಲ್ಲ ಎಂದು ದೇಶಪಾಂಡೆ ವಾದ ಮಂಡಿಸಿದ್ದರು.


ಮ್ಯಾಗಿ ತನ್ನ ಮಗನ ಪರ ಮಾಡಿದ ವಕಾಲತ್ತು ಮತ್ತೂ ವಿಚಿತ್ರವಾಗಿತ್ತು, ತಾನು ಪಾರ್ಲಿಮೆಂಟಿಗೆ ಸ್ಪರ್ಧಿಸಿದಾಗೆಲ್ಲ ಮಗ ನಿವೇದಿತನೇ ಎಲೆಕ್ಷನ್ ಮ್ಯಾನೇಜರ್‌ನಾಗಿದ್ದರಿಂದ ಆತನಿಗೆ ಇಡೀ ಜಿಲ್ಲೆಯ ಪರಿಚಯವಿದೆ- ಎಂಬುದು ಮ್ಯಾಗಿ ಬಡಬಡಿಕೆಯಾಗಿತ್ತು.

ವಾಸ್ತವವೆಂದರೆ, ಮ್ಯಾಗಿ-ದೇಶಪಾಂಡೆಯ ಮಗ ಮಹಾರಾಯರಿಗಿಂತ ಹರಿಪ್ರಸಾದರೇ ಕೆನರಾ ಕಾಂಗ್ರೆಸ್‌ಗೆ ಹಲವು ರೀತಿಯಲ್ಲಿ- ಹಲವು ಕಾರಣಕ್ಕಾಗಿ ಯೋಗ್ಯ ಹುರಿಯಾಳು. ದೇಶಪಾಂಡೆ ಮಗ ಪ್ರಶಾಂತ್‌ಗೆ ಆಗಲಿ, ಮ್ಯಾಗಿ ಕುವರ ನಿವೇದಿತ್‌ಗೆ ಆಗಲಿ ಉತ್ತರ ಕನ್ನಡದ ಕಷ್ಟ-ಸುಖ ಗೊತ್ತಿಲ್ಲ, ಅದು ಅರ್ಥವಾಗುವ ಹುಡುಗರೂ ಅವರಲ್ಲ, ಅವರ ರಾಜಕಾರಣಕ್ಕೆ ಯಾವುದೇ ಸೈದ್ಧಾಂತಿಕ-ಜನಪರ ಬದ್ಧತೆಗಳಿಲ್ಲ, ಇರುವುದೊಂದೇ! ಅದು ಹೆತ್ತವರ ಪ್ರಭಾವಳಿ ಮಾತ್ರ!! ಪ್ರಶಾಂತನ ಅಪ್ಪ ಉತ್ತರ ಕನ್ನಡದವರಷ್ಟೆ. ಆದರೆ ಪ್ರಶಾಂತ್ ಹುಟ್ಟಿ ಬೆಳೆದದ್ದು ಜಿಲ್ಲೆಯ ಹೊರಗೇ. ಆತನ ವೃತ್ತಿಯೂ ರಾಜ್ಯದಿಂದಾಚೆಗೇ. ಈತನಿಗೆ ಸರಿಯಾಗಿ ಕನ್ನಡವೂ ಮಾತಾಡಲು ಬರುವುದಿಲ್ಲ, ಆತನ ತಂದೆಗೂ ಇವತ್ತಿಗೂ ಸರಿಯಾದ ಕನ್ನಡ ಉಚ್ಚಾರ ಬಾರದು, ಬಿಡಿ!



ಪ್ರಶಾಂತ್ ಹೇಗೆ ಅಪ್ಪನ ಕಳ್ಳ ಹಣದಲ್ಲಿ ಕಟ್ಟಿದ ಅಜ್ಜನ ಹೆಸರಿನ ಟ್ರಸ್ಟ್ ಮೂಲಕ 'ಹುಸಿ ಸೇವೆ' ಮಾಡುತ್ತ ಉತ್ತರ ಕನ್ನಡದಲ್ಲಿ ಓಡಾಡಿದ್ದಾನೋ, ಥೇಟ್ ಅದೇ ಥರ ನಿವೇದಿತನೂ ಅಮ್ಮನ ಅವ್ಯವಹಾರದ ಕಾಸಲ್ಲಿ ಚಾರಿಟಬಲ್ ಟ್ರಸ್ಟ್ ಒಂದನ್ನು ಮಾಡಿಕೊಂಡು ಅಂಡಲೆದಿದ್ದಾನಷ್ಟೇ. ಚಿತ್ರವಿಚಿತ್ರ ಶೋ ನೀಡಿ ಜನರಿಗೆ ಸ್ವಯಂ ಪರಿಚಯಿಸಿಕೊಳ್ಳಲು ತಿಪ್ಪರಲಾಗ ಹಾಕುತ್ತಿರುವ ಈ ಅಬ್ಬೇಪಾರಿಗಳಿಬ್ಬರೂ ಜಿಲ್ಲೆಗೆ ಆಗಂತುಕರೇ. ಜನ ಇವರನ್ನು ದೇಶಪಾಂಡೆ-ಮ್ಯಾಗಿಯ ಮಳ್ಳು ಮಕ್ಕಳೆಂದು ಗುರುತಿಸುತ್ತಾರೆಯೇ ಹೊರತು ತಮ್ಮ ಎಂಪಿ ಆಗುವ ಸಾಮರ್ಥ್ಯ-ಸಜ್ಜನಿಕೆ-ಜನಪರ ತುಡಿತದ ಮುಖಂಡರೆಂದು ಭಾವಿಸಲೇ ಇಲ್ಲ!! ಸಂಸದನಾಗುವ ದುರಾಸೆಯ ಈ ಉಂಡಾಡಿ ಪೋರರು ಜಿಲ್ಲೆಯ ಬೇಕು-ಬೇಡ, ಆಗು-ಹೋಗು, ಕಷ್ಟ-ಸುಖದ ಬಗ್ಗೆ ಈವರೆಗೆ ಒಂದೇ ಒಂದು

⏭ 09



ಶಿವಣ್ಣನ ಜೆಡಿಎಸ್ ಲೆಕ್ಕಾಚಾರ

ಬಿಜೆಪಿಯ ಗರ್ಭಗುಡಿ ಸಂಸ್ಕೃತಿ ಹಿಂದುಳಿದವರನ್ನು ಹೇಗೆ ಸ್ವಯಂ ಕತ್ತು ಕೊಯ್ದುಕೊಂಡು ಸಾಯುವಂತೆ ಮಾಡುತ್ತದೆಂಬುದಕ್ಕೆ ಮಾಜಿ ಮಂತ್ರಿ ಶಿವಾನಂದ ನಾಯ್ಕ ಜೀವಂತ ನಿದರ್ಶನ! ಒಂದು ಕಾಲದಲ್ಲಿ ಮೀನಿನ ಲಾರಿ ಡ್ರೈವರ್ ಆಗಿದ್ದ ದೀವರ ಧೀರ ಶಿವಾನಂದ ನಾಯ್ಕ ಭಟ್ಕಳದ ಕೋಮು ದಳ್ಳುರಿಯ ಬೈ-ಪ್ರಾಡಕ್ಟ್. ಶಾಸಕನಾಗಿದ್ದ ಚಿತ್ತರಂಜನ್ ಕೋಮು ಹುಲಿ ಸವಾರಿ ಮಾಡಿ ಹತನಾದಾಗ ಅನುಕಂಪದಲ್ಲಿ ಶಾಸಕರಾದವರು ಇದೇ ಶಿವಣ್ಣ. ಬಿಜೆಪಿಯ ಬ್ರಾಹ್ಮಣ ಬಾಸ್‌ಗಳು ಶಿವಣ್ಣನನ್ನು ಹೇಗೆ ಬೇಕೋ ಹಾಗೆ ಬಳಸಿಕೊಂಡು ಶೂದ್ರರ ಬೆಂಬಲ ಪಡೆದರು. ಆತನಿಂದ ಮಾಡಬಾರದ್ದೆಲ್ಲ ಮಾಡಿಸಿ ಅದರ ಲಾಭ ತಾವುಂಡರು.

ಯಾವಾಗ ಶಿವಣ್ಣ 'ಕೋಜಾ' ಸರ್ಕಾರದಲ್ಲಿ ಮಂತ್ರಿಯಾದನೋ ಆಗ ವಿಪ್ರರಿಗೆ ಸಹಿಸಲಾಗಲಿಲ್ಲ, ಆತನ ಹಣಿಯಲು ಹವಣಿಸಿದರು. ಇದಕ್ಕೆ ಪ್ರತಿಯಾಗಿ ಶಿವಣ್ಣ ಸ್ವ-ಜಾತಿ ದೀವರ ಸಂಘಟನೆಗೆ ಇಳಿದರು. ಜಿಲ್ಲೆಯ ಲಾಗಾಯ್ತಿನ ಬ್ರಾಹ್ಮಣ V/s ದೀವರು ರಾಜಕೀಯಕ್ಕೆ ಹೊಸ ಕಿಚ್ಚು ಬಂತು. ಮರು ಎಲೆಕ್ಷನ್‌ನಲ್ಲಿ ದೀವರೇತರ ಶೂದ್ರರ ಎತ್ತಿಕಟ್ಟಿದ ಬ್ರಾಹ್ಮಣ ಮುಂದಾಳುಗಳಾದ ಅನಂತ್ಮಾಣಿ, ಕಾಗೇರಿ, ಮಾಣಿ, ಕರ್ಕಿ... ವಗೈರೆಗಳು ಶಿವಣ್ಣನನ್ನು ಸೋಲಿಸಿದರು. ಕಳೆದ ಅಸೆಂಬ್ಲಿ ಎಲೆಕ್ಷನ್ ಹೊತ್ತಲ್ಲಿ ಕೆಜೆಪಿ ಸೇರಿದ್ದ ಶಿವಣ್ಣ ಈಗ ಮತ್ತೆ ಬಿಜೆಪಿಗೆ ಹೋಗಲು ಸಿದ್ಧನಿಲ್ಲ, ಕಳೆದ ಅಸೆಂಬ್ಲಿ ಎಲೆಕ್ಷನ್ ಹೊತ್ತಲ್ಲಿ ಕಾಂಗ್ರೆಸ್ ಸೇರಲು ಪ್ರಯತ್ನಿಸಿದ್ದ ಶಿವಣ್ಣನಿಗೆ ಆಗ ಮ್ಯಾಗಿ ಮನುಷ್ಯನೆಂದು ಅಡ್ಡ ಬಂದವನು ದೇಶಪಾಂಡೆ ಸಾಹೇಬ. ದೇಶಪಾಂಡೆಯ ಬ್ರಾಹ್ಮಣ ಪ್ರಜ್ಞೆಯೇ ಶಿವಣ್ಣನಿಗೆ ಗಂಡಾಂತರಕಾರಿ ಆಗಿತ್ತು.

ಶಿವಣ್ಣನಿಗೆ ಮಾಜಿ ಗುರು ಅನಂತ್ಮಾಣಿಯಷ್ಟೇ ಸಿಟ್ಟು ದೇಶಪಾಂಡೆ ಮೇಲಿದೆ. ಹಾಗಾಗಿ ಆತ ಹಿಂದಿನ ಸೇಡು ತೀರಿಸಿಕೊಳ್ಳಲು ಸ್ಕೆಚ್ ಹಾಕಿದ್ದಾರೆ. ಒಮ್ಮೆ ದೇಶಪಾಂಡೆ ಮಗ ಪ್ರಶಾಂತ್ ಕಾಂಗ್ರೆಸ್ ಕ್ಯಾಂಡಿಡೇಟಾದರೆ ಶಿವಣ್ಣ ಜೆಡಿಎಸ್ ಉಮೇದುದಾರನಾಗಲು ನಿರ್ಧರಿಸಿದ್ದಾರೆ. ಮೇಲ್ವರ್ಗದ ವೈರಿಗಳಾದ ಅನಂತ್ಮಾಣಿ ಮತ್ತು ದೇಶಪಾಂಡೆ ಇಬ್ಬರಿಗೂ ತೊಂದರೆ ಕೊಡುವ ಉದ್ದೇಶ ಆತನದು. ಆತ ಖಾನಾಪುರದಿಂದ ಸಿದ್ದಾಪುರದವರೆಗೆ ಒಂದು ರೌಂಡು ಹಾಕಿ ಬಂದಿದ್ದಾರೆ. ಜೆಡಿಎಸ್‌ನಿಂದ ನಿಂತರೆ ಗೆಲ್ಲುವ ಅವಕಾಶ ಇದೆಯಾ ಎಂಬ ಸರ್ವೆ ಮಾಡಿದ್ದಾರೆ.

ಶಿವಣ್ಣನಿಂದ ಅನಂತ್ಮಾಣಿ ಮತ್ತು ದೇಶಪಾಂಡೆಯನ್ನು ಆತಂಕಕ್ಕೆ ಸಿಲುಕಿಸಲು ಸಾಧ್ಯವೇ ಹೊರತು ಜೆಡಿಎಸ್‌ನಿಂದ ಎಂಪಿಯಾಗಲು ಸಾಧ್ಯವೇ ಇಲ್ಲ. ಆತನ ಸ್ವಜಾತಿ ದೀವರ ಮತವಿರುವುದು ನಾಲ್ಕು ಅಸೆಂಬ್ಲಿ ಸೆಗ್ಮೆಂಟುಗಳಲ್ಲಿ ಮಾತ್ರ. ಅದರಲ್ಲೂ ಯಲ್ಲಾಪುರ ಕ್ಷೇತ್ರದಲ್ಲಿ ಸಣ್ಣ ಪ್ರಮಾಣದಲ್ಲಿದ್ದಾರೆ. ದೀವರು ಸಾರಾಸಗಟಾಗಿ ಶಿವಣ್ಣನಿಗೆ ಮತ ಒತ್ತಿದ್ದರೂ ಅದಷ್ಟೇ ಗೆಲುವಿಗೆ ಸಾಕಾಗದು. ಹಾಗೆಯೇ ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಜೆಡಿಎಸ್ ಕುಮಟಾ-ಭಟ್ಕಳ-ಯಲ್ಲಾಪುರ ಮತ್ತು ಶಿರಸಿ ಕ್ಷೇತ್ರದಲ್ಲಿ ಪಡೆದ ದೊಡ್ಡ ಮಟ್ಟದ ಓಟುಗಳನ್ನು ಶಿವಣ್ಣ ನಂಬುವಂತಿಲ್ಲ. ಇವೆಲ್ಲ ಜೆಡಿಎಸ್‌ನ ಕುಮಾರಸ್ವಾಮಿ ಅಥವಾ ದೊಡ್ಡ ಗೌಡರ ಮುಖ ನೋಡಿ ಬಂದ ಮತಗಳಲ್ಲ, ಆಗ ಅಸೆಂಬ್ಲಿಗೆ ಸ್ಪರ್ಧಿಸಿದ್ದ ಜೆಡಿಎಸ್‌ನ ಕ್ಯಾಂಡಿಡೇಟ್‌ಗಳ ವೈಯಕ್ತಿಕ ತಾಕತ್ತಿನ ಓಟುಗಳವು.

ಅಕಸ್ಮಾತ್ ಹರಿಪ್ರಸಾದ್ ಕಾಂಗ್ರೆಸ್ ಕ್ಯಾಂಡಿಡೇಟಾದರೆ ಶಿವಣ್ಣ ಪಾರ್ಲಿಮೆಂಟ್ ಫೈಟಿಂಗ್‌ಗೆ ಇಳಿಯದಿರಲು ತೀರ್ಮಾನಿಸಿದ್ದಾರೆ. ಆಗಾತ ಮತ್ತೆ ಕಾಂಗ್ರೆಸ್ ಸೇರುವ ಹೊಸ ಪ್ರಯತ್ನ ಹರಿ ಮೂಲಕವೇ ಮಾಡುವುದು ಗ್ಯಾರಂಟಿ. ಒಟ್ಟಿನಲ್ಲಿ ಮಾಜಿ ಡ್ರೈವರ್-ಮಾಜಿ ಮಂತ್ರಿ ಶಿವಣ್ಣನ ತೊಳಲಾಟ ಹೇಳತೀರದು. ಇದು ಶೂದ್ರರ ಮೇಲಾಗುವ ಹಿಂದೂತ್ವದ ಸೈಡ್‌ಎಫೆಕ್ಟ್! ಸದ್ಯಕ್ಕೆ ಕೆಜೆಪಿಯಲ್ಲಿರುವ ಈ ಯಡ್ಡಿ ಅನುಯಾಯಿ ಕಾಂಗ್ರೆಸ್ ಸೇರಲಾಗದೆ, ಜೆಡಿಎಸ್‌ಗೆ ಹೋಗುವ ಮನಸ್ಸಿಲ್ಲದೆ, ಬಿಜೆಪಿ ಮುಗಿಸಲಾಗದೆ ಚಡಪಡಿಸುವುದು ಒಂಥರಾ ಪಾಲಿಟಿಕಲ್ ಹಾರರ್ ಶೋ ನಂತಿದೆ!!

ಸಾಹಿತ್ಯ ಸಮ್ಮೇಳನದಲ್ಲೂ ಚೆಡ್ಡಿಗಳ ಗೂಂಡಾಗಿರಿ


ಬಿಜೆಪಿಗಳ ದಬ್ಬಾಳಿಕೆಗಳು ಸಾಹಿತ್ಯ ಸಮ್ಮೇಳನದ ವೇಳೆಯಲ್ಲಿಯೂ ನಡೆಯಿತು. ಮೊದಲು ಕೋ. ಚೆನ್ನಬಸಪ್ಪರವರ ಮೇಲೆ ಸವಾರಿ ನಡೆಯಿತು. ನಂತರ ಸಮ್ಮೇಳನಾಧ್ಯಕ್ಷ ನಾ.ಡಿಸೋಜರವರು ಆಡದ ಮಾತಿಗೆ ಕ್ಷಮೆಯಾಚಿಸಬೇಕು ಎಂಬ ಒತ್ತಡವನ್ನು ಹೇರಲಾಯಿತು. ಅಷ್ಟು ಮಾತ್ರವಲ್ಲ ಡಾ.ಕಸ್ತೂರಿ ರಂಗನ್ ಸಮಿತಿ ವರದಿಯನ್ನು ವಿರೋಧಿಸಿ, ಸಾಹಿತ್ಯ ಸಮ್ಮೇಳನದಲ್ಲಿ ನಿರ್ಣಯವನ್ನು ಕೈಗೊಳ್ಳಬೇಕು ಎಂಬ ಧಮಕಿಯನ್ನು ಹಾಕಲಾಯಿತು.

ಇದೆಲ್ಲದರ ಫಲವಾಗಿ ಬಹಿರಂಗ ಅಧಿವೇಶನ ನಡೆಯುವ ವೇಳೆಯಲ್ಲಿ ಸಾಹಿತ್ಯ ಸಮ್ಮೇಳನ ನಡೆಯುತ್ತಿದ್ದ ಸ್ಥಳದಲ್ಲಿ ಪೊಲೀಸ್ ಅಧಿಕಾರಿಗಳ ವಾಹನಗಳು, ಪೊಲೀಸ್ ವ್ಯಾನ್‌ಗಳು, ಬ್ಯಾರಿಕ್ಯಾಡ್‌ಗಳು ಕಂಡುಬಂದವು. ಒಂದು ರೀತಿಯ ಭಯದ ವಾತಾವರಣವನ್ನು ಸಾಹಿತ್ಯ ಸಮ್ಮೇಳನದಲ್ಲಿಯೂ ಬಿಜೆಪಿಯವರು ಸೃಷ್ಟಿಸಿದ್ದರು.

ಕನ್ನಡ ಸಾರಸ್ವತಲೋಕ ಚೆಡ್ಡಿಗಳ ಈ ದಬ್ಬಾಳಿಕೆಯನ್ನು ಸಹಿಸಿಕೊಂಡು ಮೌನದಿಂದ ಇದದ್ದು ದುರಂತವೇ ಸರಿ.

ಸುಜಾಕುಶಾಲಪ್ಪ ಮೇಲೆ ಗುಂಡು:

ಭೂಗತ ಪಾತಕದಲ್ಲಿನ ಯುದ್ಧದ ಪ್ರತಿಫಲ



ಕೊಡಗು ಜಿಲ್ಲಾ ಬಿಜೆಪಿ ಅಧ್ಯಕ್ಷ ಸುಜಾಕುಶಾಲಪ್ಪನವರ ಮೇಲೆ ದುಷ್ಕರ್ಮಿಗಳು ರಿವಾಲ್ವರ್‌ನಿಂದ ಗುಂಡು ಹಾರಿಸಿ ಕೊಲೆಗೆ ಯತ್ನ ನಡೆಸಿದ್ದು ರಾಜಕೀಯಪ್ರೇರಿತ ಕ್ರಿಯೆಯಲ್ಲಿ, ಬದಲಾಗಿ ಇದು ಭೂಗತ ಲೋಕದ ಎರಡು ಗುಂಪುಗಳ ನಡುವಿನ ವೈಷಮ್ಯದ ಪ್ರತಿಫಲ ಎಂಬ ಮಾತು ಈಗ ಜಿಲ್ಲೆಯಾದ್ಯಂತ ಹಬ್ಬಿದೆ.

ಸುಜಾಕುಶಾಲಪ್ಪನವರ ಮೇಲೆ ಗುಂಡು ಹಾರಿಸಿದ್ದು ಖಂಡಿತವಾಗಿಯೂ ಪರಿಣಿತರೋ ಅಥವಾ ಶಾರ್ಪ್‌ಶೂಟರ್‌ಗಳಾದ ನಿಪುಣ ಗುರಿಕಾರರೋ ಆಗಿರಲಿಕ್ಕಿಲ್ಲ. ಹಾಗಾಗಿ ಯಾವುದೇ ಅಪಾಯವಿಲ್ಲದೆ ಸುಜಾಕುಶಾಲಪ್ಪ ಪಾರಾಗಿದ್ದಾರೆ.

ಇದು ರಾಜಕೀಯ ವೈಷಮ್ಯದಿಂದ ನಡೆದಂತಹ ಘಟನೆಯಲ್ಲ, ಏಕೆಂದರೆ ಅಂತಹ ಯಾವುದೇ ಚಮತ್ಕಾರಗಳು ರಾಜಕೀಯವಾಗಿ ಮಾಡಬಲ್ಲ ವ್ಯಕ್ತಿ ಸುಜಾಕುಶಾಲಪ್ಪ ಅಲ್ಲ. ಶಾಸಕ ಅಪ್ಪಚ್ಚು ರಂಜನ್‌ರವರ ಸಹೋದರ ಈತ ಎಂಬುದು ಗಮನಾರ್ಹ. ಕೊಡಗಿನ ಬಿಜೆಪಿ ಇವರ ಕಪಿಮುಷ್ಠಿಯಲ್ಲಿಯೇ ಇದೆ. ಮತ್ತೊಬ್ಬ ಸಹೋದರ ಸುನಿಲ್ ಸುಬ್ರಹ್ಮಣಿ ರಾಜ್ಯ ಸಮಿತಿಯಲ್ಲಿ ಇದ್ದಾರೆ. ಈ ಮೂವರು ಸಹೋದರರು ಕೊಡಗು ಜಿಲ್ಲೆಯ ಮೂರು ತಾಲೂಕುಗಳಾದ ವಿರಾಜಪೇಟೆ, ಮಡಿಕೇರಿ ಹಾಗೂ ಸೋಮವಾರಪೇಟೆಗಳನ್ನು ಹಂಚಿಕೊಂಡಿದ್ದಾರೆ. ಬಿಜೆಪಿ ಇವರ ಪಿತ್ರಾರ್ಜಿತ ಆಸ್ತಿ ಎನ್ನುವಂತೆ ಇದೆ. ಸುಜಾಕುಶಾಲಪ್ಪನವರ ಪುತ್ರ ಶಶಾಂಕ್‌ಗೆ ಇನ್ನೂ ರಾಜಕೀಯದ ಓಂಕಾರ ತಿಳಿಯದಿದ್ದರೂ, ಯುವ ಮೋರ್ಚಾದಲ್ಲಿ ರಾಜ್ಯ ಸಮಿತಿಯ ಸದಸ್ಯ. ಹೀಗೆ ಕೊಡಗು ಜಿಲ್ಲೆಯನ್ನು ತಮ್ಮ ಹಿಡಿತದಲ್ಲೇ ಇಟ್ಟುಕೊಂಡಿರುವ ಇವರನ್ನು ಕೊಡಗು ಜಿಲ್ಲೆಯ ರೆಡ್ಡಿ ಸಹೋದರರು ಎಂದೇ ಕರೆಯುತ್ತಾರೆ.

ಹಲವು ದಂಧೆಗಳಲ್ಲಿ ಸುಜಾಕುಶಾಲಪ್ಪನವರ ಹೆಸರು ಕೇಳಿಬರುತ್ತದೆ. ಈ ಹಿಂದೆ ಸಾರಾಯಿ ದಂಧೆಯನ್ನು ಕೂಡ ನಡೆಸುತ್ತಿದ್ದರು. ಅಲ್ಲದೆ ಹಲವಾರು ಇತರೇ ಚಟುವಟಿಕೆಗಳು ಇವರಿಗೆ ಇದೆ ಎಂಬುದು ಜನವಲಯದಲ್ಲಿ ಚರ್ಚಿತ ವಿಚಾರ. ಎಷ್ಟು ದಂಧೆಗಳಿವೆಯೋ ಅಷ್ಟೇ ಶತ್ರುಗಳು ಇವರಿಗೆ ಇದ್ದಾರೆ ಎಂಬುದು ಕೂಡ ಸತ್ಯ. ತಮ್ಮ ದಂಧೆಗಳ ರಕ್ಷಣೆಗೆ ಅವರಿಗೆ ರಾಜಕೀಯ ಕವಚವಾಗಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಸ್ಥಾನ ಇದೆ. ಹಾಗಾಗಿ ಪೊಲೀಸರಿಗೆ ಕೂಡ ಈ ಘಟನೆ ಸವಾಲಾಗಿದೆ. ಸ್ವತಃ ಪೊಲೀಸ್ ವರಿಷ್ಠಾಧಿಕಾರಿ ಸುಚೇತ್ ಅವರೇ ಇದರ ತನಿಖೆಯ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಅವರಿಗೂ ಕೂಡ ಈ ಪ್ರಕರಣ ಸವಾಲು ಎನ್ನುವುದಕ್ಕಿಂತ ತಲೆನೋವಾಗಿ ಪರಿಣಮಿಸಿದೆ. ಏಕೆಂದರೆ ಇದರ ತನಿಖೆ ಎಲ್ಲಿಂದ ಪ್ರಾರಂಭಿಸಬೇಕು ಎಂಬುದು ಅವರಿಗೆ ತಿಳಿಯುತ್ತಿಲ್ಲ, ಅಷ್ಟೊಂದು ಗೋಜಲಾಗಿದೆ ಈ ಪ್ರಕರಣ.

ವಿರಾಜಪೇಟೆಯಲ್ಲಿ ಇತ್ತೀಚೆಗೆ ಯುವಕನೊಬ್ಬನ ಕೊಲೆಯಾಗಿತ್ತು. ಆ ವೇಳೆಯಲ್ಲಿ ಕೊಲೆಯ ಎಫ್.ಐ.ಆರ್.ನಲ್ಲಿ ಆರನೇ ಆರೋಪಿಯಾಗಿ ಸುಜಾಕುಶಾಲಪ್ಪನವರ ಹೆಸರು ಇತ್ತು. ಇದರ ತನಿಖೆಯ ಕಾರ್ಯ ಇನ್ನೂ ಮುಗಿದಿಲ್ಲ. ಕಳೆದ ಕೆಲವು ಸಮಯದಿಂದ ದಕ್ಷಿಣ ಕೊಡಗಿನಲ್ಲಿ ಒಂದಷ್ಟು ಕೊಲೆಗಳು ನಡೆದಿದ್ದು, ಇವುಗಳ ತನಿಖೆ ಸರಿಯಾಗಿ ನಡೆದಿಲ್ಲ ಎಂಬುದರಲ್ಲಿ ಸತ್ಯಾಂಶವಿದೆ. ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಅಬ್ದುಲ್ ಲತೀಫ್‌ರವರ ಕೊಲೆ ಪ್ರಕರಣ ನಿಗೂಢವಾಗಿಯೇ ಇದೆ. ಪೊಲೀಸರು ಇಲ್ಲಿ ತಿಪ್ಪೆಸಾರಿಸಿದ್ದಾರೆ. ಹಾಗಾಗಿ ಈ ಪ್ರಕರಣದ ತನಿಖೆ ಸರಿಯಾಗಿ ನಡೆಯುತ್ತದೋ ಎಂಬ ಸಂಶಯ ಹಲವರಲ್ಲಿ ಇದ್ದರೆ, ತನಿಖೆ ಸರಿಯಾಗಿ ನಡೆದರೆ ಸಾಕಷ್ಟು ವಿಚಾರಗಳು ಹೊರ ಬೀಳಬಹುದು ಎಂಬ ವಿಶ್ವಾಸ ಹಲವರಲ್ಲಿ ಇದ್ದು, ಚಾತಕಪಕ್ಷಿಗಳಂತೆ ಕಾಯುತ್ತಿದ್ದಾರೆ.



ಕೊಲೆ ಯತ್ನ ನಡೆದ ವಿರಾಜಪೇಟೆ ನಗರದ ಪ್ರಮುಖ ಬೀದಿ.

ಸತ್ಯ ವಿಚಾರ ಖಂಡಿತವಾಗಿಯೂ ಹೊರಬರುವುದಿಲ್ಲ ಎಂಬುದು ಬಹಳಷ್ಟು ಮಂದಿಗೆ ತಿಳಿದಿದೆ. ಸತ್ಯ ಹೊರಬಂದರೆ ಕೇವಲ ನಿಜವಾದ ಆರೋಪಿಗಳು ಮಾತ್ರವಲ್ಲ, ಈ ಹಿಂದಿನ ಪ್ರಕರಣಗಳಲ್ಲಿ ಶಾಮೀಲಾಗಿದ್ದಂತಹ ವ್ಯಕ್ತಿಗಳು ಮತ್ತು ಅವರ ಬೆಂಬಲಕ್ಕೆ ನಿಂತಿದ್ದಂತಹ ಅಧಿಕಾರಿಗಳು ಒಟ್ಟಾಗಿ ಮುದ್ದೆ ಮುರಿಯಬೇಕಾದಂತಹ ಪ್ರಸಂಗ ಬರಬಹುದು. ಹಿಂದೆ ಜಿಲ್ಲೆಯಲ್ಲಿ ಕೆಲಸ ಮಾಡಿದ ಹಲವು ಪೊಲೀಸ್ ಅಧಿಕಾರಿಗಳು ತನಿಖೆಗೆ ಒಳಪಡಬೇಕಾಗಬಹುದು.

ಬಿಜೆಪಿ ಸರಕಾರವಿದ್ದಾಗ ಪೊಲೀಸ್ ವ್ಯವಸ್ಥೆ ಹೇಗಿತ್ತು ಎಂದರೆ, ಕುಟ್ಟ ಎಂಬ ಪ್ರದೇಶದ ತಾಲೂಕು ಪಂಚಾಯತಿ ಸ್ಥಾನಕ್ಕೆ ನಡೆದ ಉಪಚುನಾವಣೆಯ ವೇಳೆಯಲ್ಲಿ ಹಣ, ಹೆಂಡ ಎಲ್ಲವೂ ಪೊಲೀಸ್ ಜೀಪಿನಲ್ಲಿಯೇ ಸಾಗಾಟವಾಗಿ ಹಂಚಲ್ಪಟ್ಟಿತ್ತು. ಇದರಿಂದಾಗಿ ಕಾಂಗ್ರೆಸಿನ ಭದ್ರಕೋಟೆಯಾಗಿದ್ದ ಕುಟ್ಟ ಬಿಜೆಪಿ ಪಾಲಾಗಿತ್ತು. ಈಗ ಸರಕಾರ ಬದಲಾದರೂ ಪರಿಸ್ಥಿತಿಯೇನೂ ಬದಲಾಗಿಲ್ಲ, ಏಕೆಂದರೆ ಪೊಲೀಸರಿಗೆ ಕಪ್ಪಕಾಣಿಕೆ ಇವರಿಂದ ಸಿಗುತ್ತದೆಯೇ ವಿನಃ, ಯಾವುದೇ ರೀತಿಯ ದೊಡ್ಡ ಪ್ರಮಾಣದ ಅಕ್ರಮಗಳನ್ನು ಮಾಡದ ಕಾಂಗ್ರೆಸಿಗರಿಂದ ಸಿಗುವುದಿಲ್ಲ.

ಕೊಡಗಿನ ಗಡಿ ಭಾಗ ಮಾಕುಟ್ಟದಲ್ಲಿ ಮದ್ಯದ ಅಂಗಡಿ ಮತ್ತು ಕ್ಲಬ್ಬು ಬಿಜೆಪಿಯ ಕೃಪಾಕಟಾಕ್ಷದಿಂದ ರಾಜಾರೋಷವಾಗಿ ನಡೆಯುತ್ತಿತ್ತು, ಅಲ್ಲದೆ ಜಿಲ್ಲೆಯ ಹಲವು ಭಾಗಗಳಲ್ಲಿ ಕ್ಲಬ್ಬುಗಳು, ಅಕ್ರಮ ದಂಧೆಗಳು ನಡೆಯುತ್ತಿತ್ತು, ಇದರಲ್ಲಿ ಯಾರ್‍ಯಾರು ಪಾಲುದಾರರು ಹಾಗೂ ಯಾವ ರಾಜಕೀಯ ಪಕ್ಷದವರು ಪಾಲುದಾರರು ಎಂಬುದು ಬ್ರಹ್ಮನಿಗೂ ತಿಳಿದಿರಲಿಕ್ಕಿಲ್ಲ.

ಕೊಲೆ ಯತ್ನ ನಡೆದ ಕೂಡಲೇ ಜಿಲ್ಲೆಯಲ್ಲಿ ಬಿಜೆಪಿ ತನ್ನ ಎಂದಿನ ಮಿತಿಮೀರಿದ ದುಂಡಾವರ್ತನೆಯನ್ನು ತೋರಿತು. ಮುಂದಿನ ದಿನವೇ ಜಿಲ್ಲಾ ಬಂದ್‌ಗೆ ಕರೆ ಕೊಟ್ಟಿತು. ಜಿಲ್ಲೆಯ ಹೊರಭಾಗದಲ್ಲಿ ಇರುವ ವಿವಿಧ ಗೇಟ್‌ಗಳಿಗೆ ಬಿಜೆಪಿ ಕಾರ್ಯಕರ್ತರು ಬೀಗ ಜಡಿದಿದ್ದರು ಮತ್ತು ರಸ್ತಾ ರೋಖೋ ಮಾಡಿದ್ದರು. ಪೊಲೀಸರು ಸ್ಥಳದಲ್ಲೇ ಇದ್ದರೂ ಕೂಡ ಅವರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಬಿಜೆಪಿ ಸರಕಾರವಿದ್ದಾಗ, ಬೇರೆ ಯಾವುದೇ ಪಕ್ಷಗಳು ಪ್ರತಿಭಟನೆಗಳನ್ನು ನಡೆಸಿದರೆ ಅವರ ಮೇಲೆ ಕೇಸು ಜಡಿಯಲಾಗುತ್ತಿತ್ತು. ಕಾಂಗ್ರೆಸ್ ಸರಕಾರ ನಿರ್ವೀರ್ಯರಂತೆ ವರ್ತಿಸುತ್ತಿದೆ. ಬಂದ್ ದಿನ ಅಲ್ಲಲ್ಲಿ ಮುಸ್ಲಿಂರ ಮೇಲೆ ಹಲ್ಲೆ ಮತ್ತು ಮುಸ್ಲಿಂ ಅಂಗಡಿಗಳ ಮೇಲೆ ಹಲ್ಲೆ ನಡೆದಿದೆ. ಜಿಲ್ಲೆಯ ಪ್ರಮುಖ ಪಟ್ಟಣಗಳಲ್ಲಿ ರಸ್ತೆ ತಡೆಯಲಾಗಿದೆ. ಯಾವುದಕ್ಕೂ ಜಿಲ್ಲಾಡಳಿತ ಕ್ರಮ ತೆಗೆದುಕೊಳ್ಳಲಿಲ್ಲ. ಮಾತ್ರವಲ್ಲ ಶಾಲಾಕಾಲೇಜುಗಳಿಗೆ ರಜೆ ಘೋಷಿಸಲ್ಪಟ್ಟಿತ್ತು. ಬ್ಯಾಂಕುಗಳು ಮತ್ತು ಕಚೇರಿಗಳು ಮುಚ್ಚಲ್ಪಟ್ಟಿದ್ದವು. ಅಷ್ಟರ ಮಟ್ಟಿಗೆ ದಬ್ಬಾಳಿಕೆ ನಡೆಯಿತು.

ಪ್ರತಿಭಟನಾ ಮೆರವಣಿಗೆಯಲ್ಲಿ ಕೂಗುತ್ತಿದ್ದ ಘೋಷಣೆಯೊಂದು ಮತ್ತಷ್ಟು ತಮಾಷೆಯಾಗಿತ್ತು. ಹೇಗೆ ಮೋದಿ ಪರ ಪ್ರಚಾರದಲ್ಲಿ ಭಾರತಕ್ಕಾಗಿ ಮೋದಿಯನ್ನು ಚುನಾಯಿಸಿ ಎಂಬ ಘೋಷಣೆಯನ್ನು ಕೂಗುತ್ತಿದ್ದಾರೋ, ಅದೇ ರೀತಿ "ಬಂಧಿಸಿ, ಬಂಧಿಸಿ, ದೇಶಕ್ಕಾಗಿ ಬಂಧಿಸಿ, ಸುಜಾಕುಶಾಲಪ್ಪರವರ ಮೇಲೆ ಕೊಲೆ ಯತ್ನ ನಡೆಸಿದವರನ್ನು ಬಂಧಿಸಿ" ಎಂಬ ಘೋಷಣೆಯನ್ನು ಹಾಕುತ್ತಿದ್ದರು.

ಬಿಜೆಪಿ ಅಧ್ಯಕ್ಷರಾದ ಸುಜಾಕುಶಾಲಪ್ಪನವರ ಮೇಲೆ ನಡೆದಂತಹ ಕೊಲೆ ಯತ್ನ ಭಯೋತ್ಪಾದನೆ ಮತ್ತು ಉಗ್ರಗಾಮಿಗಳ ಕೃತ್ಯ ಎಂದು ವಿಧಾನಸಭೆಯ ಮಾಜಿ ಅಧ್ಯಕ್ಷ, ಶಾಸಕ ಕೆ.ಜಿ.ಬೋಪಯ್ಯ ಆರೋಪಿಸಿದ್ದಾರೆ. ಐದು ವರ್ಷಗಳ ಕಾಲ ರಾಜ್ಯದ ಒಂದು ಉನ್ನತ ಸ್ಥಾನವನ್ನು ಅಲಂಕರಿಸಿದ ವ್ಯಕ್ತಿಯೊಬ್ಬರು ಇಷ್ಟೊಂದು ಬೇಜವಾಬ್ದಾರಿಯಿಂದ ಮಾತನಾಡುತ್ತಿರುವುದು ಸೋಜಿಗದ ಅಂಶವಾಗಿದೆ.


ಬಿಜೆಪಿ ಅಧ್ಯಕ್ಷರ ಮೇಲೆ ರಿವಾಲ್ವರ್‌ನಿಂದ ಕೊಲೆ ಯತ್ನ ನಡೆದಾಗ, ಅಧ್ಯಕ್ಷ ಸುಜಾಕುಶಾಲಪ್ಪ ಪ್ರತಿದಾಳಿಯನ್ನು ತಮ್ಮ ರಿವಾಲ್ವರ್‌ನಿಂದ ಮಾಡಿದ್ದಾರೆ. ಸುಜಾಕುಶಾಲಪ್ಪ ರಿವಾಲ್ವರನ್ನು ಏತಕ್ಕಾಗಿ ಹೊತ್ತು ನಡೆಯುತ್ತಿದ್ದರು ಎಂಬುದು ಈಗ ಚರ್ಚೆಯ ವಿಚಾರವಾಗಿದೆ. ಅವರಿಗೆ ಪ್ರಾಣಾಪಾಯದ ಸೂಚನೆ ಇದ್ದ ಕಾರಣಕ್ಕಾಗಿ ಮಾತ್ರ ರಿವಾಲ್ವರ್ ಹೊತ್ತು ನಡೆಯುತ್ತಿದ್ದರು ಎನ್ನುವುದು ಸತ್ಯ. ಕೊಡಗಿನಲ್ಲಿ ಕಾಂಗ್ರೆಸ್, ಜೆಡಿಎಸ್, ಕಮ್ಯೂನಿಸ್ಟ್ ಪಕ್ಷದ ನಾಯಕರು ಹಾಗೂ ಅಧ್ಯಕ್ಷರುಗಳು ಇದ್ದಾರೆ. ಅವರ್‍ಯಾರೂ ರಿವಾಲ್ವರ್ ಇಟ್ಟುಕೊಳ್ಳುತ್ತಿಲ್ಲ, ಅಷ್ಟೇಕೆ, ಫಯರ್ ಬ್ರಾಂಡ್ ರಾಜಕಾರಣಿ ಎ.ಕೆ.ಸುಬ್ಬಯ್ಯ ಕೂಡ ರಿವಾಲ್ವರ್ ಇಟ್ಟುಕೊಳ್ಳುವುದಿಲ್ಲ. ಎಂ.ಸಿ.ನಾಣಯ್ಯ ಸೇರಿದಂತೆ ಸ್ವತಃ ಕೆ.ಜಿ. ಬೋಪಯ್ಯ ಅಪ್ಪಚ್ಚು ರಂಜನ್ ಕೂಡ ರಿವಾಲ್ವರ್ ಇಟ್ಟುಕೊಂಡಿಲ್ಲ. ಅಂದಮೇಲೆ ಈ ಕೊಲೆ ಯತ್ನ ಖಂಡಿತವಾಗಿಯೂ ರಾಜಕೀಯಪ್ರೇರಿತ ಅಲ್ಲ ಎಂಬುದು ಖಚಿತವಾಗುತ್ತದೆ. ಇದು ಭೂಗತ ಪಾತಕಿಗಳ ಎರಡು ಗುಂಪಿನ ನಡುವಿನ ಕಾಳಗ ಎನ್ನುವುದರಲ್ಲಿ ಅನುಮಾನವಿಲ್ಲ.

ಇದನ್ನು ಮಟ್ಟ ಹಾಕಬೇಕಾದ ಕಾಂಗ್ರೆಸ್ ಸರಕಾರ ನಿರ್ವೀರ್ಯರಾಗಿರುವುದು ಮತ್ತು ಈಗಲೂ ಭ್ರಷ್ಟ ಅಧಿಕಾರಿಗಳನ್ನು ಪೋಷಿಸುತ್ತಿರುವುದು ಗಮನಿಸಿದರೆ, ಬಿಜೆಪಿಯೇ ಹಿಂಬಾಗಿಲಿನಿಂದ ಆಡಳಿತ ನಡೆಸುತ್ತಿದೆಯೋ ಎಂಬ ಸಂಶಯ ಬರುತ್ತದೆ.

● ವರದಿಗಾರ


ಚೆಡ್ಡಿಗಳ ಕಿರುಕುಳ

ಸುಜಾಕುಶಾಲಪ್ಪನವರ ಮೇಲಿನ ಕೊಲೆ ಯತ್ನ ನಡೆದಾಗ ಜಿಲ್ಲೆಯಲ್ಲಿ ಸಾಹಿತ್ಯ ಸಮ್ಮೇಳನದ ಮುಕ್ತಾಯ ಹಂತ ನಡೆಯುತ್ತಿತ್ತು, ಜಿಲ್ಲೆಗೆ ಆಗಮಿಸಿದ್ದ ಬೇರೆ ಜಿಲ್ಲೆಯವರು ಹೊರ ಹೋಗಬೇಕಾಗಿತ್ತು. ಅವರನ್ನು ಕಳುಹಿಸುವುದು ಸರಕಾರದ ಮತ್ತು ಜಿಲ್ಲಾಡಳಿತದ ಕರ್ತವ್ಯವಾಗಿತ್ತು, ಆದರೆ ಜಿಲ್ಲೆಯಲ್ಲಿಯೇ ಇದ್ದ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಯಾವುದೇ ರೀತಿಯ ನಿರ್ದೇಶನವನ್ನು ಜಿಲ್ಲಾಡಳಿತಕ್ಕೆ ನೀಡದೆ, ಬೇಜವಾಬ್ದಾರಿಯಿಂದ ಜಿಲ್ಲೆಯಿಂದ ಹೊರಹೋದರು. ಕೊನೆಗೆ ಸಾಹಿತ್ಯ ಸಮ್ಮೇಳನದ ಸಂಘಟಕರು ಬಿಜೆಪಿಯವರನ್ನು ಸಂಪರ್ಕಿಸಿ, ಅವರಲ್ಲಿ ಭಿಕ್ಷೆ ಬೇಡುವ ರೀತಿಯಲ್ಲಿ ಸಾಹಿತ್ಯ ಸಮ್ಮೇಳನಕ್ಕೆ ಆಗಮಿಸಿದವರನ್ನು ಬಂದ್ ದಿನ ಜಿಲ್ಲೆಯಿಂದ ಹೊರ ಕಳುಹಿಸಲು ಅವಕಾಶ ನೀಡಬೇಕೆಂದು ಕೋರಿಕೊಳ್ಳಬೇಕಾಯಿತು. ಅವಕಾಶ ನೀಡುತ್ತೇವೆ ಎಂದಿದ್ದ ಚೆಡ್ಡಿಗಳು ಅವರಿಗೆ ಸಂಜೆಯವರೆಗೆ ನೀರಳಲು ಬಿಡದೆ, ಅನ್ನಾಹಾರವೂ ದೊರೆಯದ ರೀತಿಯಲ್ಲಿ ಕಿರುಕುಳ ನೀಡಿದರು.




ಸಿ.ಬಿ.ಐ. ತನಿಖೆಗೆ ಒಳಪಡಿಸಿ: ಸುಬ್ಬಯ್ಯ

ಈ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಒಳಪಡಿಸಬೇಕು ಮತ್ತು ಕೊಡಗಿನಲ್ಲಿ ಈ ಹಿಂದೆ ನಡೆದಂತಹ ಐದಾರು ಕೊಲೆ ಪ್ರಕರಣಗಳು ಕೂಡ ಸಿ.ಬಿ.ಐ. ತನಿಖೆಗೆ ಒಳಪಡಿಸಬೇಕು ಎಂದು ಎ.ಕೆ.ಸುಬ್ಬಯ್ಯ ಆಗ್ರಹಪಡಿಸಿದ್ದಾರೆ. ಈ ಘಟನೆ ಮತ್ತು ಅನಂತರ ನಡೆದಂತಹ ಬಂದ್ ಬಗ್ಗೆ ಜಿಲ್ಲೆಯಲ್ಲಿ ಧ್ವನಿ ಎಬ್ಬಿಸಿದವರು ಎ.ಕೆ.ಸುಬ್ಬಯ್ಯ ಮತ್ತು ಜಾತ್ಯತೀತ ಜನತಾದಳದ ಅಧ್ಯಕ್ಷ ವಿ.ಪಿ.ಶಶಿಧರ್ ಮಾತ್ರ.




ಕೊಡಗಿನಲ್ಲಿ ಕತ್ತೆ ಕಾಯಲು ಲಾಯಕ್ಕಿಲ್ಲದ ಪೊಲೀಸ್ ವ್ಯವಸ್ಥೆ ದನ ಕಾಯಲು ಲಾಯಕ್ಕಿಲ್ಲದ ಕಾಂಗ್ರೆಸ್ ಪಕ್ಷ ಮತ್ತು ಸಮಾಜಕ್ಕೆ ಬೆಂಕಿ ಇಟ್ಟು ಧಗಧಗ ಉರಿಯುವಾಗ ಕೇಕೆ ಹಾಕುವ ಬಿಜೆಪಿ ಇರುವಾಗ, ಕೊಡಗಿನ ಜನತೆ ನೆಮ್ಮದಿಯಿಂದ ಇರಲು ಸಾಧ್ಯವೇ ಎಂದು ಪ್ರಶ್ನಿಸಿರುವ ಎ.ಕೆ.ಸುಬ್ಬಯ್ಯ "ಪಾತಕ ಲೋಕದ ಕೃತ್ಯವನ್ನು ವೈಭವೀಕರಿಸುವುದು ಬೇಡ. ವೈಯಕ್ತಿಕ ವಿಚಾರಕ್ಕೆ ರಾಜಕೀಯ ಲೇಪನ ಬೇಡ" ಎಂದಿದ್ದಾರೆ. ಕೊಡಗಿನಲ್ಲಿ ಬಂದ್ ವೇಳೆಯಲ್ಲಿ ಅಭೂತ ಪೂರ್ವ ಅರಾಜಕತೆಯ ನಗ್ನ ನರ್ತನವನ್ನು ಕಾಣಲು ಸಾಧ್ಯವಾಯಿತು ಎಂದು ಅವರು ಗಳು ವಿಶ್ಲೇಷಿಸಿದ್ದಾರೆ. ಕಾಂಗ್ರೆಸ್ ಸರಕಾರ ಭೂಗತ ಚಟುವಟಿಕೆಯನ್ನು ಬುಡ ಸಹಿತ ಕಿತ್ತು ಹಾಕಬೇಕೆಂದು ಆಗ್ರಹಿಸಿದ್ದಾರೆ.


ನೆಲಕಚ್ಚಿದ ಕೆಂಚಪ್ಪನ ಕೂಟಕ್ಕೆ ಜೈಲು ಭೀತಿ


ಕೆಂಚಪ್ಪಗೌಡ


ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷೀಲಿ ಎಂಬಂತೆ ನೆಲಕಚ್ಚಿದ ಮಾಜಿ ಅಧ್ಯಕ್ಷ ಕೆಂಚಪ್ಪಗೌಡ ಮತ್ತೆ ವಕ್ಕರಿಸುವ ಎಲ್ಲಾ ಲಕ್ಷಣಗಳೂ ಒಕ್ಕಲಿಗರ ಸಂಘದಲ್ಲಿ ಗೋಚರಿಸುತ್ತಿವೆ. ಮೊನ್ನೆಯಷ್ಟೇ ನಿಕ್ಕಿಯಾದ ಒಕ್ಕಲಿಗರ ಸಂಘದ ಚುನಾವಣಾ ಫಲಿತಾಂಶದಲ್ಲಿ ಅಪ್ಪಾಜಿಗೌಡರ ಸಿಂಡಿಕೇಟ್ ಜಯಭೇರಿ ಬಾರಿಸಿದ್ದು ಒಕ್ಕಲಿಗರ ಪಾಲಿಗೊಂದು ಆಶಾಕಿರಣವೆ. ನಿರೀಕ್ಷೆಯಂತೆ ಪ್ರೊ. ನಾಗರಾಜ್ ತಂಡಕ್ಕೂ ಗಣನೀಯ ಪಾಲು ಸಿಕ್ಕಿದೆ. ಇದೆಲ್ಲಕ್ಕೂ ಮಿಗಿಲಾಗಿ ಹಾಲೀ ಅಧ್ಯಕ್ಷ ಕೆಂಚಪ್ಪನೇ ಮಣ್ಣು ಮುಕ್ಕಿದ್ದಾನೆ. ಹದಿನೈದು ಮಂದಿ ಗೆಲ್ಲಬೇಕಿದ್ದ ಬೆಂಗಳೂರಿನ ಇನ್ನೂರಕ್ಕೂ ಅಧಿಕ ಅಭ್ಯರ್ಥಿಗಳ ಪೈಕಿ ಕೆಂಚಪ್ಪ ಗಿಟ್ಟಿಸಿದ್ದು 23ನೇ ಸ್ಥಾನವನ್ನು!

ಇದರರ್ಥ ಸೋತ ಪ್ರಮುಖರಾದ ರೈತನಾಯಕ ಯೋಗಾರಮೇಶ್, ಡಾ. ಉದ್ದಂಡಯ್ಯ, ಸಹಕಾರಿ ಧುರೀಣೆ ಗಾಯಿತ್ರಿದೇವಿ, ಪಿಳ್ಳಾಂಜಿನಪ್ಪ, ವಕೀಲರ ನಾಯಕ ಪುಟ್ಟೇಗೌಡ ಮುಂತಾದವರಿಗಿಂತಲೂ ಕೆಂಚಪ್ಪನಿಗೆ ಕಮ್ಮಿ ಓಟುಗಳು ಬಿದ್ದವು. ಕೆಂಚಪ್ಪನ ಸಿಂಡಿಕೇಟಿನಿಂದ ನಿಂತ ಘಟಾನುಘಟಿಗಳಾದರೂ ಎಂಥವರು. ಮಾಜಿ ಮಂತ್ರಿ ಬಚ್ಚೇಗೌಡರ ಖಾಸಾ ಅಣ್ಣನ ಮಗ ರಾಜಶೇಖರಗೌಡ, ವಿಜಯನಗರದ ಹಾಲಿ ಶಾಸಕ ಲೇಔಟ್ ಕೃಷ್ಣಪ್ಪನವರ ಪತ್ನಿಯ ತಮ್ಮ ನೀಲಕಂಠೇಗೌಡ, ಕೋಟ್ಯಾಧಿಪತಿ ಕೆಂಪೇಗೌಡ; ಇತ್ಯಾದಿಗಳೆಲ್ಲರೂ ಕೆಂಚಪ್ಪನ ಸಮೇತ ನೆಲಕಚ್ಚಿದ್ದಾರೆ. ಇದ್ದುದರಲ್ಲಿ ಸಭ್ಯರೆಂದೇ ಚಾಲ್ತಿಯಲ್ಲಿದ್ದ ಡಾ. ಚಿಕ್ಕಮೊಗ, ಡಾ. ಅಂಜನಪ್ಪ ಮತ್ತು ನಿಷ್ಕಳಂಕ ಅಧಿಕಾರಿ ಬಸವೇಗೌಡ ಮುಂತಾದವರು ಕೂಡ ಕೆಂಚಪ್ಪನ ಕುಖ್ಯಾತಿಯಿಂದಾಗೇ ಸೋತಿದ್ದಾರೆ.



ದೇವೇಗೌಡ


ರೇವಣ್ಣ

ಹದಿನೈದು ಮಂದಿಯ ಕೆಂಚಪ್ಪಗೌಡನ ಕೂಟದಿಂದ ಗೆದ್ದದ್ದು ಮಾಜಿ ಡಿಸಿಎಂ ಅಶೋಕ್ ತಮ್ಮ ಜಾಲಹಳ್ಳಿ ರವಿ, ಕುಕ್ಕುರು ದೊಡ್ಡಿ ಶಿವಣ್ಣ, ಹೊಸಕೋಟೆಯ ಹುಲ್ಲೂರ್ ಮಂಜ ಮತ್ತು ಬಿಬಿಎಂಪಿ ಇಂಜನಿಯರ್ ಅಶ್ವತ್ಥ್ ಎಂಬ ನಾಲ್ಕೇ ನಾಲ್ವರು.


ಅ.ದೇವೇಗೌಡ

ಓಟೊಂದಕ್ಕೆ ಹದಿನೈದು ಸಾವಿರದಂತೆ ಕಾಸು ಹಂಚಿ, ಕನಕಪುರ ರಸ್ತೆಯ ತಮ್ಮ ಫಾರ್ಮ್ ಹೌಸಿನಲ್ಲಿ ವಾರಗಟ್ಟಲೇ ಗುಂಡು ತುಂಡಿನ ಸಮಾರಾಧನೆಗೈದು ಬಚ್ಚೇಗೌಡ, ಆರ್.ಅಶೋಕ್‌ರಂಥ ಬಿಜೆಪಿ ಧೂರ್ತರನ್ನು ಮುಂದಿಟ್ಟುಕೊಂಡೂ ಕೆಂಚಪ್ಪನ ಸಿಂಡಿಕೇಟಿಗೆ ಬರಕತ್ತಾಗಲಿಲ್ಲ; ಏಕೆಂದರೆ ಹೊಸದಾಗಿ ಮತದಾರರೆನಿಸಿಕೊಂಡ ಪ್ರಜ್ಞಾವಂತ ಒಕ್ಕಲಿಗ ಸಮೂಹಕ್ಕೆ ಆತನ ಕುಲಘಾತಕ ವರಸೆಗಳೆಲ್ಲ ಗೊತ್ತಾಗಿಹೋಗಿತ್ತು. ಆದರೆ ಮಾಡಿದ ಪಾಪಗಳನ್ನು ಮುಚ್ಚಿಕೊಳ್ಳದೆ ಹೋದರೆ ತಾನು ಜೈಲುಪಾಲಾಗುವುದು ನಿಶ್ಚಿತ. ಸೋತಿದ್ದೇನೋ ಸೋತಾಯ್ತು. ಕನಿಷ್ಠ ಜೈಲು ಶಿಕ್ಷೆಯನ್ನಾದರೂ ತಪ್ಪಿಸಿಕೊಳ್ಳಬೇಕಲ್ಲ.



ಅಶೋಕ್

ಅದಕ್ಕೆಂದು ಕೆಂಚಪ್ಪ ಶುರುವಿಟ್ಟ ಕಳ್ಳಾಟವೇ ದೇವೇಗೌಡರ ಫ್ಯಾಮಿಲಿಯ ಬಾಲಕೃಷ್ಣ ಎಂಬ ಚನ್ನರಾಯಪಟ್ಟಣದ ಶಾಸಕರಿಗೆ ಅಧ್ಯಕ್ಷಗಾದಿಯಲ್ಲಿ ಪಟ್ಟ ಕಟ್ಟುವುದು?


35 ಮಂದಿ ಕಾರ್ಯಕಾರಿ ಸದಸ್ಯ ಬಲದ ಒಕ್ಕಲಿಗರ ಸಂಘದಲ್ಲಿ ಕನಿಷ್ಠ 18 ಮಂದಿಯನ್ನು ಗುಡ್ಡೆ ಹಾಕಿಕೊಂಡರೆ ಸಾಕು ತಾನು ಬಯಸಿದವನನ್ನು ಅಧ್ಯಕ್ಷನನ್ನಾಗಿಸಬಹು ದೆಂಬುದು ಕೆಂಚಪ್ಪನ ಹುನ್ನಾರ. ಹೇಗೂ ಅಪ್ಪಾಜಿಗೌಡರ ಬಣದ ಏಳು ಮಂದಿ ಈಗಾಗಲೇ ಗೆದ್ದಿದ್ದಾಗಿದೆ. ಪ್ರೊ. ನಾಗರಾಜ್ ನೇತೃತ್ವದಲ್ಲಿ ಗೆದ್ದ ಎ. ಪ್ರಸಾದ್ ಮತ್ತು ಬಿ. ಮುನೇಗೌಡ ಯಾವ ಕಾರಣಕ್ಕೂ ಕೆಂಚಪ್ಪನ ದುರಾಚಾರದ ಜೊತೆ ಕೈಜೋಡಿಸಲು ಸಾಧ್ಯವೇ ಇಲ್ಲವಾದ್ದರಿಂದ ಸಹಜವಾಗೇ ಪ್ರೊ. ನಾಗರಾಜ್ ಮತ್ತು ಅಪ್ಪಾಜಿಗೌಡ ಒಂದಾಗಲೇಬೇಕು. ತಮ್ಮದೇ ಪ್ರತ್ಯೇಕ ಗುಂಪು ಕಟ್ಟಿಕೊಂಡಿದ್ದ ಪ್ರೊ. ಮಲ್ಲಯ್ಯ ಕೂಡ ಜನಾಂಗದ ಹಿತದೃಷ್ಟಿಗಾದರೂ ಈ ತಂಡದ ಜೊತೆಗೆ ಕೈಜೋಡಿಸಲೇಬೇಕು. ಮಿಕ್ಕಂತೆ ಬೆಂಗಳೂರಿನ ಹೊರಗೆ ಬೇರೆ ಬೇರೆ ಜಿಲ್ಲೆಗಳಿಂದ ಗೆದ್ದ ಬಹುತೇಕರೆಲ್ಲ ತಮ್ಮ ಮಾನ ಉಳಿಸಿಕೊಳ್ಳುವುದಕ್ಕಾದರೂ ಅಪ್ಪಾಜಿಗೌಡರ ಪರ ನಿಲ್ಲಲೇಬೇಕು.

ಎತ್ತಿಂದೆತ್ತ ಲೆಕ್ಕ ಹಾಕಿದರೂ ಜನಾಂಗದ ಕಾಳಜಿಯ ಮುಂದೆ ತನ್ನ ಕಳ್ಳಾಟಕ್ಕೆ ಜಾಗವಿಲ್ಲ ಎಂಬುದನ್ನು ಗೊತ್ತು ಮಾಡಿಕೊಂಡೇ ಹೊಸ ಷಡ್ಯಂತ್ರವೊಂದಕ್ಕೆ ಕೈಯಿಟ್ಟ ಕೆಂಚಪ್ಪ ಅದಕ್ಕೆ ಮದ್ದಾಗಿ ಬಳಸಿದ್ದು ದೇವೇಗೌಡರ ಫ್ಯಾಮಿಲಿಯನ್ನು!


ದೇವೇಗೌಡರ ಅಳಿಯ ಡಾ. ಮಂಜುನಾಥ್‌ರ ಖಾಸಾ ತಮ್ಮ ಬಾಲಕೃಷ್ಣ ಸದ್ಯ ಚನ್ನರಾಯಪಟ್ಟಣದ ಶಾಸಕ ಮತ್ತು ಅದೇ ಕಾರಣಕ್ಕೆ ಹಾಸನದಿಂದ ಸಂಘಕ್ಕೆ ಆಯ್ಕೆಯಾಗಿದ್ದಾರೆ. ಬಾಲಕೃಷ್ಣರನ್ನು ಮುಂದಿಟ್ಟುಕೊಂಡರೆ ಅನಿವಾರ್ಯವಾಗಿ ದೇವೇಗೌಡರ ಕುಟುಂಬ ಬಾಲಕೃಷ್ಣರ ಬೆನ್ನಿಗೆ ನಿಲ್ಲಲೇಬೇಕು. ಆಗ ಅಪ್ಪಾಜಿಗೌಡರ ಬಣದ ಜೆಡಿಎಸ್ ಮೂಲದ ಡೈರೆಕ್ಟರ್‌ಗಳು ವಿಧಿಯಿಲ್ಲದೆ ಬಾಲಕೃಷ್ಣರನ್ನು ಬೆಂಬಲಿಸಲೇಬೇಕು. ಬೆಂಗಳೂರಿನಿಂದ ಗೆದ್ದವರೆಲ್ಲ ಏನೇ ಕೂಟ ಕಟ್ಟಿಕೊಂಡರೂ ಮೈಸೂರು, ಮಂಡ್ಯ, ಹಾಸನ, ತುಮಕೂರು ಭಾಗದವರೆಲ್ಲ ಖರೀದಿಗೊಂಡರೆಂದರೆ ಬಾಲಕೃಷ್ಣ ಅಧ್ಯಕ್ಷರಾಗುವುದು ಕಷ್ಟವೇನಲ್ಲ.


ಅಪ್ಪಾಜಿಗೌಡ

ಏಕೆಂದರೆ ಅಪ್ಪಾಜಿಗೌಡ ಅಥವಾ ಪ್ರೊ. ನಾಗರಾಜ್ ಇತ್ಯಾದಿ ತನ್ನ ವಿರೋಧಿ ಬಣದ ಯಾರೇ ಅಧ್ಯಕ್ಷರಾದರೂ ತನ್ನ ಅಧಿಕಾರಾವಧಿಯಲ್ಲಿ ನಡೆದ ಸಂಘದ ಲೂಟಿಯನ್ನು ಕೆದಕುವುದು ಶತಸ್ಸಿದ್ಧ. ಆಗ ಜೈಲು ಕಟ್ಟಿಟ್ಟ ಬುತ್ತಿಯೆ. ಹೇಗಾದರೂ ಮಾಡಿ ಅಪ್ಪಾಜಿಗೌಡರ ಬಣ ಅಧಿಕಾರಕ್ಕೆ ಬರದಂತೆ ಮಾಡುವುದೊಂದೇ ತನಗಿರುವ ದಾರಿ ಎಂದು ಕಾರ್ಯಾಚರಣೆಗಿಳಿದ ಕೆಂಚಪ್ಪ ನೂರು ಕೋಟಿ ಕೈಬಿಟ್ಟರೂ ಸರಿ ತಾನು ಜೈಲು ಪಾಲಾಗುವುದರಿಂದ ಪಾರಾಗಬೇಕೆಂಬ ಕಾರ್ಯಾಚರಣೆಗೆ ಇಳಿದುಬಿಟ್ಟ. ಯಾವತ್ತು ಗೌಡರ ಫ್ಯಾಮಿಲಿಯ ಬಾಲಕೃಷ್ಣ ಅಧ್ಯಕ್ಷರಾಗು ತ್ತಾರೆಂಬ ಆಶೆ ಕೆರಳಿತೋ ಅದನ್ನು ಕಾರ್ಯಗತಗೊಳಿಸಲು ಅಖಾಡಕ್ಕಿಳಿದದ್ದು ದೇವೇಗೌಡರ ಮಗ ರೇವಣ್ಣ.


ಪ್ರೊ. ನಾಗರಾಜ್

ಒಕ್ಕಲಿಗರ ಸಂಘ ದೇವೇಗೌಡರ ಫ್ಯಾಮಿಲಿಯ ಹಿಡಿತಕ್ಕೊಳಪಟ್ಟಿತು ಎಂದರೆ ಅದರ ರಾಜಕೀಯ ಪರಿಣಾಮವೇ ಬೇರೆಯಾಗುತ್ತದೆ. ಮುಂಬರುವ ಲೋಕಸಭಾ ಚುನಾವಣೆ ಸೇರಿದಂತೆ ಜೆಡಿಎಸ್ ಪಾಲಿಗೆ ಒಕ್ಕಲಿಗ ಮತ ಬ್ಯಾಂಕ್ ಗಟ್ಟಿಗೊಳ್ಳುವುದಕ್ಕೂ ಇದೊಂದು ಅವಕಾಶವೆ. ಸಿಕ್ಕಿದ್ದೇ ಛಾನ್ಸು ಎಂದು ಕೈಕೊಡವಿ ಅಣಿಯಾದ ದೇವೇಗೌಡರು ತಮ್ಮ ದೊಡ್ಡ ಮಗ ರೇವಣ್ಣನನ್ನು ಛೂಬಿಟ್ಟಿದ್ದಾರೆ.


ಬಾಲಕೃಷ್ಣ

ಸದ್ಯ ಕೆಂಚಪ್ಪಗೌಡನ ದುಷ್ಟಕೂಟಕ್ಕೆ ಜೆಡಿಎಸ್ ನಾಯಕ ರೇವಣ್ಣನೇ ಸಾರಥಿ ಮತ್ತು ಆಪದ್ಭಾಂಧವ. ಎತ್ತಿಂದೆತ್ತ ಲೆಕ್ಕ ಹಾಕಿದರೂ ಕೆಂಚಪ್ಪನ ಸಿಂಡಿಕೇಟ್ ಅಧಿಕಾರ ಗಿಟ್ಟಿಸುವುದು ಸಾಧ್ಯವೇ ಇಲ್ಲ. ಏಕೆಂದರೆ ಬೆಂಗಳೂರಿನಿಂದ ಗೆದ್ದಿರುವುದು ಆತನ ತಂಡದ ಕೇವಲ ನಾಲ್ವರು ಮಾತ್ರ. ಗೆದ್ದ ಕುಕ್ಕುರು ದೊಡ್ಡಿ ಶಿವಣ್ಣ, ಆರ್. ಅಶೋಕ್ ತಮ್ಮ ಜಾಲಹಳ್ಳಿ ರವಿ, ಇಂಜಿನಿಯರ್ ಅಶ್ವತ್ಥ್ ಮತ್ತು ಹುಲ್ಲೂರ್ ಮಂಜರಂಥ ನಾಲ್ಕೈ ನಾಲ್ಕು ಡೈರೆಕ್ಟರುಗಳ ಪೈಕಿ ಯಾರಿಗೂ ಅಪ್ಪಾಜಿಗೌಡ, ಪ್ರೊ. ನಾಗರಾಜ್, ಪ್ರಸಾದ್, ಅ. ದೇವೇಗೌಡರಂಥ ವ್ಯಕ್ತಿತ್ವ ಇಲ್ಲ.

ಆದರೆ ಬೆಂಗಳೂರಿನ ಹೊರಗಡೆಯಿಂದ ಆಯ್ಕೆಯಾದವರ ಪೈಕಿ ಕೆಂಚಪ್ಪನ ಡಕಾಯಿತಿಯಲ್ಲಿ ಪಾಲು ಪಡೆದವರದ್ದೇ ಪ್ರತ್ಯೇಕ ಹಿಂಡಿದೆ. ಇವರಲ್ಲಿ ಕೋಲಾರದಿಂದ ಆಯ್ಕೆಯಾದ ರಮೇಶ್ ಚಿಕ್ಕಬಳ್ಳಾಪುರದಲ್ಲಿ ಸಂಘಕ್ಕೆ ಭೂಮಿ ದಾನ ಮಾಡುತ್ತೇನೆಂದು ಹೇಳಿಕೊಂಡು ದಾನ ಮಾಡಿದ ಭೂಮಿಗೇ ಸಂಘದ ದುಡ್ಡು ಹೊಡೆದ ಖದೀಮ. ಮೈಸೂರಿನಿಂದ ಗೆದ್ದ ಮೂವರ ಪೈಕಿ ಡಾ. ಮಾದೇವ್ ಕೆಂಚಪ್ಪ ಅಧ್ಯಕ್ಷನಾಗಿದ್ದಷ್ಟೂ ಕಾಲ ಕಾರ್ಯದರ್ಶಿಯಾಗಿದ್ದು ದೋಚಿದವರೆ. ಮೈಸೂರಿನಿಂದ ಗೆದ್ದ ವೆಂಕಟೇಶ್ ಎಂಬ ಮತ್ತೊಬ್ಬ ಕೂಡ ಮಾದೇವ್ ಜೊತೆ ಕೆಂಚಪ್ಪನ ಬೆಂಬಲಕ್ಕೆ ನಿಂತಿದ್ದಾನೆ.

ಇದು ಬಿಟ್ಟರೆ ಬೇರೆ ಯಾರಿಗೂ ಕೆಂಚಪ್ಪಗೌಡನ ಜೊತೆ ಗುರುತಿಸಿಕೊಳ್ಳುವ ಹುಮ್ಮಸ್ಸಾಗಲಿ, ಧೈರ್ಯವಾಗಲಿ ಇಲ್ಲ, ಹಾಗಂತ ಅವರ್‍ಯಾರೂ ವಿರಾಗಿಗಳಲ್ಲವಲ್ಲ!

ಇದನ್ನು ಲೆಕ್ಕ ಹಾಕಿಯೇ ಹೊಸದೊಂದು ವರಸೆ ಶುರು ಹಚ್ಚಿಕೊಂಡ ಕೆಂಚಪ್ಪ ನೇರಾನೇರ ಕುದುರೆ ಖರೀದಿ ವ್ಯವಹಾರ ಕುದುರಿಸಲಾರಂಭಿಸಿದ. ತನ್ನ ಸಿಂಡಿಕೇಟಿಗೆ ಯಾರು ಬರುತ್ತಾರೋ ಅಂಥವರಿಗೆ ಒಂದು ಬೆಂಜ್ ಕಾರು, ಜೊತೆಗೊಂದು ಕೋಟಿ ರೂಪಾಯಿ ಮೇಲ್ಕಾಸು ಎಂದು ತೇಲಿಬಿಟ್ಟ. ಕೆಂಚಪ್ಪನ ಈ ಖರೀದಿ ಡೀಲಿಗೆ ಮೊದಲು ಬಲಿಯಾಗಿದ್ದು ಮಂಡ್ಯದಿಂದ ಗೆದ್ದಿದ್ದ ಡಾ. ಬೊಮ್ಮಯ್ಯ. ಚೆನ್ನಲ್ಲೇ ಕೊಡಗಿನಿಂದ ವಾಲಿ ಮಂಜುವನ್ನು ಸೋಲಿಸಿ ಗೆದ್ದಿದ್ದವನೂ ಬುಟ್ಟಿಗೆ ಬಿದ್ದ. ಚಿಕ್ಕಮಗಳೂರಿನಿಂದ ಆಯ್ಕೆಯಾಗಿದ್ದ ನಾಗರಾಜು ಎಂಥಾ ಲಜ್ಜೆಗೇಡಿಯೆಂಧರೆ ಮಾತಿಗೆ ಮೊದಲೇ

ಪುಂಡುಪೋಕರಿಗಳೆಲ್ಲ ಮತದಾರರಾದರೆ ಹೆಣ, ಹೆಂಡ, ಖಂಡವೇ ಮಾನ, ದಂಡ..!


ಭಾರೀ ನಿರೀಕ್ಷೆಯಿಂದಲೇ ನಡೆದ ಜನವರಿ 5ರ ಒಕ್ಕಲಿಗರ ಸಂಘದ ಚುನಾವಣೆಯಲ್ಲಿ ನಡೆದ ಹಣಾಹಣಿ, ಹಂಚಿದ ದುಡ್ಡು, ಹರಿದ ಹೆಂಡ, ತಿಂದು ತೇಗಿದ ಖಂಡಗಳ ಲೆಕ್ಕವೇ ಭಯಂಕರ. ನಾನೂರಕ್ಕೂ ಅಧಿಕ ಸಂಖ್ಯೆಯ ಅಭ್ಯರ್ಥಿಗಳು ಮಾಡಿದ ಖರ್ಚಿತ್ತಲ್ಲ; ಬಹುಶಃ ಆ ದುಡ್ಡನ್ನೇ ಸಂಘಕ್ಕೆಂದು ನೀಡಿದ್ದರೆ ಮತ್ತೊಂದು ಒಕ್ಕಲಿಗರ ಸಂಘ ಸ್ಥಾಪಿಸಬಹುದಿತ್ತು ಅಥವಾ ಇನ್ನೊಂದು ಜೊತೆ ಮೆಡಿಕಲ್, ಡೆಂಟಲ್ ಕಾಲೇಜನ್ನು ಪ್ರಾರಂಭಿಸಬಹುದಿತ್ತು.


ಕುಖ್ಯಾತ ರೌಡಿಗಳು, ರಿಯಲ್ ಎಸ್ಟೇಟ್ ಖದೀಮರು, ಹೊಸಕೋಟೆಯ ಕೊಲೆಗಡುಕರು, ಲಿಕ್ಕರ್ ದೊರೆಗಳೆಲ್ಲ ತಾವು ಜನಾಂಗದ ಉದ್ಧಾರಕರೆಂಬಂತೆ ಚುನಾವಣೆಯ ಅಖಾಡಕ್ಕಿಳಿದಿದ್ದರ ಪರಿಣಾಮ ಮಾತ್ರ ಘೋರವಾಗೇ ಇತ್ತು.


ಇದಕ್ಕೊಂದು ದಾರುಣ ಉದಾಹರಣೆಯಂತೆ ನಡೆದದ್ದು ಚಾಮರಾಜಪೇಟೆಯ ಪ್ರಕಾಶ್ ಕೆಫೆಯಲ್ಲಿ ಪ್ರೊ. ನಾಗರಾಜ್‌ರ ಪ್ರಚಾರ ಸಭೆ. ಮೈಕೋ ಫ್ಯಾಕ್ಟರಿಯ ಒಕ್ಕಲಿಗ ಕಾರ್ಮಿಕರೇ ಅಧಿಕ ಸಂಖ್ಯೆಯಲ್ಲಿದ್ದ ಆ ಸಭೆಯಲ್ಲಿ ಬಂದವರಿಗೆಂದು ಕಲ್ಲಂಗಡಿ ಹಣ್ಣಿನ ಜ್ಯೂಸ್ ಕೊಟ್ಟಿದ್ದೇ ತಡ ಒಂದು ಗುಂಪಿನ ಸದಸ್ಯರು ರೊಚ್ಚಿಗೆದ್ದರು. ಪುಡಿಕೋಸಿ ಹಣ್ಣಿನ ಜ್ಯೂಸಿಗೆ ಗತಿಯಿಲ್ಲ ಅಂತ ನಮ್ಮನ್ನ ಇಲ್ಲಿಗೆ ಕರಕೊಂಡು ಬಂದ್ರಾ? ಇದನ್ನು ಕುಡಿಯೋಕ್ಕೆ ಅಷ್ಟು ದೂರದಿಂದ ನಮ್ಮನ್ನು ಕರಕೊಂಡು ಬರಬೇಕಿತ್ತಾ? ಎಂದು ಪಾನಮತ್ತರಾಗಿದ್ದ ಗುಂಪು ಗಲಾಟೆಗಿಳಿಯಿತು.

ಆ ಕಾಲದಿಂದಲೂ ಜನಾಂಗದ ಕ್ಷೇಮಾಭಿವೃದ್ಧಿಗೆಂದೇ ಹೋರಾಡಿಕೊಂಡು ಬಂದಿದ್ದ ಹಿರೀಕ ಪ್ರೊ. ನಾಗರಾಜ್ ಥರದವರಿಗೆ ಹೇಗೆ ತಾನೇ ಹೆಂಡ ಖಂಡದ ಪಾರ್ಟಿ ಕೊಟ್ಟು ಓಟು ಕೇಳಲು ಸಾಧ್ಯ? ಇದನ್ನು ನೋವಿನಿಂದಲೇ ಸ್ವೀಕರಿಸಿದ ನಾಗರಾಜ್ ಸಿಂಡಿಕೇಟಿನ ಮತ್ತೊಬ್ಬ ಪ್ರಮುಖ ಅಭ್ಯರ್ಥಿ ಮತ್ತು ವಕೀಲರ ಸಂಘದ ಮಾಜಿ ಅಧ್ಯಕ್ಷ ಕೆ.ಎಸ್. ಪುಟ್ಟೇಗೌಡ ಮತ್ತು ಹಾಲಿ ನಿರ್ದೇಶಕ ಪ್ರಸಾದ್ ಸೇರಿಕೊಂಡು ಮೆಜೆಸ್ಟಿಕ್‌ನ ಮೌರ್ಯ ಹೋಟೇಲಿನಲ್ಲಿ ಬಾಡೂಟದ ಪಾರ್ಟಿಯಿಟ್ಟರು. ಸಂಘದ ಓಟರುಗಳೆಂದು ಪಾರ್ಟಿಗೆ ಬಂದ ಆ ಮಹಾಶಯರ ಊಟದ ವೈಖರಿಗೆ ಹೋಟೆಲ್ ಸಿಬ್ಬಂದಿಗಳೇ ಥಂಡಾ ಹೊಡೆದುಬಿಟ್ಟರು. ತಟ್ಟೆಯ ತುಂಬ ಬಿರಿಯಾನಿ ತುಂಬಿಸಿಕೊಂಡು ಅದರಲ್ಲಿದ್ದ ಮಾಂಸದ ತುಂಡುಗಳನ್ನಷ್ಟೇ ಆಯ್ದು ತಿನ್ನುತ್ತಿದ್ದ ಪುಣ್ಯಾತ್ಮರು ಬಿರಿಯಾನಿಯ ತಟ್ಟೆ ತುಂಬಿದ ಅನ್ನವನ್ನೆಲ್ಲ ಕಸದ ಡ್ರಮ್ಮಿಗೆ ಸುರಿಯುತ್ತಿದ್ದರು!

ಪ್ರತಿಯೊಬ್ಬರಿಗೂ ಫುಲ್ ಬಾಟಲು ವಿಸ್ಕಿಯೇ ಬೇಕು. ಮಾಡಿದ ಅನ್ನ ಸಾರನ್ನು ಯಾರೂ ಮುಟ್ಟದ ಕಾರಣ ತೊಟ್ಟಿಗೆ ಸುರಿಯಲಾಯ್ತು. ಕೇವಲ ಮಾಂಸದ ತುಂಡಿಗಾಗಿ ತಟ್ಟೆ ತುಂಬ ಬಿರಿಯಾನಿ ಹಾಕಿಸಿಕೊಂಡು ಬಾಸುಮತಿ ಅಕ್ಕಿಯ ಘಮಘಮದ ಅನ್ನವನ್ನು ಕಸದಬುಟ್ಟಿಗೆ ಸುರಿದ ಫಲವಾಗಿ ಮೂರು ಕಸದ ಡ್ರಮ್ಮುಗಳ ತುಂಬ ಅನ್ನವೇ ತುಂಬಿಹೋಗಿತ್ತು. ಇನ್ನೂ ಕೆಲವರ ನಾಲಿಗೆ ಅಟ್ಟಹಾಸ ಹೇಗಿತ್ತೆಂದರೆ ಮಾಂಸದ ಖಂಡವನ್ನೂ ಪೂರ್ತಿ ತಿನ್ನದೇ


ಕೆಂಚಪ್ಪ


ಪುಟ್ಟೇಗೌಡ


ಪ್ರಸಾದ್

ಅರ್ಧರ್ಧ ತಿಂದು ಕಸಕ್ಕೆ ಸುರಿಯುತ್ತಿದ್ದರು!

ಇದು ಒಕ್ಕಲಿಗರ ಸಂಘದ ಸೋಕಾಲ್ಡ್ ಮತದಾರರ ಜಾತಿ ಕಾಳಜಿ! ಪ್ರೊ. ನಾಗರಾಜ್ ಮತ್ತು ಅಪ್ಪಾಜಿಗೌಡರಂಥ ಪ್ರಾಮಾಣಿಕರ ಪರಿಸ್ಥಿತಿಯೇ ಹೀಗಾದರೆ ಇನ್ನು ಲೂಟಿ ಹೊಡೆದ ಕೆಂಚಪ್ಪಗೌಡನ ಆರ್ಭಟ ಹೇಗಿರಬೇಡ?

ಕನಕಪುರ ರಸ್ತೆಯ ವಾಜರಹಳ್ಳಿಯ ಕೆಂಚಪ್ಪಗೌಡನ ಶರತ್ ಫಾರ್ಮ್‌ನಲ್ಲಿ ಜನವರಿ 1ರ ಒಂದೇ ದಿನ ನಾನೂರು ಕುರಿಗಳನ್ನು ಕಡಿಯಲಾಗಿತ್ತು. ಜೊತೆಗೆ ಐದು ಸಾವಿರ ಕೋಳಿಗಳದ್ದೇ ಪ್ರತ್ಯೇಕ ಮಾರಣಹೋಮ. ಬರೋಬ್ಬರಿ ಸಾವಿರ ಜನಕ್ಕೆಂದು ಐದು ಲಾರಿ ಲೋಡುಗಳಷ್ಟು ಬ್ರಾಂದಿ, ವಿಸ್ಕಿಗಳನ್ನು ರಾಶಿ ಹಾಕಲಾಗಿತ್ತು. ರಾತ್ರಿಯಿಡೀ ಕಂಠಮಟ್ಟ ಕುಡಿದು ಚಿತ್ತಾದ ಸಂಘದ ಮತದಾರರೆಲ್ಲ ಕುರಿಕೋಳಿಗಳ ಬಾಡೂಟದಲ್ಲೇ ರಾತ್ರಿ ಕಳೆದರು. ಫಾರ್ಮ್‌ಹೌಸಿನಲ್ಲೇ ಮಲಗುವ ವ್ಯವಸ್ಥೆಯೂ ಇತ್ತು. ಸಾವಿರ ಸಂಖ್ಯೆಯಲ್ಲೇ ಹಾಸಿಗೆ ರಗ್ಗುಗಳನ್ನು ತರಿಸಲಾಗಿತ್ತು. ರಾತ್ರಿಯಿಡೀ ಕುಡಿದು ಹೊಡೆದಾಡಿ ಕೊಂಡವರನ್ನು ಸಮಾಧಾನ ಮಾಡಲೆಂದೇ ಕೆಂಚಪ್ಪ ರೌಡಿಗ್ಯಾಂಗ್ ಕರೆಸಿದ್ದ.

ತಮಾಷೆಯೆಂದರೆ ಬೆಳಗಾನ ಕುಡಿದು ಚಿತ್ತಾಗಿ ಬಿದ್ದಿದ್ದವರೆಲ್ಲ ಮಾರನೇ ದಿನ ಮಧ್ಯಾಹ್ನಕ್ಕೆ ಎದ್ದವರು ಅಳಿದುಳಿದ ವಿಸ್ಕಿ ಮಾಂಸ ತಿಂದು ಮಾರನೇ ರಾತ್ರಿಯೂ ಅಲ್ಲೇ ಮಲಗಿದ್ದರು! ಇದು ಕೆಂಚಪ್ಪನ ಒಂದು ಬಾಡೂಟದ ವಿವರಣೆಯಷ್ಟೆ. ಬೆಂಗಳೂರಿನ ಅಷ್ಟ ದಿಕ್ಕುಗಳಲ್ಲೂ ಬೇಕಾಬಿಟ್ಟಿ ಬಾರು ವೈನ್‌ಸ್ಟೋರ್‌ಗಳನ್ನು ತೆರೆದ ಕೆಂಚಪ್ಪಗೌಡ ಒಂದೆಡೆ ಓಟೊಂದಕ್ಕೆ 15 ಸಾವಿರದಂತೆ ಹಂಚಿದ್ದೂ ಅಲ್ಲದೆ ಡಿಸೆಂಬರ್ 31ರಿಂದ ಜನವರಿ 5ರ ತನಕ ತನ್ನ ಯಾವುದೇ ಬಾರು ವೈನ್‌ಸ್ಟೋರಿನಲ್ಲಿ ಮನಸೇಚ್ಛೆ ಕುಡಿಯಲು ಟೋಕನು ಗಳನ್ನೂ ಹಂಚಿದ್ದ. ಒಂದೊಂದು ದಿನಕ್ಕೆ ಒಂದೊಂದು ಬಣ್ಣದ ಟೋಕನ್ನು!

ಇನ್ನೊಂದು ಸೂಕ್ಷ್ಮವನ್ನು ಬಹುಶಃ ಯಾರೂ ಗಮನಿಸಿರಲಿಕ್ಕಿಲ್ಲ. ಅದು ರಾಜಧಾನಿ ಬೆಂಗಳೂರಿನಲ್ಲಿ ಏಕಾಏಕಿ ಹೆಚ್ಚಿದ ಕೋಳಿ ಮಾಂಸದ ರೇಟು. 2013ರ ಡಿಸೆಂಬರ್‌ತನಕ ಬೆಂಗಳೂರಿನಲ್ಲಿ ಕೆಜಿ ಕೋಳಿ ಮಾಂಸದ ಬೆಲೆ ಹೆಚ್ಚೆಂದರೆ ನೂರು ರೂಪಾಯಿಯಿತ್ತು. ಡಿಸೆಂಬರ್ 15ರ ಹೊತ್ತಿಗದು 110 ರೂ.ಗೆ ಏರಿಕೆಯಾಗಿ 2014ರ ಜನವರಿ ಮೊದಲ ವಾರಕ್ಕದು ಏಕಾಏಕಿ 130 ರೂಪಾಯಿಗೇರಿತ್ತು. ವಿಕಟವೆಂದರೆ ಒಕ್ಕಲಿಗರ ಸಂಘದ ಚುನಾವಣೆ ಮುಗಿದ ಮಾರನೇ ದಿನಕ್ಕೇ ಕೆಜಿ ಕೋಳಿಯ ಬೆಲೆ ಮತ್ತೆ ನೂರಕ್ಕಿಳಿದಿತ್ತು!

ಸಂಘದ ಸದಸ್ಯತ್ವವನ್ನು ಮುಕ್ತಗೊಳಿಸಲು ಹೋಗಿ ಪುಂಡುಪೋಕರಿಗಳನ್ನೆಲ್ಲ ಹಿಡಿದು ತಂದು ತಾವೇ ಶುಲ್ಕ ಕಟ್ಟಿ ಸದಸ್ಯರನ್ನಾಗಿಸಿದ್ದರ ದುಷ್ಪರಿಣಾಮವೀಗ ಕೇವಲ ಡೈರೆಕ್ಟರ್‌ಗಳಿಗಷ್ಟೇ ಅಲ್ಲ, ಒಕ್ಕಲಿಗ ಸಮೂಹಕ್ಕೇ ಮಾರಕವಾಗಿದೆ. ಈಗಾಗಲೇ ಎಲೆಕ್ಷನ್ನಿಗೆ ನಿಂತು ಹೈರಾಣಾದವರೆಲ್ಲ 'ಸಾಕಪ್ಪಾ ಸಾಕು ನಮ್ಮ ಪಾಲಿಗೆ ಇದೇ ಕೊನೆಯ ಎಲೆಕ್ಷನ್ನು' ಎಂದು ಜಿಗುಪ್ಸೆಗೆ ಬಿದ್ದಿದ್ದಾರೆ. ಪ್ರೊ. ನಾಗರಾಜ್, ಅಪ್ಪಾಜಿಗೌಡ, ದೇವೇಗೌಡರಂಥವರು ಕೂಡ ಈ ರೀತಿ ದುಡ್ಡು ಸುರಿದು ಓಟು ಕೇಳುವುದೂ ಬೇಡ ಸಂಘವನ್ನು ಲೂಟಿ ಮಾಡುವುದೂ ಬೇಡ ಎಂಬ ನಿರ್ಧಾರಕ್ಕೆ ಬಂದುಬಿಟ್ಟಿದ್ದಾರೆ.

ಕನಿಷ್ಠ ಈಗಲಾದರೂ ಸಂಘದ ಹಿರೀಕರು ಎಚ್ಚೆತ್ತುಕೊಳ್ಳಬೇಕು. ಈಗಿರುವ ಪುಂಡುಪೋಕರಿಗಳ ಸದಸ್ಯ ಕೂಟವನ್ನು ರದ್ದುಗೊಳಿಸಿ ಪ್ರಾಮಾಣಿಕರು, ಚಿಂತಕರು, ಸಾಹಿತಿಗಳು, ರೈತನಾಯಕರ ಹೊಸ ಸದಸ್ಯ ವರ್ಗವನ್ನು ಸೃಷ್ಟಿಸದೇ ಹೋದರೆ ಸಂಘದ ಅಳಿದುಳಿದ ಮೂಳೆ ಚಕ್ಕಳವನ್ನೂ ಬಿಡದೆ ನುಂಗುವುದಂತೂ ನಿಶ್ಚಿತ. ಕಳ್ಳರು, ಖದೀಮರಷ್ಟೇ ಜನಾಂಗದ ನಾಯಕರಾದರೆ ಭವಿಷ್ಯವುಂಟೆ?

ಸು ಗೆಲ್ಲೋದಕ್ಕೆ ಅಂಥ ಾಗಲೇ ಎರಡು ಕೋಟಿ ರ್ಚು ಮಾಡಿದ್ವಿ, ಯಾರು ು ಕೋಟಿ ಕೊಡುತ್ತಾರೋ ನರ ಜೊತೆಗಿರ್‍ತೀನಿ..!' ಎಂದು ಾನಗೆಟ್ಟು ತನ್ನನ್ನೇ ಾರಿಕೊಳ್ಳಲು ಅಣಿಯಾಗಿದ್ದ.



ಬಚ್ಚೇಗೌಡ

ಮಿಕ್ಕಂತೆ ಕೋಲಾರದ ೇಶ್, ಮೈಸೂರಿನ ಪ್ರಸನ್ನ, ಸನದ ಮಂಜೇಗೌಡ ಮತ್ತು ್ಚೇನಹಳ್ಳಿ ರಾಮುಚಂದ್ರ, ಂಡ್ಯದ ಶಿವಲಿಂಗಯ್ಯ, ಬೆಟ್ಟೇಗೌಡ ಮತ್ತು ರಾಯಣಮೂರ್ತಿ, ತುಮಕೂರಿನ ನರೇಂದ್ರ ಬಾಬು ತ್ತು ಶಶಿಕಿರಣ್, ಶಿವಮೊಗ್ಗದ ರಮೇಶ್ ಮುಂತಾದವರೆಲ್ಲ ರಿಕೊಂಡು ಅಪ್ಪಾಜಿಗೌಡ ಮತ್ತು ಪ್ರೊ. ನಾಗರಾಜ್ ೇತೃತ್ವದಲ್ಲಿ 22 ಮಂದಿಯ ಪ್ರತ್ಯೇಕ ತಂಡ ಟ್ಟಿಕೊಂಡಾಗಿತ್ತು. ಎತ್ತಿಂದೆತ್ತ ಲೆಕ್ಕ ಹಾಕಿದರೂ ಕೆಂಚಪ್ಪನ ಟದ ಸಂಖ್ಯೆ ಹನ್ನೆರಡನ್ನು ದಾಟುತ್ತಲೇ ಇರಲಿಲ್ಲ. ಇಂಥಾ ಯಲ್ಲಿ ಅಧಿಕಾರ ಹಿಡಿಯಬೇಕೆಂದರೆ ಕನಿಷ್ಠ 18 ಂದಿಯ ಬೆಂಬಲ ಬೇಕೇಬೇಕು. ಅದನ್ನು ನಿಭಾಯಿಸಲು ರ್ಯಾಚರಣೆಗಿಳಿದದ್ದು ಮಣ್ಣಿನ ಮೊಮ್ಮಗ ರೇವಣ್ಣ!

ರಾಜ್ಯಾದ್ಯಂತ ಗೆದ್ದವರ ಪೈಕಿ ಅಪ್ಪಾಜಿಗೌಡರ ಬಣದ ದೇವೇಗೌಡ, ಜಯಮುತ್ತು, ಪ್ರೊ. ನಾಗರಾಜ್ ಡಿಕೇಟಿನ ಮುನೇಗೌಡ ಸೇರಿದಂತೆ ಜೆಡಿಎಸ್ ರಳಲ್ಲಿರುವವರೂ ಸಾಕಷ್ಟಿದ್ದಾರೆ. ಇಂಥವರಿಗೆ ೇವೇಗೌಡರಿಂದಲೇ ಒಂದು ಮಾತು ಹೇಳಿಸಿಬಿಟ್ಟರೆ ಮ್ಮ ಕುಟುಂಬದ ಬಾಲಕೃಷ್ಣ ಅಧ್ಯಕ್ಷನಾಗುವುದು ಯಾವ ಕ್ಕ? ರೇವಣ್ಣ ಕಾರ್ಯಾಚರಣೆಗೆ ತಕ್ಕಂತೆಯೇ ಕೆಂಚಪ್ಪ ಮಾಡಿದ ತ್ತೊಂದು ಕುತಂತ್ರವೆಂದರೆ ಪದಾಧಿಕಾರಿಗಳ ಆಯ್ಕೆ ಕ್ರಿಯೆಯನ್ನೇ ಅನಿರ್ದಿಷ್ಟ ಕಾಲದವರೆಗೆ ಮುಂದೂಡಿದ್ದು. ನಾವಣೆ ಘೋಷಣೆಯವರೆಗೆ ಸಹಕಾರಿ ಇಲಾಖೆಗೆ ಇದ್ದ ಧಿಕಾರ ಫಲಿತಾಂಶದ ನಂತರ ಪದಾಧಿಕಾರಿ ಆಯ್ಕೆಯನ್ನು ಗದಿ ಮಾಡಲು ಹಿಂದಿನ ಅವಧಿಯ ಕಾರ್ಯದರ್ಶಿಯ ಾಲಿಗೆ ಬರುತ್ತದೆ.

ಕೆಂಚಪ್ಪನ ಅವಧಿಯಲ್ಲಿ ಕಾರ್ಯದರ್ಶಿಯಾಗಿದ್ದ ಡಾ. ಾದೇವ ಹೇಳಿಕೇಳಿ ಕೆಂಚಪ್ಪನ ಅಜ್ಞಾನುವರ್ತಿ. ಹೊಸ ದಾಧಿಕಾರಿ ಆಯ್ಕೆಗೆ ಇವರೇ ಸುತ್ತೋಲೆ ೊರಡಿಸಬೇಕಿತ್ತು. ಫಲಿತಾಂಶ ಪ್ರಕಟಗೊಂಡು ಾರವಾದರೂ ಮಾದೇವ್ ಮಾತ್ರ ಕಾಲ ತಳ್ಳುತ್ತಲೇ ದ್ದರು. ಈ ಬಗ್ಗೆ ಪ್ರೊ. ನಾಗರಾಜ್ ಸೇರಿದಂತೆ ಒಂದಷ್ಟು ಂದಿ ಮಾದೇವ್‌ರನ್ನು ಹಿಡಿದು ದಬಾಯಿಸಿದರೆ 'ಯಾಕೆ ರ್ಜೆಂಟು? ನಿಧಾನಕ್ಕೆ ಮಾಡಿದರಾಯ್ತು...' ಎಂದೆಲ್ಲ ಲೆತಪ್ಪಿಸಿಕೊಳ್ಳಲಾರಂಭಿಸಿದ್ದನ್ನು ಕಂಡವರಿಗೆ ಚೆನ್ನಾಗೇ ರ್ಥವಾಗಿತ್ತು, ಅದು ಕುದುರೆ ಖರೀದಿಗೆ ಕೆಂಚಪ್ಪನ ೂಟಕ್ಕೆ ಬೇಕಾದ ಕಾಲಾವಕಾಶ!

ವಿಚಿತ್ರ ಎಂಬಂತೆ ಹೊಸ ಆಡಳಿತ ಮಂಡಳಿ ಆಯ್ಕೆಯ ನಾಂಕವನ್ನು ಮಾದೇವ್ ಫೆಬ್ರವರಿ ಮೊದಲ ವಾರಕ್ಕೆ ುಂದೂಡಿದ್ದಾನೆ. ಅಂದರೆ ಹೆಚ್ಚೂ ಕಮ್ಮಿ ಒಂದು ತಿಂಗಳ ೀರ್ಘಾವಧಿ. ಇಷ್ಟೊಂದು ಸಮಯಾವಕಾಶ ಸಿಕ್ಕಿಬಿಟ್ಟರೆ ಕು ಅಪ್ಪಾಜಿಗೌಡರ ಬಣದ ಒಬ್ಬೊಬ್ಬರನ್ನೇ ಕೆಂಚಪ್ಪನ ್ಯಾಂಗ್ ಹಿಡಿದು ಹಾಕಿರುತ್ತದೆ. ಕೊನೆಕೊನೆಗೆ ತಲಾ ದು ಕೋಟಿ ಕೊಟ್ಟು ಗೆದ್ದ ಮಿಕಗಳನ್ನು ಹಳ್ಳಕ್ಕೆ ೀಳಿಸಿಕೊಳ್ಳಲು ಕೆಂಚಪ್ಪ ಅಣಿಯಾಗಿದ್ದಾನೆ. ಇದರ ಭೀತಿಗೆ ದ್ದೇ ಅಪ್ಪಾಜಿಗೌಡ ಮತ್ತು ಪ್ರೊ. ನಾಗರಾಜ್ ಬಣದ 20 ಮಂದಿ ಈಗಾಗಲೇ ಅಜ್ಞಾತವಾಸಕ್ಕೆ ತೆರಳಿದ್ದಾರೆ. ಹುಶಃ ಉತ್ತರ ಭಾರತದ ಯಾವುದೋ ನಿಗೂಢ ಾಣವೊಂದರಲ್ಲಿ ಬಚ್ಚಿಟ್ಟುಕೊಂಡಿರಬಹುದು.

ಎಮ್ಮೆಲ್ಲೆಗಳ ಖರೀದಿ, ಪಂಚಾಯ್ತಿ ಸದಸ್ಯರ ಕಿಡ್ನಾಪ್, ಅದರಿಂದ ಬಚಾವಾಗಲು ಬಚ್ಚಿಟ್ಟುಕೊಳ್ಳುವುದನ್ನು ೇಳಿದವರಿಗೆ ಒಕ್ಕಲಿಗರ ಸಂಘದ ಡೈರೆಕ್ಟರ್‌ಗಳು ೂಗಪಾದ ಸುದ್ದಿ ವಿಚಿತ್ರವೆನಿಸುತ್ತದೆ. ಸಂಘದ ಹಿಡಿತಕ್ಕಾಗಿ ುಷ್ಟಕೂಟವೊಂದು ಕೋಟಿ ಕೋಟಿ ಸುರಿದು ಗೆದ್ದವರನ್ನು ಖರೀದಿಸುತ್ತದೆ ಎಂದರೆ ನಾಳೆ ಹಾಕಿದ ಬಂಡವಾಳಕ್ಕಾಗಿ ಂಘವನ್ನು ತಾನೇ ಲೂಟಿ ಮಾಡಬೇಕು? ಈ ಬಗ್ಗೆ ನಿಷ್ಠ ಪ್ರಜ್ಞೆಯೂ ಇಲ್ಲದ ಒಕ್ಕಲಿಗ ಮುಖಂಡರಿಗೆ ೆನ್ನಬೇಕು? ಹಾಳಾಗಲಿ ಒಕ್ಕಲಿಗರ ಬಗ್ಗೆ ಸೋಕಾಲ್ಡ್ ಾಳಜಿಯುಳ್ಳ ದೇವೇಗೌಡ, ರೇವಣ್ಣರಿಗಾದರೂ ಜವಾಬ್ದಾರಿ ೇಡವೆ?

ಕೆಂಚಪ್ಪ ದೋಚಿರುವುದು ಇಡೀ ಜನಾಂಗದ ಸೊತ್ತನ್ನು. 2000 ಕೋಟಿಯ ಸೊತ್ತು ಲೂಟಿಗೊಂಡಿದೆಯೆಂದರೆ ಅದು ಒಕ್ಕಲಿಗರಿಗಾದ ನಷ್ಟವೆ. ಯಾರು ತಾವೇ ನಿಂತು ಆಯಾಯಿತರನ್ನು ಶಿಕ್ಷಿಸಬೇಕಿತ್ತೋ ಅಂಥವರೇ ಲೂಟಿಕೋರರ ಬೆಂಬಲ ಗಿಟ್ಟಿಸುತ್ತಾರೆಂದರೆ ಸಂಘವಾಗಲಿ, ಜನಾಂಗವಾಗಲಿ ಉಳಿಯುವುದುಂಟೆ? ದೇವೇಗೌಡ, ರೇವಣ್ಣರಿಗೆ ಒಕ್ಕಲಿಗರ ಬಗ್ಗೆ ಕಾಳಜಿ ಬೇಡ ಕನಿಷ್ಠ ಕರುಣೆಯಾದರೂ ಇರಬೇಡವೇ?


● ರಾ. ಸೋಮನಾಥ್

ಮಂಡ್ಯ: ರೋಗಗ್ರಸ್ತ ಪಿಎಸ್‌ಎಸ್‌ಕೆ ಮುಳುಗಿಸಲು ಎಲ್ಲಾ ಪಕ್ಷಗಳು ರೆಡಿ

ಮಂಡ್ಯ ರೈತರ ಜೀವನಾಡಿಯಾಗಿ ಸರ್ಕಾರಿ ಸೌಮ್ಯದ ಮೈಷುಗರ್ ಕಾರ್ಖಾನೆ ಇರುವಂತೆ, ಪಾಂಡವಪುರ ತಾಲ್ಲೂಕಿನಲ್ಲಿರುವ ಸಹಕಾರಿ ಸ್ವಾಮ್ಯದ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ (ಪಿಎಸ್‌ಎಸ್‌ಕೆ) ಈ ಭಾಗದ ರೈತರ ಜೀವನಾಡಿ. ಸುಮಾರು 11 ಸಾವಿರ ಷೇರುದಾರರಿಂದ ಸ್ಥಾಪಿತವಾಗಿರುವ ಪಿಎಸ್‌ಎಸ್‌ಕೆ ಕಾರ್ಖಾನೆ ಇಂದು ರೋಗಗ್ರಸ್ತವಾಗಿದ್ದು ಆರ್ಥಿಕ ಸಂಕಷ್ಟದಿಂದ ತತ್ತರಿಸುತ್ತಿದೆ. ಆಡಳಿತ ಮಂಡಳಿಗೆ ವಕ್ಕರಿಸಿ ಕಾರ್ಖಾನೆಯ ಅಭಿವೃದ್ಧಿ ಮಾಡಬೇಕಾದ ನಿರ್ದೇಶಕರೇ ಸಹಕಾರಿ ತತ್ವ ಮರೆತು ಉಣ್ಣಲು ಕುಳಿತ ಪರಿಣಾಮ ಇಂದು ಪಿಎಸ್‌ಎಸ್‌ಕೆ ಸಂಪೂರ್ಣವಾಗಿ ದಿವಾಳಿಯಾಗಿದೆ. ಇಂತಹ ಪಿಎಸ್‌ಎಸ್‌ಕೆ ಕಾರ್ಖಾನೆಗೆ ನೂತನ ಆಡಳಿತ ಮಂಡಳಿಯ 13 ಮಂದಿ ನಿರ್ದೇಶಕರ ಆಯ್ಕೆಗಾಗಿ ಜನವರಿ 24ರಂದು ಚುನಾವಣೆ ನಡೆಯಲಿದ್ದು, ಅಳಿದುಳಿದಿರುವುದನ್ನು ಬಾಚಿ ಬಾಯಿಗೆ ಹಾಕಿಕೊಳ್ಳಲು ಎಲ್ಲಾ ಪಕ್ಷಗಳು ತುದಿಗಾಲಿನಲ್ಲೇ ನಿಂತಿವೆ.

24ಕ್ಕೆ ಎಲೆಕ್ಷನ್

ಮಾಜಿ ಶಾಸಕ ನೀಲೇಗೌಡರು ಈ ಭಾಗದ ರೈತರ ಸಂಕಷ್ಟಗಳನ್ನು ಕಂಡು, ಅವರನ್ನು ಆರ್ಥಿಕವಾಗಿ ಸ್ವಾವಲಂಬಿಯಾಗುವಂತೆ ಮಾಡಲು ರೈತರನ್ನೇ



ಷೇರುದಾರರನ್ನಾಗಿಸಿ 1959ರಲ್ಲಿ ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ಸ್ಥಾಪನೆ ಮಾಡಿದರು. ಕಾವೇರಿಯ ತಟದಲ್ಲಿ ಕಾರ್ಖಾನೆಯ ಸ್ಥಾಪನೆಯ ನಂತರ ಈ ಭಾಗದ ಕಬ್ಬು ಬೆಳೆಗಾರರ ಸಂಕಷ್ಟ ದೂರವಾಗಿ ರೈತರ ಮೊಗದಲ್ಲಿ ಹರ್ಷ ಉಕ್ಕುಕ್ಕಿ ಹರಿಯಲಾರಂಭಿಸಿತು. ಒಂದು ಕಾಲದಲ್ಲಿ ತನ್ನ ಕಬ್ಬು ಅರೆಯುವ ಸಾಮರ್ಥ್ಯದಿಂದ ರಾಜ್ಯದಲ್ಲೇ ಎರಡನೇ ಸ್ಥಾನದಲ್ಲಿದ್ದ ಪಿಎಸ್‌ಎಸ್‌ಕೆ ರಾಜಕೀಯ ಪಕ್ಷಗಳ ನಾಯಕರೇ ವಕ್ಕರಿಸುವ ಆಡಳಿತ ಮಂಡಳಿಯ ಕೃಪೆಯಿಂದ ಇಂದು 200 ಕೋಟಿಗೂ ಅಧಿಕ ಸಾಲದ ಹೊರೆಯನ್ನು ಹೊತ್ತುಕೊಂಡು ತೀವ್ರ ಸಂಕಷ್ಟದಲ್ಲಿದೆ. ಇಂತಹ ಕಾರ್ಖಾನೆಗೆ ಜನವರಿ 24ಕ್ಕೆ ಚುನಾವಣೆ ನಡೆಯಲಿದ್ದು, ಎಲ್ಲಾ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ರೆಡಿಯಾಗಿವೆ. ನಾಮಪತ್ರ ಸಲ್ಲಿಕೆಗೆ ಜ.17 ಅಂತಿಮ ದಿನವಾಗಿದೆ. ಕಾಂಗ್ರೆಸ್ ಪಕ್ಷದ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು ರೈತಸಂಘ, ಜೆಡಿಎಸ್ ಪಕ್ಷ ಯತ್ನಿಸಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಜೊತೆ ರೈತಸಂಘದ ಪುಟ್ಟಣ್ಣಯ್ಯ ಮಾತುಕತೆ ನಡೆಸಿದ್ದಾರೆ. ಮಾಜಿ ಶಾಸಕ ಸಿ.ಎಸ್.ಪುಟ್ಟರಾಜು ಕೂಡ ಪಕ್ಷಾತೀತವಾಗಿ ಆಡಳಿತ ಮಂಡಳಿ ರಚಿಸುವಂತೆ ಅಂಬರೀಶ್ ಜೊತೆ ಮಾತನಾಡಿದ್ದು, ಒಪ್ಪದಿದ್ದರೆ ಜೆಡಿಎಸ್‌ನಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು ಎಂದು ಹೇಳಿದ್ದಾರೆ.


ಯಾರೇ ಆಡಳಿತ ಮಂಡಳಿಗೆ ಬಂದರೂ ಪಿಎಸ್‌ಎಸ್‌ಕೆ ಕಾರ್ಖಾನೆಯನ್ನು ಉಳಿಸುವುದು ಖಂಡಿತಾ ಸಾಧ್ಯವಿಲ್ಲ. ಇದೂವರೆಗಿನ ಪರಿಸ್ಥಿತಿ ಅವಲೋಕಿಸಿದರೆ ನಷ್ಟದಲ್ಲಿರುವ ಕಾರ್ಖಾನೆಯ ಆಡಳಿತ ಮಂಡಳಿಗೆ ಚುನಾವಣೆ ಅಗತ್ಯವಿತ್ತೆ ಎಂಬ ಪ್ರಶ್ನೆ ಬೃಹದಾಕಾರವಾಗಿದ್ದರೂ, ಚುನಾವಣೆ ನಡೆಸದೆ ಬೇರೆ ದಾರಿ ಇಲ್ಲದಿರುವುದರಿಂದ ಎಲ್ಲಾ ಪಕ್ಷಗಳು ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದು ಖಚಿತವಾಗಿದೆ.

ನಷ್ಟಕ್ಕೇ ಮೇಯ್ದದ್ದೇ ಕಾರಣ


ಪಿಎಸ್‌ಎಸ್‌ಕೆ ಇಂದು ಆರ್ಥಿಕ ಸುಳಿಗೆ ಸಿಲುಕಲು ಕಾರ್ಖಾನೆಯ ಆಡಳಿತ ಮಂಡಳಿಗೆ ಬಂದು ವಕ್ಕರಿಸಿದ ಹೆಗ್ಗಣಗಳೇ ಕಾರಣ. ಕಾಂಗ್ರೆಸ್, ಜೆಡಿಎಸ್, ರೈತರ ಸಂಘದ ಯಾರೇ ನಿರ್ದೇಶಕರಾದರೂ ಕಾರ್ಖಾನೆ ಅವನತಿ ಹೊಂದಿತೇ ವಿನಃ ಅಭಿವೃದ್ಧಿಯತ್ತ ಮುಖ ಮಾಡಲು ಸಾಧ್ಯವೇ ಆಗಲಿಲ್ಲ. ಆರಂಭದಲ್ಲಿ ದಿನವೊಂದಕ್ಕೆ 1700ಟನ್ ಕಬ್ಬು ಅರೆಯುವ ಸಾಮರ್ಥ್ಯ ಹೊಂದಿದ್ದ ಪಿಎಸ್‌ಎಸ್‌ಕೆ ಆಧುನೀಕರಣದ ನಂತರ 3500 ಟನ್ ಕಬ್ಬು ಅರೆಯುವ ಸಾಮರ್ಥ್ಯ ವೃದ್ಧಿಸಿಕೊಂಡಿತು. ಆ ನಂತರವೇ ಕಾರ್ಖಾನೆಗೆ ಕೇಡುಗಾಲ ಆರಂಭಗೊಂಡಿದ್ದು. 2000 ಸಾಲಿನವರೆಗೆ ಆಡಳಿತ ಮಂಡಳಿಯ ಕೈಯಲ್ಲೇ ಪಿಎಸ್‌ಎಸ್‌ಕೆ ಅಧಿಕಾರ ಇತ್ತು. ಆರ್ಥಿಕ ಸಂಕಷ್ಟದ ಕಾರಣದಿಂದ 2001-02ರಲ್ಲಿ ಕಾರ್ಖಾನೆ ಬಾಗಿಲು ಎಳೆದುಕೊಂಡಿತು. 2004ರಲ್ಲಿ ಸರ್ಕಾರ ಪಿಎಸ್‌ಎಸ್‌ಕೆಯನ್ನು ಸೂಪರ್‌ಸೀಡ್ ಮಾಡಿತು. ಇದರಿಂದಾಗಿ ಈ ಭಾಗದ ಕಬ್ಬು ಬೆಳೆಗಾರರು ಅತಂತ್ರರಾದರೆ, ಕಾರ್ಖಾನೆಯನ್ನೇ ನಂಬಿದ್ದ ಕಾರ್ಮಿಕರು ಬೀದಿ ಪಾಲಾದರು. ಕಾರ್ಖಾನೆಯ ಆಡಳಿತ ಮಂಡಳಿಗೆ ಆರಿಸಿಬಂದ ನಿರ್ದೇಶಕರು ಪಕ್ಷಾತೀತವಾಗಿ ಮೇಯ್ದದ್ದೆ ನಷ್ಟಕ್ಕೆ ಕಾರಣ. ರೈತನಾಯಕ ಕೆ.ಎಸ್.ನಂಜುಂಡೇಗೌಡರೇ ಆಡಳಿತ ಮಂಡಳಿಗೆ ಅಧ್ಯಕ್ಷರಾದರೂ ಅವರಿಂದಲೂ ಕಾರ್ಖಾನೆಯನ್ನು ನಷ್ಟದ ಸುಳಿಯಿಂದ ಮೇಲೆತ್ತಲು ಸಾಧ್ಯವಾಗಲಿಲ್ಲ. ಕೆ.ಎಸ್.ನಂಜುಂಡೇಗೌಡರ ಹೆಸರು ಬಂದಷ್ಟು ಹಳ್ಳಹಿಡಿಯಲು ಪಿಎಸ್‌ಎಸ್‌ಕೆ ಅಧ್ಯಕ್ಷಗಾದಿಯೂ ಕಾರಣವಾಯಿತೇ ಹೊರತು ಅವರಿಂದೇನೂ ವಿಶೇಷ ಫಾಯಿದೆ ದೊರಕಲಿಲ್ಲ.

ಕೈಕೊಟ್ಟ ಕೊಠಾರಿ


ರೈತರ ಜೀವನಾಡಿ ಪಿಎಸ್‌ಎಸ್‌ಕೆಯನ್ನು ಪುನಶ್ಚೇತನಗೊಳಿಸಲು ಸಾಕಷ್ಟು ಪ್ರಯತ್ನಗಳು ನಡೆಯಿತು. 2006ರಲ್ಲಿ ಎಚ್.ಡಿ.ಕುಮಾರಸ್ವಾಮಿರವರ ಸಮ್ಮಿಶ್ರ ಸರ್ಕಾರ ಅಸ್ತಿತ್ವದಲ್ಲಿದ್ದಾಗ ಆಗಿನ ಶಾಸಕರಾದ ಸಿ.ಎಸ್.ಪುಟ್ಟರಾಜು ಹಾಗೂ ರಮೇಶ್‌ಬಾಬು ಬಂಡಿಸಿದ್ದೇಗೌಡ ಪಿಎಸ್‌ಎಸ್‌ಕೆ ಕಾರ್ಖಾನೆ ಉಳಿಸಿಕೊಳ್ಳಲು ಹೆಚ್.ಡಿ.ಕುಮಾರಸ್ವಾಮಿ ಬೆನ್ನತ್ತಿದ್ದ ಕಾರಣ ಕಾರ್ಖಾನೆಯನ್ನು ತಮಿಳುನಾಡು ಮೂಲದ ಕೊಠಾರಿ ಕಂಪನಿಗೆ 80 ಕೋಟಿ ರೂಪಾಯಿಗೆ 7 ವರ್ಷಕಾಲ ಲೀಸ್‌ಗೆ ವಹಿಸಿಕೊಡಲಾಯಿತು. ಆಗ ಶಾಸಕರಾಗಿದ್ದ ಸಿ.ಎಸ್.ಪುಟ್ಟರಾಜು ಹಾಗೂ ರಮೇಶ್‌ಬಾಬು 30 ವರ್ಷಗಳ ಲೀಸ್‌ಗೆ ಕೊಠಾರಿ ಕಂಪನಿಗೆ ವಹಿಸುವಂತೆ ಸರ್ಕಾರಕ್ಕೆ ಒಪ್ಪಿಗೆ ಪತ್ರವನ್ನು ನೀಡಿದ್ದರು. ಸಹ ವಿದ್ಯುತ್ ಘಟಕ, ಮದ್ಯಸಾರ ಘಟಕದಿಂದ ಒಂದಷ್ಟು ಲಾಭ ಮಾಡಿಕೊಳ್ಳಬಹುದು ಎಂದು ಬಂದ ಕೊಠಾರಿ ಕಂಪನಿಗೆ ಸರ್ಕಾರ ಪೂರಕವಾಗಿ ಸ್ಪಂದಿಸಲಿಲ್ಲ. ಸಹ ವಿದ್ಯುತ್ ಘಟಕ, ಎಥೆನಾಲ್, ಮದ್ಯಸಾರ ಘಟಕ ಸ್ಥಾಪನೆಯಾಗದೆ ಕಾರ್ಖಾನೆ



ಅಂಬರೀಶ್



ಪುಟ್ಟಣ್ಣಯ್ಯ



ಪುಟ್ಟರಾಜು

ನಡೆಸಲು ಸಾಧ್ಯವಿಲ್ಲವೆಂದು ಮೂರು ವರ್ಷಕ್ಕೆ ಒಪ್ಪಂದ ಮುರಿದುಕೊಂಡ ಕೊಠಾರಿ ಕಂಪನಿ 14 ಕೋಟಿ ಭರಿಸಿ, ಕಾರ್ಖಾನೆಯಲ್ಲಿದ್ದ ಅಳಿದುಳಿದ ವಸ್ತುಗಳನ್ನೇ ಬಾಚಿಕೊಂಡು ಜನರ ಕೈಗೆ ಸಿಕ್ಕು 2009ರಲ್ಲಿ ಪರಾರಿಯಾಯಿತು.

50 ಕೋಟಿ ಕೊಟ್ರೂ ಉದ್ಧಾರವಾಗಲಿಲ್ಲ

ನಂತರ ಬಂದ ಬಿಜೆಪಿ ಸರ್ಕಾರದಲ್ಲಿ ಸಿಎಂ ಆಗಿದ್ದ ಯಡಿಯೂರಪ್ಪ ತವರೂರಿನ ಋಣ ಎಂದೆಲ್ಲಾ ಅರಚಾಡಿ 2010ರಲ್ಲಿ ಪಿಎಸ್‌ಎಸ್‌ಕೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸುವ ಭಾಗವಾಗಿ ತನ್ನ ಶಿಷ್ಯ ಮೈಷುಗರ್ ಅಧ್ಯಕ್ಷ ನಾಗರಾಜಪ್ಪನ ಪದತಲಕ್ಕೆ ಅರ್ಪಿಸಿ 35 ಕೋಟಿ ದುಡಿಮೆ ಬಂಡವಾಳ ಹಾಗೂ ಸಾಲ ತೀರಿಸಲು 15 ಕೋಟಿ ಹಣವನ್ನು ಕೊಟ್ಟರು. ಈ 50 ಕೋಟಿ ಹಣವನ್ನು ಪ್ರಾಮಾಣಿಕವಾಗಿ ಅಭಿವೃದ್ಧಿಗೆ ಬಳಸಿದ್ದರೆ, ಪಿಎಸ್‌ಎಸ್‌ಕೆ ಒಂದಷ್ಟು ಚೇತರಿಸಿಕೊಳ್ಳಬಹುದಿತ್ತು. ಆದರೆ ನಾಗರಾಜಪ್ಪ ಹಾಗೇನೂ ಮಾಡದ ಪರಿಣಾಮ ಕಾರ್ಖಾನೆಯ ಪ್ರಗತಿನಿಂತ ಜಾಗದಿಂದ ಒಂದಿಂಚೂ ಅಲ್ಲಾಡಲಿಲ್ಲ. ಪರಿಣಾಮ ಕಾರ್ಖಾನೆ ಮತ್ತಷ್ಟು ಅವನತಿಯತ್ತ ಜಾರಿತೇ ಹೊರತು ಅಭಿವೃದ್ಧಿಯಂತೂ ಆಗಲೇ ಇಲ್ಲ.

ನಾಗರಾಜಪ್ಪನ ಸುಪರ್ದಿಗೆ ಪಿಎಸ್‌ಎಸ್‌ಕೆ ಬಂದನಂತರ ಸಲಹಾ ಸಮಿತಿ ರಚಿಸಲಾಯಿತು. ಪ್ರತಿಯೊಂದು ಕೆಲಸಗಳನ್ನು ಸಲಹಾ ಸಮಿತಿಯ ಮುಂದಿಟ್ಟೇ ಮಾಡಬೇಕಿತ್ತು, ಗೋಣಿಚೀಲ ಖರೀದಿ, ಕಾರ್ಮಿಕರ ನೇಮಕ ಸೇರಿದಂತೆ ಪ್ರತಿಯೊಂದು ಖರೀದಿಯೂ ಸಲಹಾ ಸಮಿತಿಯ ಮುಂದೆ ತರಬೇಕಿತ್ತು, ಆದರೆ ಯಡಿಯೂರಪ್ಪನ ಶಿಷ್ಯ ನಾಗರಾಜಪ್ಪ ಸಲಹಾ ಸಮಿತಿಯ ಗಮನಕ್ಕೂ ತರದೆ ಎಲ್ಲವನ್ನೂ ಮಾಡಿದರು.

ಮೂರು ಸಾವಿರ ಟನ್ ಮೊಲಾಸಿಸ್ ಅನ್ನು ಕಡಿಮೆ ದರದಲ್ಲಿ ಮಾರಾಟ ಮಾಡಲು ನಾಗರಾಜಪ್ಪ ಮುಂದಾಗಿದ್ದ ವಿಷಯ ತಿಳಿದ ರೈತ ಹೋರಾಟಗಾರ ಕಿರಂಗೂರು ಪಾಪು ಆಗ ಸರ್ಕಾರದ ಮುಖ್ಯಕಾರ್ಯದರ್ಶಿಯಾಗಿದ್ದ ರಂಗನಾಥ್ ಗಮನಕ್ಕೆ ತಂದರು. ಆಗ ರಂಗನಾಥ್ ಮಂಡ್ಯ ಡಿಸಿ ಕೃಷ್ಣಯ್ಯನವರಿಗೆ ಆದೇಶ ನೀಡಿ ಮೊಲಾಸಿಸ್ ಮಾರದಂತೆ ತಡೆದರು. ಇದರಿಂದಾಗಿ ಕಾರ್ಖಾನೆಗೆ ಸುಮಾರು 30 ಲಕ್ಷ ರೂ.ಗಳಷ್ಟು ನಷ್ಟವಾಗುವುದು ತಪ್ಪಿತು. ಅನಗತ್ಯವಾಗಿ 86 ಮಂದಿ ಕಾರ್ಮಿಕರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಂಡಿದ್ದನ್ನು ಕಿರಂಗೂರು ಪಾಪು ಪ್ರಶ್ನಿಸಿ ಸರ್ಕಾರದ ಗಮನಕ್ಕೆ ತಂದಿದ್ದರಿಂದ ಕಾರ್ಖಾನೆಗೆ ಒಂದಷ್ಟು ನಷ್ಟ ತಪ್ಪಿತು.

17 ಕೋಟಿ ಬಾಕಿ

2013ರಲ್ಲಿ ಪಿಎಸ್‌ಎಸ್‌ಕೆ ಕಾರ್ಖಾನೆಯನ್ನು ಮತ್ತೆ ಸಹಕಾರಿ ಕ್ಷೇತ್ರಕ್ಕೆ ಸೇರ್ಪಡೆಗೊಳಿಸಿ, ಜ್ಯೋತೀಂದ್ರ ಎಂಬ ಅಧಿಕಾರಿಯನ್ನು ವ್ಯವಸ್ಥಾಪಕ ನಿರ್ದೇಶಕರನ್ನಾಗಿ ಕೂರಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಪಿಎಸ್‌ಎಸ್‌ಕೆ 1.30ಲಕ್ಷ ಟನ್ ಕಬ್ಬು ಅರೆದಿದೆ. ಕಬ್ಬು ಅರೆದು 6 ತಿಂಗಳಾದರೂ ರೈತರಿಗೆ ಬಾಕಿ ಹಣ ಪಾವತಿ ಮಾಡಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ರಮ್ಯಾಗೆ ಪುಟ್ಟಣ್ಣಯ್ಯ ಬೆಂಬಲ ಸೂಚಿಸಿದ ಕಾರಣದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮರ್ಜಿಗೆ ಬಿದ್ದು 10 ಕೋಟಿ ಹಣ ನೀಡಿದ್ದಾರೆ. ಅದರಲ್ಲಿ 5 ಕೋಟಿ ಹಣವನ್ನು ರೈತರ ಮುಂಗಡ ಹಣ ನೀಡಲು ಹಾಗೂ ಉಳಿದ 5 ಕೋಟಿ ಹಣವನ್ನು ಸಾಲಕ್ಕೆ ಸರಿಮಾಡಲಾಗಿದೆ. ಇನ್ನು ರೈತರಿಗೆ 17 ಕೋಟಿ ರೂ. ಬಾಕಿ ಪಾವತಿಸಬೇಕಿದೆ. ಕಾರ್ಖಾನೆಯಲ್ಲಿ ಈ 85 ಸಾವಿರ ಕ್ವಿಂಟಾಲ್ ಸಕ್ಕರೆ ಹಾಗೂ 11 ಸಾವಿರ ಟನ್ ಮೊಲಾಸಸ್ ದಾಸ್ತಾನು ಇದ್ದು, ಇವೆರಡರಿಂದ 31 ಕೋಟಿ ರೂ. ಬರುವ ನಿರೀಕ್ಷೆ ಇದೆ. ನೂತನ ಆಡಳಿತ ಮಂಡಳಿಯೇ ಮಾರಾಟದ ನಿರ್ಧಾರವನ್ನು ತೆಗೆದುಕೊಳ್ಳಬೇಕಿರುವುದು ಕೂಡ ರಾಜಕೀಯ ಪಕ್ಷಗಳು ಚುನಾವಣೆಯನ್ನು ಗಂಭೀರವಾಗಿ ತೆಗೆದುಕೊಳ್ಳುವಂತೆ ಮಾಡಿದೆ.


200 ಕೋಟಿಗೂ ಅಧಿಕ ನಷ್ಟ

ಪಿಎಸ್‌ಎಸ್‌ಕೆ ಕಾರ್ಖಾನೆ 200 ಕೋಟಿಗೂ ಅಧಿಕ ನಷ್ಟದಿಂದ ತತ್ತರಿಸುತ್ತಿದೆ. ಅಪೆಕ್ಸ್, ಡಿಸಿಸಿ ಬ್ಯಾಂಕ್‌ಗಳಲ್ಲಿ ಸುಮಾರು 200 ಕೋಟಿಯಷ್ಟು ಸಾಲ ಹೊಂದಿದೆ. ಕಾರ್ಖಾನೆಯ ಸಾಲದ ಪ್ರಮಾಣ, ಆಧುನಿಕರಣ ಮಾಡುವ ಸಂದರ್ಭದಲ್ಲಿ ಎನ್‌ಸಿಡಿಸಿಯಿಂದ ಪಡೆದ 26 ಕೋಟಿ ಹಣ, ಷುಗರ್ ಡೆವಲಪ್‌ಮೆಂಟ್ ಫೆಡರೇಷನ್‌ನಿಂದ ಪಡೆದ 11 ಕೋಟಿ ಹಣವನ್ನು ಇದೂವರೆಗೂ ತೀರಿಸಿಲ್ಲ. ಹಾಗೆಯೇ ಬೈಲಾದ ಪ್ರಕಾರ ಚುನಾವಣೆ ನಡೆಸುವ ಬಗ್ಗೆ ವಾರ್ಷಿಕ ಮಹಾಸಭೆಯಲ್ಲಿ ಇಟ್ಟು ಅನುಮೋದನೆ ಪಡೆದಿಲ್ಲ. ಇದ್ಯಾವುದು ನೂತನ ಮಂಡಳಿಗೆ ನಿರ್ದೇಶಕರಾಗಿ ಆರಿಸಿ ಬರಲು ಹೊರಟಿರುವ 13 ಮಂದಿಗೆ ತಿಳಿಸಿಲ್ಲ.

ಹಿಂದಿನ ಆಡಳಿತ ಮಂಡಳಿ ಸರಿಯಾಗಿ ಆಡಳಿತ ನಡೆಸದ ಕಾರಣ ಪಿಎಸ್‌ಎಸ್‌ಕೆ ಕಾರ್ಖಾನೆ ಇಂದು ಸಂಪೂರ್ಣ ದಿವಾಳಿಯಾಗಿ ನಿಂತಿದೆ. ದುರ್ಗತಿ ದಿನಗಳನ್ನು ಎಣಿಸುತ್ತಿರುವ ಸಂದರ್ಭದಲ್ಲಿ ಪಿಎಸ್‌ಎಸ್‌ಕೆ ನೂತನ ಮಂಡಳಿಯ ಚುನಾವಣೆ ಜನವರಿ 24ಕ್ಕೆ ನಿಗದಿಯಾಗಿದೆ. ಕಾಂಗ್ರೆಸ್ ಜೊತೆ ಕೂಡಿಕೆ ಮಾಡಿಕೊಳ್ಳಲು ಎಂಎಲ್‌ಎ ಪುಟ್ಟಣ್ಣಯ್ಯ ಬಣ ಯತ್ನಿಸುತ್ತಿದ್ದರೆ, ಜೆಡಿಎಸ್‌ನ ಪುಟ್ಟರಾಜು, ರಮೇಶ್‌ಬಾಬು ಸಹ ಕಾಂಗ್ರೆಸ್ ಜೊತೆ ಮೈತ್ರಿಗೆ ಮುಂದಾಗಿದ್ದಾರೆ. ಆಡಳಿತ ಮಂಡಳಿ ಬಂದರೆ ಲೂಟಿ ಇನ್ನು ಜಾಸ್ತಿ ಎಂದು ಗೋಳಾಡುವ ರೈತರು ಮಾತ್ರ ನಷ್ಟದಲ್ಲಿರುವ ಸಂದರ್ಭದಲ್ಲಿ ಚುನಾವಣೆ ಬೇಕಿತ್ತೇ ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಪಿಎಸ್‌ಎಸ್‌ಕೆಯಲ್ಲಿ ಅಳಿದುಳಿದುದ್ದನ್ನೇ ಬಾಯಿಗೆ ಹಾಕಿಕೊಳ್ಳಲು ನೂತನ ನಿರ್ದೇಶಕರು ಗರಿಗರಿ ಬಟ್ಟೆ ತೊಟ್ಟು ಮಿಂಚುತ್ತಿರುವುದು ಮಾತ್ರ ದುರಂತವಾಗಿದೆ. ಪಿಎಸ್‌ಎಸ್‌ಕೆಯನ್ನು ಉಳಿಸುವರೇ? ಹುರಿದು ಮುಕ್ಕುವರೇ? ಎಂಬುದನ್ನು ನಿರ್ಧರಿಸಲು ಹೆಚ್ಚಿನ ದಿನಗಳು ಬೇಕಿಲ್ಲ.

● ಮಂಡ್ಯ ನಾಗೇಶ್

ಜಕಣಾಚಾರಿಯ ಶಿಲ್ಪಕ್ಕೆ ಏಷಿಯನ್ ಪೇಂಟ್ ಹಚ್ಚಬಹುದೇ?



ಈ ವಿಷಯದ ಬಗ್ಗೆ ಕಳೆದ ಒಂದು ವರ್ಷದಿಂದ ಮತ್ತೆ ಮತ್ತೆ ಮಾತಾಡಿದ್ದೇನೆ. ಈಗ ಮತ್ತೆ ಅದೇ ವಿಷಯ ಚರ್ಚೆಗೆ ಬಂದಿದೆ. ನೂರು ಬಾರಿ ಹೇಳಿದರೆ ಸುಳ್ಳು ನಿಜವಾಗುತ್ತದೆ ಎಂಬಂತೆ ಬೇಡವಾದುದನ್ನು ಬಯಸುವವರು ಮಾತ್ರ ತಮ್ಮ ನಿಲುವನ್ನು ಬದಲಿಸದೆ ದನಿ ಎತ್ತಿ ಕೂಗುತ್ತಾ ಇದ್ದಾರೆ. ಹೀಗಾದಾಗ ಯಾವುದೇ ಸೃಜನಶೀಲ ಜಗತ್ತಿನಲ್ಲಿ ಬದುಕುವವನ ಒಳಗಿರುವ ಕಲಾವಿದ ಗಲಿಬಿಲಿಗೊಳ್ಳುತ್ತಾನೆ. ನಾನು ಕಳೆದ ಒಂದು ವರ್ಷದಿಂದ ಹೇಳಿದ್ದು ಯಾವ ಗಾಳಿಯಲ್ಲಿ ತೇಲಿತು ಎಂಬ ಗೊಂದಲ ಮೂಡುತ್ತದೆ. ಈಗ ಮತ್ತೊಮ್ಮೆ ಅದೇ ಸದ್ದು ನಗಾರಿಯಂತೆ ಕಳೆದ ಒಂದು ವಾರದಿಂದ ಕೇಳುತ್ತಾ ಇದೆ.

"ಡಬ್ಬಿಂಗ್ ನಿಷೇಧ ತೆರವುಗೊಳಿಸಿ" ಎಂಬ ಕೂಗನ್ನು ನಮ್ಮ ಮುದ್ರಣ ಮಾಧ್ಯಮ ಹಾಗೂ ಟೆಲಿವಿಷನ್ ಸುದ್ದಿವಾಹಿನಿಗಳು ನಿರಂತರವಾಗಿ ಜೀವಂತವಾಗಿರಿಸುವ ಪ್ರಯತ್ನದಲ್ಲಿ ಕನ್ನಡಿಗರ ಮುಂದೆ ಚರ್ಚೆ ಎಂಬ ಹೆಸರಲ್ಲಿ ಜಗಳಗಳನ್ನು ಇಡುತ್ತಾ ಇವೆ. ಈ ಹಂತದಲ್ಲಿ ಅದಾಗಲೇ ಅನೇಕ ಬಾರಿ ಆಡಿರುವ ಮಾತುಗಳನ್ನು ಮತ್ತೊಮ್ಮೆ ನಿಮ್ಮೊಡನೆ ಹಂಚಿಕೊಳ್ಳುತ್ತಾ ಇದ್ದೇನೆ. ಇಲ್ಲಿ ಇರುವುದು ಕೇವಲ ನನ್ನ ಅಭಿಪ್ರಾಯ ಮಾತ್ರ ಎಂದು ಸ್ಪಷ್ಟಪಡಿಸಿ ಮುಂದುವರೆಯುತ್ತೇನೆ.

ಡಬ್ಬಿಂಗ್ ಎಂದರೇನು?

ಇದು ದೃಶ್ಯಮಾಧ್ಯಮದಲ್ಲಿ ಮಾತ್ರ ಇರುವಂತಹ ಸಾಧನ. ಯಾವುದೇ ನಟನ ತುಟಿ ಚಲನೆಗೆ ತಕ್ಕಂತೆ ಮಾತು ಕೂಡಿಸುವುದು ಈ ತಂತ್ರಜ್ಞಾನದ ಕೆಲಸ. ಇಲ್ಲಿ ಕಲಾವಿದ ತಾನು ಚಿತ್ರೀಕರಣದ ಸಮಯದಲ್ಲಿ ಆಡಿದ ಮಾತನ್ನು ಸ್ಟುಡಿಯೋ ಒಂದರಲ್ಲಿ ಮತ್ತೆ ತನ್ನ ತುಟಿ ಚಲನೆಗೆ ತಕ್ಕಂತೆ ಮಾತಾಡಿರುತ್ತಾನೆ. ಈ ಕೆಲಸವನ್ನು ಡಬ್ಬಿಂಗ್ ಎಂದು ಕರೆಯುತ್ತಾರೆ. ಹಾಗೆ ನೋಡಿದರೆ ನಮ್ಮಲ್ಲಿ ತಯಾರಾಗುವ ಎಲ್ಲಾ ಚಿತ್ರಗಳಲ್ಲೂ ಹೀಗೆ ಮಾತಿನ ಮರುಜೋಡಣೆಯ/ಡಬ್ಬಿಂಗ್ ಕೆಲಸ ಆಗಿಯೇ ಇರುತ್ತದೆ.


ಆದರೆ ಈಗ ಪ್ರಶ್ನೆ ಇರುವುದು ಇಂತಹ ಚಿತ್ರಗಳ ಕುರಿತಲ್ಲ. ಪರಭಾಷೆಯ ಚಿತ್ರಗಳನ್ನು ಕನ್ನಡಕ್ಕೆ ಡಬ್ ಮಾಡಿ ತೋರಿಸಿ ಎಂದು ಹಲವರು ಕೇಳುತ್ತಾ ಇದ್ದಾರೆ. ಅವರಲ್ಲಿ ಕೆಲವರು ನ್ಯಾಯಾಲಯದ ಬಾಗಿಲನ್ನೂ ತಟ್ಟಿದ್ದಾರೆ. ನಮಗೆ ಇಂತಹದು ಬೇಕು ಎಂದು ಕೇಳುವ ಹಕ್ಕು ಎಲ್ಲರಿಗೂ ಇದೆ. ಹಾಗೆಯೇ ಇಂತಹದೊಂದು ಅನುಕೂಲದ ಮೂಲಕ ಪರಭಾಷೆಯ ಚಿತ್ರಗಳನ್ನು ನೋಡಬೇಕೆಂದು ಕೆಲವರು ಬಯಸುತ್ತಾ ಇರುವುದು ಮೇಲ್ನೋಟಕ್ಕೆ ತಪ್ಪು ಎನಿಸುವುದಿಲ್ಲ. ಅದು ಅವರ ಹಕ್ಕು, ಅದನ್ನೇ ಅವರು ಕೇಳುತ್ತಾ ಇದ್ದಾರೆ.

ಆದರೆ ನಮ್ಮ ನಾಡಿನಲ್ಲಿ ಪರಭಾಷೆಯ ಚಿತ್ರಗಳನ್ನು ಕನ್ನಡ ಭಾಷೆಗೆ ಡಬ್ ಮಾಡಿ ಸಿನಿಮಾ ಬಿಡುಗಡೆ ಮಾಡುವ ಸಂಪ್ರದಾಯ ಅಥವಾ ಕಟ್ಟುಪಾಡು ಕಳೆದ ಐದು ದಶಕಗಳಿಂದ ಇಲ್ಲ. ಇದಕ್ಕೆ 1960ರ ದಶಕದಲ್ಲಿ ಅ.ನ.ಕೃಷ್ಣರಾಯರ ನಾಯಕತ್ವದಲ್ಲಿ ಡಾ.ರಾಜಕುಮಾರ್ ಸೇರಿದಂತೆ ಅನೇಕ ಕನ್ನಡ ಪರ ಹೋರಾಟಗಾರರು ಮಾಡಿದ ಚಳವಳಿ ಕಾರಣವಾಗಿತ್ತು. ಕನ್ನಡಿಗರ ಹೋರಾಟದಿಂದ ಪರಭಾಷಾ ಚಿತ್ರಗಳು ಕನ್ನಡದ ಮಾತು ಜೋಡಿಸಿಕೊಂಡು ಬಿಡುಗಡೆ ಆಗುವ ಸಂಪ್ರದಾಯಕ್ಕೆ ತೆರೆ ಬಿದ್ದಿತ್ತು. ಈ ಐವತ್ತು ವರ್ಷಗಳ ಹಿಂದಿನ ಸಂಪ್ರದಾಯವನ್ನು ಈಗ ಕೆಲವರು ವಿರೋಧಿಸಿ ಮಾತಾಡುತ್ತಾ ಇದ್ದಾರೆ. ಆ ಕಾಲದ ಅಗತ್ಯಗಳಿಗಾಗಿ ಅಂದು ಚಳವಳಿ ಆಗಿದೆ. ಈ ಕಾಲದ ನಮ್ಮ ಅಗತ್ಯಗಳು ಬೇರೆಯೇ ಇದೆ. ಹಾಗಾಗಿ ಕನ್ನಡಿಗರೇ ರೂಪಿಸಿಕೊಂಡಿದ್ದ ಕಟ್ಟುಪಾಡು ಒಂದನ್ನು ಮುರಿದು ಪರಭಾಷೆಯ ಚಿತ್ರಗಳು ಕನ್ನಡದಲ್ಲಿ ಡಬ್ ಆಗಿ ಬಿಡುಗಡೆ ಆಗಲಿ ಎಂದು ನನ್ನ ಗೆಳೆಯರೇ ಹಲವರು ಬೇಡುತ್ತಾ ಇದ್ದಾರೆ. ಹೀಗೆ ಬೇಡುವಾಗ ಕನ್ನಡದಲ್ಲಿ ಇರುವ ಡಬ್ಬಿಂಗ್ ನಿಷೇಧವನ್ನು ತೆರವುಗೊಳಿಸಿ ಎನ್ನುತ್ತಾ ಚಿತ್ರರಂಗದಲ್ಲಿ ದುಡಿಯುತ್ತಾ ಇರುವವರ ಮೇಲೆ ಹರಿಹಾಯುತ್ತಾ ಇದ್ದಾರೆ.

ಮೊದಲಿಗೆ ನಿಷೇಧ ಆಗಿರುವುದೇನು ಎಂದು ಪರಿಶೀಲಿಸಿದರೆ ಕನ್ನಡ ಚಿತ್ರರಂಗ ಎಂಬುದು ಯಾವುದೋ ಕಾನೂನು ರೂಪಿಸಿ ಯಾವುದೇ ಡಬ್ಬಿಂಗ್‌ಗೆ ನಿಷೇಧ ಮಾಡಿಲ್ಲ ಎಂಬುದು ಇತಿಹಾಸದಿಂದಲೇ ತಿಳಿಯುತ್ತಾ ಇದೆ. ಕನ್ನಡ ಹೋರಾಟಗಾರರು ಚಿತ್ರ ಪ್ರದರ್ಶಕರ ಜೊತೆಗೆ ಮಾತಾಡಿ ರೂಪಿಸಿದ ಒಂದು ವ್ಯವಸ್ಥೆಯಾಗಿ ಈ ಸಂಪ್ರದಾಯ ನಡೆದುಕೊಂಡು ಬರುತ್ತಾ ಇದೆ. ಹೀಗಾಗಿ ಯಾರು ಈ ನಿಷೇಧವನ್ನು ತೆರವುಗೊಳಿಸಬೇಕು ಎಂಬುದು ಉತ್ತರಿಸಲಾಗದ ಪ್ರಶ್ನೆ. ಇನ್ನು ನ್ಯಾಯಾಲಯವಾದರೂ ಇಂತಹದೊಂದು ನಿಷೇಧವನ್ನು ತೆರವುಗೊಳಿಸಬೇಕು ಎಂದರೆ ಯಾರನ್ನು ಕೇಳಬೇಕು? ಯಾರು ತೆರವುಗೊಳಿಸಬೇಕು ಎಂಬುದು ಯಕ್ಷ ಪ್ರಶ್ನೆ. ಹಿರಿಯರು ಮಾಡಿದ ಸಂಪ್ರದಾಯವನ್ನು ನಂತರದ ತಲೆಮಾರುಗಳು ಪಾಲಿಸಿಕೊಂಡು ಬರುತ್ತಾ ಇರುವುದು ಮಾತ್ರ ಅನೂಚಾನವಾಗಿ ಈವರೆಗೆ ನಡೆದುಕೊಂಡು ಬಂದಿದೆ.

ಇನ್ನು 1960ರ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅ.ನ.ಕೃ ಅವರು ಮಾಡಿದ ಭಾಷಣದಲ್ಲಿ ಕನ್ನಡಕ್ಕೆ ಡಬ್ಬಿಂಗ್ ಮಾರಕ ಎಂಬ ಮಾತುಗಳು ಮೊದಲು ಕೇಳಿಸುತ್ತದೆ. ನಂತರ ಅದು ಕನ್ನಡ ಚಳವಳಿಯಾಗಿ ಡಬ್ಬಿಂಗ್ ನಿಲ್ಲುತ್ತದೆ. ನಂತರ ಜಿ.ವೆಂಕಟಸುಬ್ಬಯ್ಯನವರು ಅಧ್ಯಕ್ಷರಾಗಿದ್ದ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ತೆಗೆದುಕೊಂಡು ಏಳು ನಿರ್ಣಯಗಳಲ್ಲಿ "ಕನ್ನಡಕ್ಕೆ ಪರಭಾಷೆಯ ಚಿತ್ರಗಳು ಡಬ್ಬಿಂಗ್ ಆಗಬಾರದು" ಎಂಬುದು ಸಹ ಒಂದು ನಿಲುವಾಗಿದೆ. ನಂತರ ಕೋ.ಚೆನ್ನಬಸಪ್ಪನವರು ಅಧ್ಯಕ್ಷರಾಗಿದ್ದು ಬಿಜಾಪುರದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪರಭಾಷೆಯ ಚಿತ್ರಗಳು ಕನ್ನಡಕ್ಕೆ ಡಬ್ ಆಗುವುದನ್ನು ನಿಷೇಧಿಸಬೇಕು ಎಂಬ ನಿರ್ಣಯ ತೆಗೆದುಕೊಳ್ಳಲಾಗಿದೆ.

ಹೀಗೆ ಕನ್ನಡ ಸಂಘಟನೆಗಳನ್ನು ಹೊರತುಪಡಿಸಿ ಇನ್ನಾವುದೇ ಸಿನಿಮಾ ಸಂಬಂಧಿ ಕೆಲಸ ಮಾಡುವ ಸಂಘಟನೆ ಈ ಪರಭಾಷೆಯ ಚಿತ್ರಗಳಿಗೆ ಕನ್ನಡವನ್ನು ಜೋಡಿಸುವ ಪ್ರಕ್ರಿಯೆಯನ್ನು ಎಲ್ಲಿಯೂ ನಿಷೇಧಿಸಿಲ್ಲ... ಈಗ ಈ ನಿಷೇಧವನ್ನು ತೆರವುಗೊಳಿಸಬೇಕಾದವರು ಯಾರು ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ.



ಅಮರಶಿಲ್ಪಿ ಜಕಣ

ಚಿತ್ರಕೃಪೆ: ಚಿತ್ರಲೋಕ.ಕಾಮ್

ಈಗಲಾದರೂ ಸಿಸಿಐ ಸಂಸ್ಥೆಯು ತನ್ನ ತನಿಖಾ ವರದಿಯನ್ನು ನೀಡಿದೆ. ಅಲ್ಲಿಂದಾಚೆಗೆ ವಾದ? ಪ್ರತಿವಾದ ಆಗಿ ನಂತರ ತೀರ್ಪು ಬರುವುದು ಬಾಕಿ ಇದೆ. ಇದಾಗುವುದಕ್ಕೆ ಇನ್ನೂ ಸಮಯವಿದೆ. ಕಾನೂನಿನ ಕಣ್ಣು ಈ ನಾಡಿನ ವಿವರಗಳನ್ನು ಹೇಗೆ ಅರ್ಥೈಸಬಹುದು ಎಂಬುದು ಈಗಲೇ ಊಹಿಸಲಾಗದು. ಮಡೆಸ್ನಾನದ ವಿರುದ್ಧ ಕೋರ್ಟಿಗೆ ಹೋದವರಿಗೆ ಸ್ಟೇಟಸ್ ಕೋ ಮುಂದುವರೆಸಿ ಎಂದಂತೆ ಇಲ್ಲೂ ಹೇಳಬಹುದು ಅಥವಾ ಗ್ರಾಹಕರ ಬಯಕೆ ಈಡೇರಲೂ ಬಹುದು. ಅದು ನಾಳೆಯ ವಿಷಯ. ಈಗ ಈ ಡಬ್ಬಿಂಗ್ ಎನ್ನುವುದು ಯಾಕೆ ಬೇಡ ಎಂಬುದಕ್ಕೆ ನನ್ನ ಅಭಿಪ್ರಾಯಗಳನ್ನು ಬಿಚ್ಚಿಡುತ್ತೇನೆ.

ಡಬ್ಬಿಂಗ್ ಎಂಬುದು ಅಪೂರ್ಣ ಕೃತಿರಚನೆ

ನಟನೆ ಎಂಬುದಕ್ಕೆ ನಾಲ್ಕು ಅಂಗಗಳಿವೆ. ಆಂಗಿಕ, ವಾಚಿಕ, ಆಹಾರ್ಯ, ಸಾತ್ವಿಕ ಎಂದು ಆ ನಾಲ್ಕು ಅಂಗಗಳನ್ನು ಗುರುತಿಸಲಾಗಿದೆ. ಆದರೆ ಡಬ್ಬಿಂಗ್ ಎಂಬುದರಲ್ಲಿ ಯಾರದೋ ಆಂಗಿಕಕ್ಕೆ ಇನ್ಯಾರದೋ ವಾಚಿಕ ಸೇರಿಕೊಳ್ಳುತ್ತದೆ. ರಜನೀಕಾಂತ್ ಅಭಿನಯಕ್ಕೆ ಕನ್ನಡದ ಶ್ರೇಷ್ಠ ಕಲಾವಿದನೇ ಮಾತಿನ ಮರುಜೋಡಣೆಯನ್ನು ಕನ್ನಡಕ್ಕಾಗಿ ಮಾಡಿದರೂ ಅದು ರಜನೀಕಾಂತ್ ಅವರ ನಟನೆಗೆ ಹೊಂದುವುದಿಲ್ಲ ಎಂಬುದು ಇಲ್ಲಿನ ಮುಖ್ಯ ಅಂಶ. ಹೀಗಾಗಿ ಡಬ್ಬಿಂಗ್ ಎಂಬುದು ಕೃತಕ, ಕೃತಿಮ, ಫೇಕ್. ಇಂತಹ ಕೃತಿಮ ಮತ್ತು ಅಪೂರ್ಣ ಕೃತಿಯನ್ನು ಯಾರಿಗಾದರೂ ಉಣಬಡಿಸುವುದು ಮೂಲ ಕಲಾವಿದನಿಗೆ ಮಾಡುವ ಅಪಚಾರ. ಈ ಕಾರಣಕ್ಕಾಗಿ ಡಬ್ಬಿಂಗ್ ಎನ್ನುವುದನ್ನು ಯಾವುದೇ ಭಾಷೆಯ ಸಿನಿಮಾದಿಂದ ಇನ್ನಾವುದೇ ಭಾಷೆಯ ಸಿನಿಮಾಕ್ಕೆ ಮಾಡುವುದನ್ನು ನಾನು ವಿರೋಧಿಸುತ್ತೇನೆ.

ಡಬ್ಬಿಂಗ್ ಅನ್ನು ಅನುವಾದ ಪ್ರಕ್ರಿಯೆ ಎಂದು ಅನೇಕರು ಹೇಳಿ ನಮ್ಮನ್ನು ನಂಬಿಸುತ್ತಾರೆ. ಆದರೆ ಅದು ಖಂಡಿತಾ ಅನುವಾದವಲ್ಲ. ಅದು ಕೇವಲ ಯಾರದೋ ತುಟಿ ಚಲನೆಗೆ ಯಾರೋ ಮಾತು ಸೇರಿಸುವ ತಂತ್ರ ಚಮತ್ಕಾರ ಮಾತ್ರ.

ಈ ಡಬ್ಬಿಂಗ್ ಎಂಬುದು ಕನ್ನಡಕ್ಕೆ ಬಂದಾಗ ಏನಾಗುತ್ತದೆ ಎಂಬುದಕ್ಕೆ ಉದಾಹರಣೆಯಾಗಿ ನಮ್ಮೆದುರು ಅದಾಗಲೇ ಡಬ್ಬಿಂಗ್ ಆಗಿಯೇ ಬರುತ್ತಾ ಇರುವ ಜಾಹೀರಾತುಗಳಿವೆ. ಅವುಗಳನ್ನು ನೋಡಿ ಭಾಷೆ ಬಲ್ಲವರು ನಗಬಹುದು, ಬೈದುಕೊಳ್ಳಬಹುದು. ಆದರೆ ಅದು ಕೇವಲ ಜಾಹೀರಾತು ಎಂದು ಸುಮ್ಮನಾಗಬಹುದು. ಆದರೆ ಅದೇ ರೀತಿಯ ತುಟಿ ಚಲನೆಗೆ ಮಾತು ಜೋಡಿಸುವ ಚಮತ್ಕಾರವು ಕಥನ ಚಿತ್ರಕ್ಕೆ ಬಂದಾಗ ಕತೆಗಾಗಿ ಸಿನಿಮಾ ನೋಡುವವರಿಗೆ ಖಂಡಿತಾ ಪೂರ್ಣತೆಯ ಭಾವ ದೊರೆಯುವುದಿಲ್ಲ. ಹೀಗಾಗಿಯೇ ಜಪಾನಿನ ಶ್ರೇಷ್ಠ ನಿರ್ದೇಶಕ ಅಕಿರಾ ಕುರಾಸಾವ ತನ್ನ ಚಿತ್ರಗಳನ್ನು ಯಾವುದೇ ಕಾರಣಕ್ಕೂ ಡಬ್ ಮಾಡಿ ನೋಡಬೇಡಿ, ಬದಲಿಗೆ ಸಬ್ ಟೈಟಲ್ ಮೂಲಕ ನೋಡಿ ಎಂದು ಅಮೆರಿಕಾದಲ್ಲಿ ಪ್ರಶಸ್ತಿಯೊಂದನ್ನು ಸ್ವೀಕರಿಸುತ್ತಾ ಮಾತಾಡುತ್ತಾನೆ. ದಕ್ಷಿಣ ಭಾರತದ ಖ್ಯಾತ ನಟರಾಗಿದ್ದ ಎಸ್.ವಿ.ರಂಗಾರಾವ್ ಅವರಂತೂ ನನ್ನ ನಟನೆಯ ಚಿತ್ರಗಳನ್ನು ನಿರ್ಮಾಪಕರು ಬೇರೆಯ ಭಾಷೆಗೆ ಡಬ್ ಮಾಡುವುದಾದರೆ ನಾನು ಅಂತಹ ಚಿತ್ರಗಳಲ್ಲಿ ಅಭಿನಯಿಸುವುದಿಲ್ಲ ಎಂದು 'ಮಾಯಾಬಜಾರ್' ಚಿತ್ರದ ಕನ್ನಡಕ್ಕೆ ಡಬ್ ಆದ ಚಿತ್ರವನ್ನು ನೋಡಿ ಹೇಳಿಕೆ ನೀಡುತ್ತಾರೆ. ಇದೇ ರೀತಿಯ ಮಾತನ್ನು ಖ್ಯಾತ ನಟಿ ಸಾವಿತ್ರಿಯವರು ಸಹ ಆಡುತ್ತಾರೆ.

ಈ ಎಲ್ಲಾ ನಟರು, ಕಲಾವಿದರು ಈ ಮಾತನ್ನು

ಆಮುವುದಕ್ಕೆ ಇರುವ ಕಾರಣವಿಷ್ಟೆ. ಯಾವುದೇ ಒಂದು ಭಾಷೆಯನ್ನು ಬಳಸಿ ಅಭಿನಯಿಸುವಾಗ ಆಯಾ ಕಲಾವಿದ ತನ್ನದೇ ಆದ ಪ್ರತಿಭೆಯನ್ನು ಬಳಸಿ ಆ ಪಾತ್ರವನ್ನು ಕಟ್ಟಿರುತ್ತಾನೆ. ಅದಕ್ಕೆ ಮತ್ತೊಂದು ಭಾಷೆಯನ್ನು ಆರೋಪಿಸುವಾಗ ತುಟಿ ಚಲನೆಯ ಅವಧಿಗೆ ಮಾತನ್ನು ಕೂರಿಸುತ್ತಾರೆ. ಅನುವಾದವಾಗಿ ಮಾತನ್ನು ಜೋಡಿಸುವುದಿಲ್ಲ. ಉದಾಹರಣೆಗೆ ನೋಡಿ. ಜೂಹಿ ಚಾವ್ಲಾ ಅಭಿನಯದ ಕುರ್ಕುರೆ ಎಂಬ ಜಾಹೀರಾತು. ಮೂಲದಲ್ಲಿ ಇರುವ ವಾಕ್ಯ "ತೋಡಾ ಟೇಡಾಸ ಹೇ ಮಗರ್ ಮೇರಾ ಹೇ" ಅದನ್ನು ಕನ್ನಡಕ್ಕೆ ಡಬ್ ಮಾಡುವವರು "ಸ್ವಲ್ಪ ತಿರುಚಾಗಿದೆ. ಆದರೆ ಚೆನ್ನಾಗಿದೆ" ಎಂದು ಡಬ್ ಮಾಡಿದ್ದಾರೆ. ಇಲ್ಲಿ ಮೂಲ ವಾಕ್ಯದ ಅನುವಾದ ಆಗಿಲ್ಲ ಬದಲಿಗೆ ಮೂಲ ವಾಕ್ಯದ ಅವಧಿಗೆ ಕನ್ನಡದ್ದು ಎನಿಸುವ ಮಾತನ್ನು ಕೂಡಿಸಲಾಗಿದೆ. ಇಂತಹ ಹಲವು ಉದಾಹರಣೆಗಳನ್ನು ಈ ಲೇಖನದ ಓದುಗರೂ ನೋಡಿರುತ್ತಾರೆ. ಅನುವಾದ ಎಂಬುದು ಬೇರೆಯ ಭಾಷೆಯಿಂದ ಕನ್ನಡಕ್ಕೆ ಕತೆಗಳನ್ನು ತಂದ ಹಾಗೆ. ಅಲ್ಲಿ ಮೂಲಕೃತಿಯ ಸಂಸ್ಕೃತಿಯನ್ನು ಹೂರಣವನ್ನು ಕನ್ನಡದ ಸಂಸ್ಕೃತಿಯ ಜೊತೆಗೆ ಅನುಸಂಧಾನ ಮಾಡಿ ಮೂಲ ಕೃತಿಕಾರನ ಸೃಜನಶೀಲ ಶಕ್ತಿಯನ್ನು ಮತ್ತೊಂದು ಭಾಷೆಗೆ ಉಣಬಡಿಸಲಾಗುತ್ತದೆ. ಚಿತ್ರವೊಂದು ಅನುವಾದ ಆಗಬೇಕೆಂದರೆ ಆ ಅರ್ಥದಲ್ಲಿ ಪುನರವತರಣಿಕೆ ಆಗಬೇಕು. ಮೂಲ ಚಿತ್ರದ ಆಶಯವನ್ನು ಹಿಡಿದು ಕನ್ನಡಿಗರಿಗಾಗಿ ಪುನರ್ ನಿರ್ಮಿತಿ ಆಗಬೇಕು. ಮಲೆಯಾಳಂನ 'ಮಣಿಚಿತ್ರತ್ತಾಳ್' ತರಹದ ಸಿನಿಮಾ ಕನ್ನಡದಲ್ಲಿ 'ಆಪ್ತಮಿತ್ರ' ಆದಾಗಲೇ ಹೆಚ್ಚು ಜನ ಅದನ್ನು ನೋಡಿ ಆನಂದಿಸಿದರು. ಇದು ಸಿನಿಮಾದಲ್ಲಿ ಅನುವಾದ ಪ್ರಕ್ರಿಯೆ ಆಗುವ ಕ್ರಮ. ಅಕಸ್ಮಾತ್ ಮೂಲ ಮಲೆಯಾಳ ಚಿತ್ರ 'ಮಣಿಚಿತ್ರತ್ತಾಳ್'ಗೆ ನಮ್ಮವರೇ ಆದ ವಿಷ್ಣುವರ್ಧನ್ ಅವರು ಕನ್ನಡದ ಧ್ವನಿ ನೀಡಿದ್ದರೂ ನಮಗೆ ಅಂತಹ ಚಿತ್ರದಿಂದ 'ಆಪ್ತಮಿತ್ರ' ಸಿನಿಮಾದಲ್ಲಿ ಸಿಕ್ಕ ಸಂತೃಪ್ತಿ, ಪೂರ್ಣತೆ ಸಿಗುತ್ತಾ ಇರಲಿಲ್ಲ. ಹೀಗಾಗಿ ಅನುವಾದ ಪ್ರಕ್ರಿಯೆ ಅಲ್ಲದ ಹಾಗೂ ಅಪೂರ್ಣ ತರ್ಜುಮೆಯ ಗುಣಗಳನ್ನು ಹೊಂದಿದ ಡಬ್ಬಿಂಗ್ ಎನ್ನುವುದು ಮೂಲಕೃತಿಕಾರನಿಗೆ ಮಾಡಿದ ಅಪಚಾರವೇ ಆಗುತ್ತದೆ.

ಮತ್ತೊಂದು ಮುಖ್ಯ ವಿಷಯವೆಂದರೆ, ಯಾವುದೇ ಚಿತ್ರತಯಾರಕ ತಾನು ಕತೆಯೊಂದನ್ನು ಆಯ್ಕೆ ಮಾಡಿಕೊಂಡಾಗಲೇ ಅದನ್ನು ಯಾವ ಭಾಷೆಯಲ್ಲಿ ಹೇಳಬೇಕೆಂದು ಸಹ ನಿರ್ಧರಿಸಿರುತ್ತಾನೆ ಮತ್ತು ತಾನು ಆಯ್ದುಕೊಂಡ ಭಾಷೆಯಲ್ಲಿಯೇ ಚಿತ್ರ ನಿರ್ಮಿಸುತ್ತಾನೆ. ಅಂತಹ ಒಂದು ಕೃತಿಯನ್ನು ಮತ್ತೊಂದು ಭಾಷೆಯ ಕೃತಕ ಪೋಷಾಕು ತೊಡಿಸಿ ಸಿದ್ಧಪಡಿಸುವುದು ಮೂಲಕೃತಿಕಾರನ ಆಯ್ಕೆಯ ಹಕ್ಕನ್ನು ಉಲ್ಲಂಘಿಸಿದ ಹಾಗೆಯೇ. ಹೀಗಾಗಿಯೇ ಯಾವುದೇ ಭಾಷೆಯಲ್ಲಿ ತಯಾರಾದ ಕೃತಿ ಮತ್ತಾವುದೇ ಪ್ರಾದೇಶಿಕ ಭಾಷೆಗೆ ಡಬ್ಬಿಂಗ್ ಮೂಲಕ ಸಿದ್ಧವಾಗುವುದು ಸೃಜನಶೀಲತೆಯ ಮೇಲೆ ಮಾಡಿದ ದುರಾಕ್ರಮಣವೇ ಆಗಿರುತ್ತದೆ. ಕೃತಿಕಾರನ ಆಯ್ಕೆಯನ್ನು ಗ್ರಾಹಕನ ಕಾರಣಗಳಿಗಾಗಿ ಬದಲಿಸುವುದು ಬೇಲೂರಿನಲ್ಲಿ ಜಕಣಾಚಾರಿ ಕೆತ್ತಿಟ್ಟ ಕಲಾಕೃತಿಗೆ ಆಧುನಿಕ ಕಂಪೆನಿಗಳ ಪೈಂಟ್ ಹಚ್ಚಿದ ಹಾಗೆ. ಇಂತಹುದನ್ನು ಈ ನಾಡಿಗರು ಖಂಡಿತಾ ಒಪ್ಪಬಾರದು.

ಆದರೆ ಈ ಡಬ್ಬಿಂಗ್ ಬೇಕು ಎಂದು ಕೇಳುತ್ತಾ ಇರುವವರಲ್ಲಿ ಅನೇಕರು ನನ್ನ ಆತ್ಮೀಯ ಗೆಳೆಯರು. ಅವರ ಬಗ್ಗೆ ನನಗೆ ಅತೀವ ಪ್ರೀತಿ ಹಾಗೂ ಗೌರವಗಳಿವೆ. ಅವರೆಲ್ಲರ ಅಭಿಪ್ರಾಯಗಳನ್ನು ನಾನು ಗೌರವಿಸುತ್ತೇನೆ.



ಅವರು ಕೇಳುತ್ತಾ ಇದ್ದಾರೆ. ಜಗತ್ತಿನಲ್ಲಿ ಎಲ್ಲಿಯೂ ಈ ಡಬ್ಬಿಂಗ್ ಎಂಬ ಕೃತ್ರಿಮವನ್ನು ಯಾರೂ ತಡೆದಿಲ್ಲ, ನಮ್ಮ ನಾಡಿನಲ್ಲಿ ಮಾತ್ರ ಯಾಕೆ ಈ ಕಟ್ಟುಪಾಡು ಎನ್ನುತ್ತಾ ಇದ್ದಾರೆ. ನಾವು ಗ್ರಾಹಕರು. ನಮಗೆ ಬೇಕಾದ್ದನ್ನು ನೋಡ್ತೇವೆ. ಚೆನ್ನಾಗಿದ್ದರೆ ಚಪ್ಪಾಳೆ, ಇಲ್ಲವೆಂದರೆ ಇಲ್ಲ ಎನ್ನುತ್ತಾ ಇದ್ದಾರೆ. ಜೊತೆಗೆ ಜ್ಞಾನವಾಹಿನಿಗಳನ್ನು ನಮ್ಮಿಂದ ತಪ್ಪಿಸುತ್ತಾ ಇದ್ದೀರಿ ಎನ್ನುತ್ತಾ ಇದ್ದಾರೆ. ಈ ಎಲ್ಲಾ ಮಾತುಗಳೂ ಒಪ್ಪತಕ್ಕ ಮಾತುಗಳೇ.

ಈ ಮಾತುಗಳಲ್ಲಿ ಜ್ಞಾನವಾಹಿನಿಗಳು ಎಂದು ನನ್ನ ಗೆಳೆಯರು ಗುರುತಿಸುತ್ತಾ ಇರುವ ಡಿಸ್ಕವರಿ, ನ್ಯಾಟ್ಜಿಯೋ ಮುಂತಾದ ವಾಹಿನಿಗಳ ಸಾಕ್ಷ್ಯಚಿತ್ರಗಳನ್ನು ಕನ್ನಡಕ್ಕೆ ತರುವುದಕ್ಕೆ ಖಂಡಿತಾ ಯಾವುದೇ ಅಡ್ಡಿಯನ್ನು ಯಾರೂ ಮಾಡಿಲ್ಲ. ಅಂತಹ ಅನೇಕ ಕಾರ್ಯಕ್ರಮಗಳು ನಮ್ಮಲ್ಲಿ ಬರುತ್ತಾ ಇವೆ. ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ಅನೇಕ ಸಾಕ್ಷ್ಯಚಿತ್ರಗಳನ್ನು ಈಗಲೂ ದೂರದರ್ಶನವೇ ಪ್ರಸಾರ ಮಾಡುತ್ತಾ ಇದೆ. ಇನ್ನೂ ದಿನದ ಇಪ್ಪತ್ನಾಲ್ಕು ಗಂಟೆಯೂ ಕಾರ್ಟೂನ್ ಚಿತ್ರಗಳನ್ನೇ ಪ್ರಸಾರ ಮಾಡುವ ಚಿಂಟೂ ಟಿವಿ ಎಂಬ ವಾಹಿನಿಯೂ ನಮ್ಮಲ್ಲಿದೆ. ಆದಾಗಲೇ ಪ್ರಸಾರ ಕಾಣುತ್ತಾ ಇರುವುದನ್ನೇ ಈ ನನ್ನ ಗೆಳೆಯರು ಮತ್ತೊಂದು ಬ್ರಾಂಡ್ ನೇಮ್ ಹೆಸರಲ್ಲಿ ಕೇಳುತ್ತಾ ಇದ್ದಾರೇನೋ? ಆ ಬ್ರಾಂಡ್ ಸೃಷ್ಟಿಕರ್ತರೇ ನನ್ನ ಗೆಳೆಯರ ಬಯಕೆ ತೀರಿಸುವ ಕೆಲಸ ಮಾಡಬೇಕಷ್ಟೆ. ಆದರೆ ಆ ವಾಹಿನಿಯವರು ತಾವು ಕನ್ನಡದಲ್ಲಿ ತಮ್ಮ ವಾಹಿನಿಯನ್ನು ತರದೆ ಇರುವುದಕ್ಕೆ ಕನ್ನಡದಲ್ಲಿ ಡಬ್ಬಿಂಗ್ ನಿಷೇಧವಿದೆ ಎಂಬ ಕಾರಣ ಕೊಟ್ಟು ಉತ್ತರ ಬರೆಯುತ್ತಾರೆ. ನನ್ನ ಗೆಳೆಯರು ಮತ್ತಷ್ಟು ಕುಪಿತರಾಗುತ್ತಾರೆ. ವಾಸ್ತವವಾಗಿ ಆ ವಾಹಿನಿಯವರು ಹೇಳಿರುವುದು ಸುಳ್ಳು ಎಂದು ಹೇಳಿದರೂ ಇವರಿಗೆ ಚಿತ್ರರಂಗದ ಸಂಘಟನೆಗಳು ಇದನ್ನು ತಡೆದಿವೆ ಎಂಬ ಸಿಟ್ಟು. ವಾಸ್ತವವಾಗಿ ಚಿತ್ರರಂಗದ ಯಾವುದೇ ಸಂಘಟನೆ ಆ ವಾಹಿನಿಗಳಿಗೆ ಕನ್ನಡಕ್ಕೆ ಬರಬೇಡಿ ಎಂದು ಹೇಳಿಯೇ ಇಲ್ಲ.


ಈ ಪ್ರಶ್ನೆಯಲ್ಲದೆ ನನ್ನ ಗೆಳೆಯರು ತಮ್ಮನ್ನು ತಾವು ಗ್ರಾಹಕರು ಎಂದು ಕರೆದುಕೊಂಡು 'ಅವತಾರ್', 'ಟೈಟಾನಿಕ್', 'ದಬಾಂಗ್', 'ಇಂದಿರನ್' ತರಹದ ಚಿತ್ರಗಳನ್ನು ಕನ್ನಡದಲ್ಲಿ ಡಬ್ ಮಾಡಿ ನೋಡಬೇಕು ಎನ್ನುತ್ತಾ ಇದ್ದಾರೆ. ಇದು ಆದಾಗಲೇ ನಾನು ತಿಳಿಸಿದಂತೆ ಅಪೂರ್ಣ ಮತ್ತು ಕೃತ್ರಿಮ ಕೃತಿಯನ್ನು ಬೇಡುವ ಪರಿಸ್ಥಿತಿ. ಈ ಸಂಬಂಧ ಯಾವುದೇ ಭಾಷೆಯಿಂದ ಮತ್ತಾವುದೇ ಭಾಷೆಗೆ ಯಾವುದೇ ಸಿನಿಮಾ ಡಬ್ ಆಗುವುದನ್ನು ನಾನು ವೈಯಕ್ತಿಕವಾಗಿ ವಿರೋಧಿಸುತ್ತೇನೆ. ಅದಕ್ಕೆ ಕಾರಣಗಳನ್ನು ಈ ಹಿಂದೆಯೇ ನೀಡಿದ್ದೇನೆ.

ಈ ನನ್ನ ಗೆಳೆಯರಲ್ಲದೆ ಕೆಲವು ಚಿತ್ರ ನಿರ್ಮಾಪಕರು ಸಹ ಡಬ್ಬಿಂಗ್ ಬರಬೇಕು ಎನ್ನುತ್ತಾ ಇದ್ದಾರೆ. ಇದಕ್ಕೆ ಅವರು ಕೊಡುತ್ತಾ ಇರುವ ಕಾರಣ ಯಾವುದೋ ನಟ ಅವರಿಗೆ ದಿನಾಂಕ ನೀಡಿಲ್ಲ ಅಥವಾ ಆತನ ಸಂಬಳ ಕೈಗೆಟುಕುತ್ತಾ ಇಲ್ಲ ಎಂಬುದು. ಯಾರದೋ ದಿನಾಂಕ ಸಿಗಲಿಲ್ಲ, ಹಣ ಜಾಸ್ತಿ ಎಂದರೆ ಮತ್ತೊಬ್ಬ ಅಂತಹ ನಟನನ್ನು ಸೃಷ್ಟಿಸಬಹುದಾದ ಶಕ್ತಿ ಇರುವ ನಿರ್ಮಾಪಕರೇ ಹೀಗೆ ಹತಾಶೆಯಿಂದ ಮಾತಾಡುವುದು ಹಾಸ್ಯಾಸ್ಪದವಾಗಿ ಕಾಣುತ್ತಾ ಇದೆ. ಹೀಗೆ ಯಾರದೋ ಡೇಟ್‌ಗಾಗಿ ಕಾದಿದ್ದರೆ ಆ ಕಾಲದಲ್ಲಿ ಪುಟ್ಟಣ್ಣ ಕಣಗಾಲ್ ಅವರು 'ನಾಗರಹಾವು' ಮಾಡಲು ಆಗುತ್ತಾ ಇರಲಿಲ್ಲ, ಪವನ್‌ಕುಮಾರ್ 'ಲೂಸಿಯಾ' ಮಾಡಲಾಗುತ್ತಾ ಇರಲಿಲ್ಲ, ಸುನೀ 'ಸಿಂಪಲ್ಲಾಗ್ ಒಂದು ಲವ್ ಸ್ಟೋರಿ' ತಯಾರಿಸಲಾಗುತ್ತಾ ಇರಲಿಲ್ಲ. ಒಳ್ಳೆಯ ಚಿತ್ರಗಳನ್ನು ನಮ್ಮ ನಾಡಿನ ಜನ ಎಲ್ಲಾ ಕಾಲದಲ್ಲಿಯೂ ಬೆಂಬಲಿಸಿದ್ದಾರೆ. ಮುಂದೆಯೂ ಬೆಂಬಲಿಸುತ್ತಾರೆ. ಹಾಗಾಗಿ ಈ ನಿರ್ಮಾಪಕರು ಹತಾಶರಾಗುವ ಬದಲಿಗೆ ಹೊಸ ಸ್ಟಾರ್‌ಗಳನ್ನು ಸೃಷ್ಟಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಆಗ ಖಂಡಿತ ಯಶಸ್ಸು ಅವರದ್ದಾಗುತ್ತದೆ. ಸೋಲುಗಳ ಲೆಕ್ಕ ಹಿಡಿದು ನಮಗೆ ಯಶಸ್ಸು ಬರಲಿಲ್ಲ ಎಂದು ಹತಾಶ ಮಾತುಗಳನ್ನಾಡುವುದನ್ನು ಮೊದಲಿಗೆ ಈ ನಿರ್ಮಾಪಕರು ಬಿಡಬೇಕಾಗಿದೆ.

ಇದೆಲ್ಲದರ ಆಚೆಗೆ ಡಬ್ಬಿಂಗ್ ಎಂಬುದನ್ನು ನಿಜವಾಗಿ ಬಯಸುತ್ತಾ ಇರುವವರು ವಾಹಿನಿಗಳನ್ನು ನಡೆಸುತ್ತಾ ಇರುವ ಬಹುರಾಷ್ಟ್ರೀಯ ಕಂಪೆನಿಗಳವರು. ಈಗ ಆ ವಾಹಿನಿಗಳಲ್ಲಿ ಬರುತ್ತಾ ಇರುವ ಧಾರಾವಾಹಿಗಳು ಬಹುತೇಕ ಪುನರವತರಣಿಕೆಗಳು. ಅಂತಹ ಪುನರವತರಣಿಕೆಗಳನ್ನು ತಯಾರಿಸುವ ಖರ್ಚಿಗಿಂತ ಡಬ್ಬಿಂಗ್ ಮಾಡುವುದಕ್ಕೆ ತಗಲುವ ಖರ್ಚು ತೀರಾ ಕಡಿಮೆ. ಪುನರವತರಣಿಕೆ ಮಾಡಿಯೂ ಲಾಭ ಕಾಣದ ಇಂತಹ ಬಹುರಾಷ್ಟ್ರೀಯ ಕಂಪೆನಿಗಳ ಜನ ಡಬ್ಬಿಂಗ್‌ಗೆ ತೆರೆಮರೆಯಲ್ಲಿ ನಿಂತು 'ಡಬ್ಬಿಂಗ್ ಸಿನಿಮಾ ಬೇಕು' ಎಂದು ಕೂಗುತ್ತಾ ಇರುವವರ ಬೆನ್ನಿಗೆ ಇದ್ದಾರೆ. ಕೆಲವು ಬೃಹತ್ ಕಂಪೆನಿಗಳಂತೂ ಡಬ್ಬಿಂಗ್ ಸಿನಿಮಾ ಇತ್ಯಾದಿಗಳನ್ನು ಕನ್ನಡನಾಡಿಗೆ ತಂದು ಸುರಿಯಲು ಸಾಕಷ್ಟು ಹಣವನ್ನು ತೊಡಗಿಸಿದೆ. ಹೀಗೆ ಡಬ್ ಆದ ಸಿನಿಮಾಗಳು ಖಂಡಿತವಾಗಿ ಸಿನಿಮಾಮಂದಿರದಲ್ಲಿ ಬಹುಕಾಲ ನಿಲ್ಲುವುದಿಲ್ಲ, ಆದರೆ ಆದಾಗಲೇ ನೆರೆಯ ರಾಜ್ಯಗಳಲ್ಲಿ ಆಗಿರುವಂತೆ ಟೆಲಿವಿಷನ್ ಮೂಲಕ ಪ್ರಸಾರವಾಗುತ್ತವೆ. ಆ ಮೂಲಕ ಕನ್ನಡದಲ್ಲಿ ಸ್ವತಂತ್ರ ಅಥವಾ ಪುನರವತರಣಿಕೆಯ ಕೃತಿಗಳನ್ನು ಮಾಡುತ್ತಾ ಇರುವವರಿಗೆ ಇದ್ದ ಅವಕಾಶಗಳನ್ನು ಕಿತ್ತುಕೊಳ್ಳುತ್ತದೆ ಅಷ್ಟೆ.

ಇಂತಹ ಸಿನಿಮಾಗಳಿಂದ ಅಥವಾ ಧಾರಾವಾಹಿಗಳಿಂದ ಸ್ಪರ್ಧೆ ಉಂಟಾಗುತ್ತದೆ ಎಂಬುದು ಶುದ್ಧ ಸುಳ್ಳು. ಇಂತಹ ಫೇಕ್ ಕೃತಿಗಳು ಜಗತ್ತಿನಾದ್ಯಂತ ಯಶಸ್ವಿಯಾಗಿಲ್ಲ. ಆದರೆ ನಮ್ಮ ಮಾರುಕಟ್ಟೆಯನ್ನು ಹಿಗ್ಗಿಸುವ ಬದಲು ನಮ್ಮ ನಾಡಿಗರನ್ನು ಅವಕಾಶ ವಂಚಿತರನ್ನಾಗಿ ಮಾಡಿ ಕೀಳರಿಮೆಯಿಂದ ನರಳುವಂತೆ ಮಾಡುತ್ತವೆ. ಅದಕ್ಕೆ ಉದಾಹರಣೆಯಾಗಿ ಹಾಲಿವುಡ್‌ನ ಡಬ್ ಆದ ಸಿನಿಮಾಗಳು ದಕ್ಷಿಣ ಅಮೆರಿಕದ ಹಲವು ದೇಶಗಳಲ್ಲಿ ಮಾಡಿದ ಅನಾಹುತವನ್ನು ನೆನೆಯಬಹುದು. ಒಂದು ಕಾಲಕ್ಕೆ ಜಗತ್ತಿನಲ್ಲಿ ಅತಿಹೆಚ್ಚು ಎನಿಸುವ ಸಿನಿಮಾಗಳನ್ನು ತಯಾರಿಸುತ್ತಾ ಇದ್ದ ಸ್ಪಾನಿಷ್ ದೇಶಗಳಾದ ಅರ್ಜೆಂಟೈನಾ, ಬ್ರೆಜಿಲ್ ಮುಂತಾದ ದೇಶಗಳು ಅಲ್ಲಿಗೆ ಹಾಲಿವುಡ್ ಸಿನಿಮಾಗಳು ಡಬ್ ಆಗಿ ಬರಲು ಆರಂಭವಾದೊಡನೆ ಸಂಪೂರ್ಣ ನಾಶವಾಗಿದ್ದನ್ನು ಜಾಗತಿಕ ಇತಿಹಾಸ ನೋಡಿದೆ. ಇಂತಹದೇ ಪ್ರಕ್ರಿಯೆ ಇಟಲಿಯಲ್ಲಿ ಆಗಿದ್ದನ್ನು ಕಂಡಿದ್ದೇವೆ. ನೆರೆಯ ಆಂಧ್ರದ ಕಲಾವಿದರು ಕಳೆದ ಒಂದು ವರ್ಷದಿಂದ ಡಬ್ಬಿಂಗ್ ಸಿನಿಮಾ ಮತ್ತು ಧಾರಾವಾಹಿಗಳನ್ನು ನಿಲ್ಲಿಸಿ ಎಂದು ಮುಷ್ಕರ ನಡೆಸಿದ್ದಾರೆ. ತಮಿಳುನಾಡಿನ ಕಲಾವಿದರ ಸಂಘವೂ ಸಹ ಈ ಡಬ್ಬಿಂಗ್ ಪ್ರಕ್ರಿಯೆ ವಿರುದ್ಧ ಹೋರಾಡುತ್ತಾ ಇದೆ. ಮಲೆಯಾಳದವರೂ ಸಹ ಈಗ ಹೋರಾಟಕ್ಕೆ ಇಳಿದಿದ್ದಾರೆ. ಹೀಗೆ ನೆರೆಯ ನಾಡಿನಲ್ಲಿ ವಿರೋಧಿ ದನಿ ಏಳುತ್ತಾ ಅನಾಹುತ ತಪ್ಪಿಸುವ ಪ್ರಯತ್ನ ಆಗುತ್ತಾ ಇರುವಾಗ ನಮ್ಮ ನಾಡಿನಲ್ಲಿ ಕೆಲವರು ಈ ಫೇಕ್ ಕೃತಿಗಳನ್ನು ಬಯಸಿ ಕೂಗುತ್ತಿರುವುದು "ಬಿಟಿ ಬೀಜಗಳೇ ಶ್ರೇಷ್ಠ, ಅದನ್ನೇ ಬೆಳೆಯಿರಿ" ಎಂದು ರೈತರನ್ನು ದಿಕ್ಕು ತಪ್ಪಿಸುತ್ತಾ, ಅನೇಕ ರೈತರ ಆತ್ಮಹತ್ಯೆಗೆ ಕಾರಣವಾಗಿರುವ ವ್ಯಾಪಾರಿಗಳ ಕೂಗಿನಂತೆಯೇ ಕೇಳುತ್ತಾ ಇದೆ.

ಈ ವಿಷಯದ ಬಗ್ಗೆ ಕಳೆದ ಒಂದು ವರ್ಷದಲ್ಲಿ ಆಡಿರುವ ಮಾತುಗಳೇ ಒಂದು ಬಂಡಿಯಷ್ಟಿದೆ. ಈಗ ಮತ್ತೆ ಒಂದಷ್ಟು ಬರೆದಿದ್ದೇನೆ. ಬರೆಯಬಹುದಾದ ಇನ್ನೂ ಅನೇಕ ವಿಷಯಗಳನ್ನು ಸ್ಥಳಾಭಾವದಿಂದ ಬಿಟ್ಟಿದ್ದೇನೆ. ಇಲ್ಲಿರುವುದು ಕೇವಲ ನನ್ನ ಅಭಿಪ್ರಾಯ ಮಾತ್ರ ಎಂದು ಮತ್ತೊಮ್ಮೆ ನೆನಪಿಸುತ್ತಾ ಉಳಿಯುತ್ತೇನೆ.



● ಬಿ.ಸುರೇಶ

ಕೆನರಾ ಲೋಕಸಭಾ ಅಖಾಡ


04 ⏮

ಸೊಲ್ಲೆತ್ತಿಲ್ಲ, ಬರೀ ಬೋಗಸ್ ರೋಡ್ ಶೋಗಳೇ ಇವರ ಬಂಡವಾಳ.

ಹೇಳಿ-ಕೇಳಿ ಜಾತಿ ಅಖಾಡವಾದ ಉತ್ತರ ಕನ್ನಡದಲ್ಲಿ ಕ್ರಿಶ್ಚಿಯನ್ ಸಮುದಾಯದ ನಿವೇದಿತ್ ಮತ್ತು ಅತೀ ಸಣ್ಣ ಜಾತಿಯಾದ ಕೊಂಕಣಿ (ಜಿಎಸ್‌ಬಿ) ಪಂಗಡದ ಪ್ರಶಾಂತ್‌ಗೆ ಸ್ವಕೀಯರ ಬೆಂಬಲವೂ ಅಷ್ಟಕ್ಕಷ್ಟೇ. ಮ್ಯಾಗಿ ಕಂಡರೆ ಜಿಲ್ಲೆಯ ದೊಡ್ಡ ಸಮುದಾಯವಾದ ಬ್ರಾಹ್ಮಣರಿಗೆ ಆಗದು; ದೇಶಪಾಂಡೆಯೆಂದರೆ ಇನ್ನೊಂದು ಪ್ರಬಲ ಜಾತಿಯಾದ ದೀವರು (ಈಡಿಗರು) ಹಲ್ಲು ಕಡಿಯುತ್ತಾರೆ. ಬಿಜೆಪಿಯಿಂದ ಬ್ರಾಹ್ಮಣ ಕ್ಯಾಂಡಿಡೇಟ್ ಕಣಕ್ಕಿಳಿಯುವುದರಿಂದ ದೇಶಪಾಂಡೆಗೆ ಆ ಜಾತಿ ಮತವೂ ಸೆಳೆಯಲು ಸಾಧ್ಯವಿಲ್ಲ, ಬ್ರಾಹ್ಮಣರೂ ಈತನ ಅಹಂಕಾರದಿಂದ ಬೇಸತ್ತಿದ್ದಾರೆ. ಇಷ್ಟಾದರೂ ಆತ ಖಾನಾಪುರ-ಕಿತ್ತೂರು ಕಡೆಯಲ್ಲಿ ಮರಾಠಿ ಗಿಮಿಕ್ ಮಾಡುವುದರಿಂದ, ಉತ್ತರ ಕನ್ನಡದಲ್ಲಿ ಹಣಬಲದ ಬನಾವಟಿ ಮಾಯೋದರಿಂದ ನಿವೇದಿತ್‌ಗಿಂತ ಪ್ರಶಾಂತ್‌ನೇ ಶಕ್ತಿಶಾಲಿ.

ಹಾಗಂತ ಪ್ರಶಾಂತ ದೇಶಪಾಂಡೆ ಗೆಲ್ಲುವುದು ಕಷ್ಟ. ಮ್ಯಾಗಿ ಬಣ ಅದೆಷ್ಟೇ ಖರ್ಚಾಗಲಿ ದೇಶಪಾಂಡೆ ಮಗ ಪಾರ್ಲಿಮೆಂಟ್ ಪ್ರವೇಶಿಸಲು ಬಿಡಲಾರರು. ಹಾಗೆಯೇ ಅಮ್ಮ ಮ್ಯಾಗಿಯನ್ನೇ ಮಣಿಸಿ ಮೂಲೆಗೆ ತಳ್ಳಿದ ಸೈತಾನ ದೇಶಪಾಂಡೆಗೆ ಆಕೆಯ ಮಗ ನಿವೇದಿತ್ ಯಾವ ಲೆಕ್ಕವೂ ಅಲ್ಲ. ಅಲ್ಲಿಗೆ ಪ್ರಶಾಂತ್ ಅಥವಾ ನಿವೇದಿತ್ ಯಾರೇ ಕಾಂಗ್ರೆಸ್ ಕ್ಯಾಂಡಿಡೇಟಾದರೂ ಮತ್ತೆ ಮತಾಂಧ-ಭ್ರಷ್ಟ-ಕರ್ಮಗೇಡಿ ಬಿಜೆಪಿಯ ಅನಂತ್ಮಾಣಿಯ ರೈಲು ಸಲೀಸಾಗಿ ದಿಲ್ಲಿ ತಲುಪುವುದಕ್ಕೆ ಅನುಮಾನವೇ ಇರದು. ಹಾಗಾಗಿ ಕಾಂಗ್ರೆಸ್‌ಗೆ ಗೆಲ್ಲಬೇಕೆಂದರೆ ಹರಿ ಮಂತ್ರ ಒಂದೇ ಗತಿ! ಹರಿ ಮಾಗಿದ ಜನಪರ ಯೋಜನೆಯ ಹಮ್ಮು-ಬಿಮ್ಮುಗಳಿಲ್ಲದ ರಾಜಕಾರಣಿ. ದೇಶಪಾಂಡೆ-ಮ್ಯಾಗಿಯಂತೆ ಗೆದ್ದ ನಂತರ ಜನರ ಮರೆತು ಮೆರೆವ ಪೈಕಿಯಂತೂ ಅಲ್ಲ.

ಹರಿಪ್ರಸಾದರ ಈ ಹದದ ವ್ಯಕ್ತಿತ್ವವೇ ಇವತ್ತು ಉತ್ತರ ಕನ್ನಡ ಅವರನ್ನು ಸ್ವಾಗತಿಸಲು ಸಜ್ಜಾಗಿರುವುದಕ್ಕೆ ಮೂಲಕಾರಣ. ಜತೆಗೆ ದೇಶಪಾಂಡೆ-ಮ್ಯಾಗಿಗಳ ಖಾಲಿ ಬರಡು ರಾಜಕಾರಣದಿಂದ ದಿಕ್ಕೆಟ್ಟಿರುವ ಜಿಲ್ಲೆಯ ದುಃಸ್ಥಿತಿಯೂ ಹರಿಯಂಥ ಡೈನಮಿಕ್ ಲೀಡರ್‌ಗಾಗಿ ಕಾಯುವಂತೆ ಮಾಡಿದೆ. ಸ್ಥಳೀಯ ಜಾತಿ ಸಮೀಕರಣವೂ ಹರಿಪ್ರಸಾದ್ ಗೆಲುವಿಗೆ ಅನುಕೂಲಕರವಾಗಿದೆ. ಹೈಕಮಾಂಡ್‌ನಲ್ಲಿ ಪ್ರಭಾವವಿರುವ ಹರಿಯ ಕಾಲೆಳೆಯುವ ದುಸ್ಸಾಹಸಕ್ಕಂತೂ ದೇಶಪಾಂಡೆ-ಮ್ಯಾಗಿ ಇಳಿಯುವುದು




ಅನಂತಕುಮಾರ್ ಹೆಗಡೆ

ಸಾಧ್ಯವೇ ಇಲ್ಲ. ಹಾಗೆಯೇ ತಂತಮ್ಮ ವೈರಿಗಳಿಗೆ ಟಿಕೆಟ್ ಸಿಗದು ಸಮಾಧಾನದಲ್ಲಿ ಈ ಇಬ್ಬರೂ ಕಾಂಗ್ರೆಸ್ ಪರ ಕೆಲಸ ಮಾಡುತ್ತಾರೆ. ಜಿಲ್ಲೆಯ ಬ್ರಾಹ್ಮಣರಷ್ಟೇ ಇರುವ ದೀವರ (ಈಡಿಗರ) ಸಮುದಾಯದ ಹರಿಗೆ ಆ ವರ್ಗದ ಮತ ದಂಡಿಯಾಗಿ ಬರುತ್ತದೆ. 'ಬಂ' ನಂತರ ಸಮರ್ಥ ನಾಯಕತ್ವ ಇಲ್ಲದೆ ಬ್ರಾಹ್ಮಣರಿಂದ ತುಳಿಸಿಕೊಳ್ಳುತ್ತಿರುವ ದೀವರು 'ತಮ್ಮವನಿಗಾಗಿ' ಕಾದಿದ್ದಾರೆ. ಈ ಬಾರಿಯಂತೂ ಜಿಲ್ಲೆಯಲ್ಲಿ ಒಬ್ಬನೇ ಒಬ್ಬ ಸ್ವಜಾತಿ ಶಾಸಕನಿಲ್ಲದಿರುವುದು ದೀವರ ಕಂಗೆಡಿಸಿ ಬಿಟ್ಟಿದೆ. ಇತರ ಅಹಿಂದ ವರ್ಗದ ಮತಗಳೂ ಹರಿ ಚಾರಿಷ್ಮಾದಿಂದ ಕಾಂಗ್ರೆಸ್‌ಗೆ ಬರಲಿದೆ. ಜಾತಿರಾಜಕಾರಣ ಎಂದೂ ಮಾಡದ ಹರಿ ಅಹಿಂದ ಸಿದ್ಧಾಂತ ಬದ್ಧತೆ ಅವರನ್ನು ಗೆಲ್ಲಿಸಲಿದೆ.

ದೀವರು-ಬ್ರಾಹ್ಮಣರಷ್ಟೇ ಇರುವ ಮುಸ್ಲಿಮರು, ಅದಕ್ಕಿಂತ ಹೆಚ್ಚಿರುವ ಒಕ್ಕಲಿಗರು ಬಿಜೆಪಿಯ ಅನಂತ್ಮಾಣಿಗೆ ಓಟು ಹಾಕಲು ಸಾಧ್ಯವೇ ಇಲ್ಲ. ಹಾಲಕ್ಕಿಗಳಿಗೆ ಬ್ರಾಹ್ಮಣ ಲೀಡರ್‌ಗಿಂತ ದೀವರ ನಾಯಕತ್ವ ಒಗ್ಗುತ್ತದೆ. ಇಂಥದೊಂದು ಪ್ರಜ್ಞೆ, ಅನಂತ್ಮಾಣಿ-ಕಾಗೇರಿ ವಗೈರೆ ಬಿಜೆಪಿಯ ಹಾರುವ ಮುಂದಾಳುಗಳು ಅವರ ಮಠಾಧೀಶರ ಜಾತಿಯತೆಯ ಅತಿರೇಕದಿಂದ ಜಿಲ್ಲೆಯ ಅಹಿಂದ ವರ್ಗಕ್ಕೆ ಬಂದಿದೆ. ಒಟ್ಟಿನಲ್ಲಿ ಹೊರಗಿನವರಾದರೂ 'ನಮ್ಮವ'ನೆಂದು ಹರಿಯ ಸ್ವೀಕರಿಸಲು ಕೆನರಾದ ಜನ ಸಿದ್ಧರಾಗಿದ್ದಾರೆ. ನಮ್ಮವರಾದರೂ ನಮ್ಮಂತಾಗದ ಆಗಂತುಕ ಪ್ರಶಾಂತ್ ದೇಶಪಾಂಡೆ, ಇಲ್ಲಿಯ ಜನರೊಂದಿಗೆ ಭಾವನಾತ್ಮಕವಾಗಿ ಒಂದಾಗದ ವಲಸಿಗ ನಿವೇದಿತ್ ಆಳ್ವರಿಗಿಂತ ಹರಿಯೇ 'ಅಡ್ಡಿಲ್ಲ' ಎಂಬ ಮನಸ್ಥಿತಿ ಕೆನರಾದಲ್ಲಿದೆ. ಇದನ್ನು ಕಾಂಗ್ರೆಸ್ ಹೈಕಮಾಂಡ್ ಅರ್ಥಮಾಡಿಕೊಂಡರೆ ಕೆನರಾ ಸುಲಭವಾಗಿ ಗೆಲ್ಲಬಹುದು. ಮುದಿ ಲೀಡರ್‌ಗಳ ಒತ್ತಡಕ್ಕೆ ಮಣಿದರೆ ಎದುರಾಳೀ (ಬಿಜೆಪಿ)ಗೆ ಶರಣಾಗಿ ಸೀಟು ಬಿಟ್ಟುಕೊಟ್ಟಂತೆಯೇ!

ಎತ್ತಿಂದೆತ್ತ ಲೆಕ್ಕ-ಹಾಕಿ ಹಾಕಿದರೂ ಕಾಂಗ್ರೆಸ್‌ಗೆ ಹರಿಯೇ ಹಿತ!! ●

ಸೆಕ್ಸ್ ಕೇಸುಗಳಲ್ಲೂ ಆರೆಸ್ಸೆಸ್ 'ಕೋಮು' ಸ್ಕೆಚ್!



ಕೇಳಿದ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಮೂಲಸ್ಥಾನ ಕರಾವಳಿಯಲ್ಲಿ ಇನ್ನಿಲ್ಲದಂತೆ ಪೆಟ್ಟು ತಿಂದ ಸಂಘ ಪರಿವಾರ ಇದೀಗ ಲೋಕಸಭಾ ಚುನಾವಣೆಯನ್ನು ಮನಸ್ಸಲ್ಲಿಟ್ಟುಕೊಂಡು ಸೀಟು ಗೆಲ್ಲಲು ಜನರಲ್ಲಿ ಕೋಮು ಗಲಭೆಯ ಭೀತಿ ಸೃಷ್ಟಿಸುವ ಹುನ್ನಾರದಲ್ಲಿದೆ. ಮಂಗಳೂರಿನ ಹೊರವಲಯದ ದೇರಳಕಟ್ಟೆ ಗ್ಯಾಂಗ್‌ರೇಪ್ ಪ್ರಕರಣ ಮತ್ತು ಇತ್ತೀಚಿಗಿನ ಉಡುಪಿಯ ಸೆಕ್ಸ್ ವಿಡಿಯೋ ಬ್ಲಾಕ್ ಮೇಲ್ ಕೃತ್ಯಗಳೇ ಈಗ ಸಂಘಪರಿವಾರಕ್ಕೆ ರಾಜಕೀಯ ಆಹಾರವಾಗಿವೆ.

ಮಂಗಳೂರು ಗ್ಯಾಂಗ್‌ರೇಪ್

ಡಿಸೆಂಬರ್ 19 ರ ರಾತ್ರಿ ದೇರಳಕಟ್ಟೆ ದಂತವೈದ್ಯಕೀಯ ಕಾಲೇಜೊಂದರ ವಿದ್ಯಾರ್ಥಿನಿ ತನ್ನ ಗೆಳೆಯನ ಜೊತೆ ಮಂಗಳೂರಿನ ರೆಸ್ಟೋರೆಂಟ್ ಒಂದರಲ್ಲಿ ಊಟ ಮುಗಿಸಿ ಕಾರಿನಲ್ಲಿ ಮರಳುತ್ತಿದ್ದಳು. ದಾರಿ ಮಧ್ಯದಲ್ಲಿ ಈ ಜೋಡಿಯನ್ನು ಅಡ್ಡಗಟ್ಟಿದ ಮೂವರು ಕಾಮುಕರು ಕಾರಲ್ಲಿದ್ದ ಇಬ್ಬರನ್ನೂ ಅಪಹರಿಸಿದ್ದರು. ನಂತರ ತಮ್ಮ ಒಂದಷ್ಟು 'ಕ್ರಿಮಿನಲ್ ದೋಸ್ತ್‌'ಗಳಿಗೆ ಫೋನಾಯಿಸಿ ಕರೆಸಿಕೊಂಡ ಕಾಮುಕರು ವಿದ್ಯಾರ್ಥಿನಿ ಮತ್ತು ಆಕೆಯ ಸ್ನೇಹಿತನನ್ನು ನಿರ್ಜನ ಸ್ಥಳಕ್ಕೆ ಕರೆದೊಯ್ದು ಹಲ್ಲೆ ನಡೆಸಿದ್ದರು. ಅಲ್ಲಿಂದ ಮತ್ತೊಂದು ಪಾಳು ಮನೆಗೆ ಅವರನ್ನು ಕರೆತಂದ ಅಪಹರಣಕಾರರು ವಿದ್ಯಾರ್ಥಿನಿ ಮತ್ತು ಸ್ನೇಹಿತ - ಇಬ್ಬರನ್ನು ಬಲವಂತವಾಗಿ ಬೆತ್ತಲೆಗೊಳಿಸಿ ತಮ್ಮ ಮೊಬೈಲ್‌ಗಳಲ್ಲಿ ವಿಡಿಯೋ ಚಿತ್ರೀಕರಿಸಿಕೊಂಡಿದ್ದರು. ಸುಮಾರು 11 ಗಂಟೆಯ ಅಪರಾತ್ರಿಯಲ್ಲಿ ಇಬ್ಬರನ್ನೂ ಸೆಕ್ಸ್ ಮಾಡುವಂತೆ ಅವರಿಗೆ ಚಿತ್ರಹಿಂಸೆ ನೀಡಲಾರಂಭಿಸಿದ್ದರು. ಅದಕ್ಕೆ ಅವರು ಒಪ್ಪದೇ ಇದ್ದಾಗ 'ನೀವು ಸೆಕ್ಸ್‌ನಲ್ಲಿ ಪಾಲ್ಗೊಳ್ಳದಿದ್ದರೆ ನಾವೇ ರೇಪ್ ಮಾಡುತ್ತೇವೆ' ಎಂದು ಧಮಕಿ ಹಾಕಿದ್ದರು. ದುಷ್ಟ ಕಾಮುಕರು ತನ್ನ ದೇಹವನ್ನು ಹರಿದು ಮುಕ್ಕುವುದರಿಂದ ತಪ್ಪಿಸಿಕೊಳ್ಳಲಿಕ್ಕೋಸ್ಕರ ಆ ಅಮಾಯಕ ವಿದ್ಯಾರ್ಥಿನಿ ತನ್ನ ಗೆಳೆಯನನ್ನು ಗೋಗರೆದು ಎಲ್ಲರ ಮುಂದೂ ಸೆಕ್ಸ್‌ಗೆ ಒಪ್ಪಿಸಬೇಕಾಗಿ ಬಂದಿತ್ತು. ನಂತರ ಅಮಾನವೀಯ ದೃಶ್ಯಗಳನ್ನು ಅಸಹ್ಯವಾಗಿ ಸೆರೆಹಿಡಿದ ವಿಕೃತರ ಟೀಮು ವೈದ್ಯ ವಿದ್ಯಾರ್ಥಿಗಳ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಲ್ಲದೆ '25 ಲಕ್ಷ ರೂಪಾಯಿ ಕೊಡಬೇಕು. ಇಲ್ಲವಾದಲ್ಲಿ ವಿಡಿಯೋವನ್ನು ಅಂತರ್ಜಾಲ ಮಾಧ್ಯಮದಲ್ಲಿ ಅಪ್‌ಲೋಡ್ ಮಾಡುತ್ತೇವೆ' ಎಂದು ಬೆದರಿಸಿದ್ದರು. ಅಷ್ಟು ಅಮೌಂಟನ್ನು ಒಮ್ಮೆಲೇ ಕೊಡಲಾಗದಿದ್ದರೂ ತಕ್ಷಣ ಮೂರು ಲಕ್ಷ ರೂಪಾಯಿಯನ್ನು ಎಟಿಎಂನಿಂದ ಡ್ರಾ ಮಾಡಿಕೊಡುತ್ತೇವೆಂದು ಅಲ್ಲಿಂದ ಎಸ್ಕೇಪಾದ ವಿದ್ಯಾರ್ಥಿನಿ ಮತ್ತು ಆಕೆಯ ಗೆಳೆಯ ತಮ್ಮ-ತಮ್ಮ ಮನೆಯವರಿಗೆ ನಡೆದ ಘಟನೆ ವಿವರಿಸಿದ್ದರು.

ವಿದ್ಯಾರ್ಥಿನಿ ಬಿಹಾರದವಳಾಗಿದ್ದು, ಸ್ನೇಹಿತ ಕೇರಳದವನು. ವಿದ್ಯಾರ್ಥಿನಿಯ ಮನೆಯವರು ಕೂಡಲೇ ವಿಚಾರವಾದಿಗಳ ಒಕ್ಕೂಟದ ರಾಷ್ಟ್ರೀಯ ಅಧ್ಯಕ್ಷ ಪ್ರೊ.ನರೇಂದ್ರ ನಾಯಕ್‌ರಿಗೆ ಸುದ್ದಿ ಮುಟ್ಟಿಸಿ ನೆರವಿಗಾಗಿ ಮೊರೆ ಇಟ್ಟಿದ್ದರು. ನರೇಂದ್ರ ನಾಯಕರು ತನ್ನ ಪತ್ನಿ, ಮಹಿಳಾ ಹೋರಾಟಗಾರ್ತಿ ಆಶಾ ನಾಯಕ್ ಜೊತೆ ದೌರ್ಜನ್ಯಕ್ಕೀಡಾದ ವಿದ್ಯಾರ್ಥಿನಿ ಮತ್ತು ಆಕೆಯ ಗೆಳೆಯನನ್ನು ಸಂಪರ್ಕಿಸಿ ಪೊಲೀಸರಿಗೆ ವಿಷಯ ತಿಳಿಸಿದ್ದರು.

ತನಿಖೆ ಶುರುಮಾಡಿದ ಪೊಲೀಸರು ಡಿಸೆಂಬರ್ 21 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಹಳೆಯಂಗಡಿಯ ಸಫ್ವಾನ್, ಸುರತ್ಕಲ್ ಮುಕ್ಕ ನಿವಾಸಿ ಇಮ್ರಾನ್ ಅಲ್ತಾಫ್, ಕಾಟಿಪಳ್ಳ ಈದ್ಗಾದ ಸಮೀರ್, ಕೈರಂಗಳ ಫೌಝಿಯಾ ಕಾಂಪೌಂಡಿನ ನವಾಜ್, ದೇರಳಕಟ್ಟೆ ಗ್ರೀನ್ ಗ್ರೌಂಡ್ ರೆಸಿಡೆನ್ಸಿಯ ಇಕ್ಬಾಲ್ ಆರೀಫ್, ದೇರಳಕಟ್ಟೆ ಬೆಳ್ಮದ ಅಬ್ದುಲ್ ರವೂಫ್, ನಾಟೆಕಲ್ ಮಂಜನಾಡಿ ಮಂಗಳನಗರದ ನಿಸಾರ್ ಅಹಮ್ಮದ್, ನಾಟೆಕಲ್ ಸಹ ರೆಸಿಡೆನ್ಸಿಯ ಅರಾಫತ್ ಮೊದಲಾದ ಎಂಟು ಮಂದಿ ಆರೋಪಿಗಳನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದರು.

ಆರೋಪಿಗಳ ಬ್ಯಾಕ್‌ಗ್ರೌಂಡ್ ಏನು?

ಬಂಧಿತ ಆರೋಪಿಗಳ ಪೈಕಿ ಮೂಲ್ಕಿ ಸಮೀಪದ ಹಳೆಯಂಗಡಿಯ ಹುಸೈನ್ ಯಾನೆ ಸಫ್ವಾನ್ ಎಂಬಾತನೇ ಇಡೀ ಪ್ರಕರಣದ ಮಾಸ್ಟರ್‌ಮೈಂಡ್ ಎನ್ನಲಾಗುತ್ತಿದೆ. ತನ್ನ 17ನೇ ವಯಸ್ಸಿನಲ್ಲೇ ಅಪರಾಧ ಲೋಕಕ್ಕೆ ಎಂಟ್ರಿ ಪಡೆದಿದ್ದ ಈತ ಮೂಲ್ಕಿ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಕಾರು ಚಾಲಕನ ಕೊಲೆ ಪ್ರಕರಣವೂ ಸೇರಿದಂತೆ ಹೆದ್ದಾರಿ ಲಾರಿ ದರೋಡೆ ಪ್ರಕರಣಗಳಲ್ಲೂ ಈತ ಪ್ರಮುಖ ಆರೋಪಿಯೂ ಹೌದು.

ಸಣ್ಣಪುಟ್ಟ ದರೋಡೆಗಳಲ್ಲಿ ಭಾಗಿಯಾಗುತ್ತಿದ್ದ ಈತ ತನ್ನ ಕೆಲಸಕ್ಕಾಗಿ ಕಾರು ಬೇಕಾದಾಗ ಹಳೆಯಂಗಡಿಯ ಉದ್ಯಮಿ ಪಂಚವಟಿ ಶಾಂತಾರಾಮ ಶೆಟ್ಟಿ ಎಂಬವರ ಕಾರು ಚಾಲಕ ಪ್ರವೀಣ್ ಎಂಬಾತನನ್ನು ಅಪಹರಿಸಿ ಎಂಆರ್‌ಪಿಎಲ್ ಸಮೀಪ ಕೊಲೆಗೈದು ರೌಡಿ ಶೀಟರ್ ಖಾತೆ ತೆರೆದಿದ್ದ. ಜಾಮೀನಿನಲ್ಲಿ ಹೊರಬಂದ ಬಳಿಕ ಅದೇ ಚಾಳಿಯನ್ನು ಮುಂದುವರೆಸಿದ ಸಫ್ವಾನ್ ಸುಮಾರು 15 ಪ್ರಕರಣಗಳಲ್ಲಿ ವಾಂಟೆಡ್ ಎನ್ನಿಸಿದ್ದಾನೆ. ಪಕ್ಕಾ ನಟೋರಿಯಸ್ ಹಿನ್ನೆಲೆ ಹೊಂದಿದ್ದ ಸಫ್ವಾನ್ ಕೆಲವೇ ತಿಂಗಳ ಹಿಂದೆ ಮೂಲ್ಕಿ ಠಾಣಾ ವ್ಯಾಪ್ತಿಯ ಕಾರ್ನಾಡು ಬಳಿ ಯುವಕನೊಬ್ಬನ ಮೇಲೆ ಸಾರ್ವಜನಿಕ ಸ್ಥಳದಲ್ಲೇ ಹಲ್ಲೆಯನ್ನೂ ನಡೆಸಿದ್ದ. ಈತನೂ ಸೇರಿದಂತೆ ಆರೋಪಿತ ಎಂಟು ಮಂದಿ ಯಾವುದೇ ಸಂಘಟನೆಗಳಲ್ಲಿ, ರಾಜಕೀಯ ಪಕ್ಷಗಳಲ್ಲಿ ಗುರುತಿಸಿಕೊಂಡವರಲ್ಲ. ಇವರೆಲ್ಲರೂ ಪಕ್ಕಾ ಕ್ರಿಮಿನಲ್‌ಗಳಷ್ಟೆ!

ಕೊಣಾಜೆ ಸುತ್ತಮುತ್ತ ಕೆಲವು ಮುಸ್ಲಿಂ ಯುವತಿಯರೂ ಸೇರಿದಂತೆ ಹಲವಾರು ಯುವತಿಯರು ನಿಗೂಢವಾಗಿ ನಾಪತ್ತೆಯಾಗಿರುವ ಪ್ರಕರಣದಲ್ಲೂ ಇವರ ಕೈವಾಡವಿರುವ ಶಂಕೆಯಿದೆ. ಇವರ ದೌರ್ಜನ್ಯಕ್ಕೆ ಈಡಾದ ಕೆಲವರು ಮರ್ಯಾದೆ ಗಂಜಿ ಪೊಲೀಸರಿಗೆ ಮಾಹಿತಿ ನೀಡದೇ ಇರುವುದೇ ಇಷ್ಟು ದಿನ ಇವರು ಅಟ್ಟಹಾಸಗೈಯಲು ಸಾಧ್ಯವಾಗಿಸಿತ್ತು.

ಡಿಸೆಂಬರ್ 21 ರಂದು ಆರೋಪಿಗಳ ಬಂಧನವಾದ ಸುದ್ದಿ ಮಾಧ್ಯಮಗಳಲ್ಲಿ ಬಂದ ನಂತರ ಆರ್‌ಎಸ್‌ಎಸ್ ಈ ಕ್ರಿಮಿನಲ್ ಪ್ರಕರಣವನ್ನು ತನ್ನ ಲಾಭಕ್ಕಾಗಿ ಬಳಸಿಕೊಳ್ಳಲು ಮುಂದಾಗಿದೆ. "ಪ್ರಕರಣದ ಎಲ್ಲಾ ಆರೋಪಿಗಳು ಮುಸ್ಲಿಮರಾಗಿರುವುದರಿಂದ ಆರ್‌ಎಸ್‌ಎಸ್‌ಗೆ ಸಖತ್ ಆಹಾರ ಸಿಕ್ಕಂತಾಗಿದೆ. ಮುಸ್ಲಿಂ ಸಮುದಾಯವನ್ನು ಗುರಿಯಾಗಿರಿಸಿ ಸಂಘಪರಿವಾರದ ಪ್ರತಿಭಟನೆಗಳು ನಡೆಯುತ್ತಿವೆ. ಪ್ರತಿಭಟನೆಯಲ್ಲಿ "ಹೋಮ್‌ಸ್ಟೇ ಪ್ರಕರಣದಲ್ಲಿ ನೈತಿಕ ಪೊಲೀಸ್‌ಗಿರಿಯನ್ನು ಧಿಕ್ಕರಿಸಿದ ಪ್ರಗತಿಪರರು, ಬುದ್ಧಿಜೀವಿಗಳು ಈಗೆಲ್ಲಿದ್ದಾರೆ?' ಎಂಬ ಘೋಷಣೆಗಳು ಸಂಘಿಗಳಿಂದ ಮೊಳಗಿದ್ದವು. ಅಸಲಿಗೆ ಪ್ರಕರಣವನ್ನು ಬಯಲಿಗೆ ತಂದಿದ್ದೇ ಪ್ರಗತಿಪರರಾದ ನರೇಂದ್ರ ನಾಯಕ್ ಮತ್ತು ಆಶಾ ನಾಯಕ್‌ರು. ಇದರ ಕನಿಷ್ಠ ಅರಿವೂ ಸಂಘಿಗಳಿಗೆ ಇಲ್ಲವೆನ್ನುವುದು ಅವರ ಘೋಷಣೆಗಳಿಂದಲೇ ಜಗಜ್ಜಾಹೀರಾಗಿತ್ತು. "ಈ ಘಟನೆಯನ್ನು ಕೋಮು ಆಧಾರಿತವಾಗಿ ನೋಡಲೇಬಾರದು. ಈ ಪ್ರಕರಣ ಪತ್ತೆ ಹಚ್ಚುವಲ್ಲಿಯೂ ಮುಸ್ಲಿಮರ ಪಾತ್ರ ಅತ್ಯಧಿಕವಾಗಿತ್ತು. ವಿದ್ಯಾರ್ಥಿನಿಗೆ ಕೆಲಕಾಲ ರಕ್ಷಣೆ ನೀಡಿದ್ದೂ ಮುಸ್ಲಿಮರ ಮನೆ" ಎನ್ನುತ್ತಾರೆ ಆಶಾ ನಾಯಕ್. ಸಂಘಿಗಳ ಪ್ರತೀ ಪ್ರತಿಭಟನೆಯಲ್ಲೂ ಮುಸ್ಲಿಂ ಸಮುದಾಯವನ್ನು ಅವಹೇಳನ ಮಾಡುವುದೇ ಏಕಮೇವ ಅಜೆಂಡಾವಾಗಿತ್ತು. ಕೋಮುಗಲಭೆಯನ್ನು ಹುಟ್ಟು ಹಾಕಲೇಬೇಕು ಎಂಬ ಹಠ ತೊಟ್ಟಂತಿದ್ದ ಆರ್‌ಎಸ್‌ಎಸ್ ಈ ರೀತಿ ಅಖಾಡಕ್ಕಿಳಿದಂತೆ ಕಂಡುಬಂದಿತ್ತು.

ವಿದ್ಯಾರ್ಥಿನಿಗೆ ರಕ್ಷಣೆ ಕೊಟ್ಟಿದ್ದೇ ಮುಸ್ಲಿಂ ಕುಟುಂಬ!

ಪೊಲೀಸರಿಗೆ ಹೇಳಿಕೆ ಕೊಟ್ಟ ನಂತರ ಕ್ಷಿಪ್ರ ಕಾರ್ಯಾಚರಣೆಗೆ ವಿದ್ಯಾರ್ಥಿನಿ ಪೊಲೀಸರ ಜೊತೆ ತೆರಳಬೇಕಿತ್ತು. ಪ್ರೊ. ನರೇಂದ್ರ ನಾಯಕ್ ಮತ್ತು ಆಶಾ ನಾಯಕ್ ಜೊತೆ ಇದ್ದಿದ್ದರಿಂದ ವಿದ್ಯಾರ್ಥಿನಿಯೂ ಪೊಲೀಸರ ಜೊತೆ ತೆರಳಿ ತನಿಖೆಗೆ ಸಹಕಾರ ನೀಡಲು ಒಪ್ಪಿಕೊಂಡಿದ್ದಳು. ಆದಾಗಲೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಜರ್ಝರಿತವಾಗಿದ್ದ ವಿದ್ಯಾರ್ಥಿನಿ ತನಿಖೆಯ ಮಧ್ಯೆ ವಿಪರೀತ ಬಳಲಿದ್ದಳು. ಆಕೆಗೆ ರೆಸ್ಟ್ ಬೇಕಾಗಿತ್ತು. ಆಗ ಆಶ್ರಯ ನೀಡಲು ಒಪ್ಪಿದ್ದು ಒಂದು ಮುಸ್ಲಿಮ್ ಕುಟುಂಬ.

ಆರೆಸ್ಸೆಸ್‌ನ ಸೋಗಲಾಡಿತನಕ್ಕೆ ಈ ಪ್ರಕರಣದಲ್ಲಿ ಮತ್ತೊಂದು ಸಾಕ್ಷಿಯಿದೆ. ಇಷ್ಟೆಲ್ಲಾ ಗುಲ್ಲೆಬ್ಬಿಸಿ ಕೋಮುದಳ್ಳುರಿ ಹೊತ್ತಿಸಲು ಹುನ್ನಾರ ನಡೆಸಿದ್ದ ಆರ್‌ಎಸ್‌ಎಸ್‌ಗೆ ಆರಂಭದಲ್ಲಿ ವಿದ್ಯಾರ್ಥಿನಿಯ ಗೆಳೆಯ ಯಾವ ಧರ್ಮದವನು ಎಂದು ಗೊತ್ತೇ ಇರಲಿಲ್ಲ. ಡಿಸೆಂಬರ್ 23ರ ನಂತರ ವಿದ್ಯಾರ್ಥಿನಿಯ ಗೆಳೆಯನೂ ಮುಸ್ಲಿಂ ಸಮುದಾಯಕ್ಕೆ ಸೇರಿದವನೆಂಬುದು ಚಡ್ಡಿಗಳಿಗೆ ಗೊತ್ತಾದದ್ದೇ ತಡ 'ವೈದ್ಯಕೀಯ ವಿದ್ಯಾರ್ಥಿನಿ ಮತ್ತು ಆಕೆಯ ಗೆಳೆಯ ವೈದ್ಯರಿಗೆ ನ್ಯಾಯ ಕೊಡಬೇಕು' ಎಂದು ಹೋರಾಟಕ್ಕಿಳಿದಿದ್ದ ಆರ್‌ಎಸ್‌ಎಸ್ ತನ್ನ ಪ್ಲೇಟ್ ಬದಲಿಸಿ ವಿದ್ಯಾರ್ಥಿನಿ ಜೊತೆಗಿದ್ದ ವೈದ್ಯ ಗೆಳೆಯನೂ ಆರೋಪಿ ಎಂದು ಬೊಬ್ಬಿಡಲು ಆರಂಭಿಸಿದೆ. ಅಷ್ಟರಲ್ಲಿ "ಜಾಗೃತಿ ಮಹಿಳಾ ವೇದಿಕೆ" ಎಂಬ ಮಹಿಳಾ ಸಂಘಟನೆ ಕಟ್ಟಿಕೊಂಡ ಆರ್‌ಎಸ್‌ಎಸ್ ಸಂತ್ರಸ್ತ ವೈದ್ಯರ ಹೆಸರು ಹೇಳಿ ಆರೋಪಗಳ ಸುರಿಮಳೆಗೈದಿತು. ಆರೋಪಿಗಳು ವಿದ್ಯಾರ್ಥಿನಿಯ ಗೆಳೆಯ ವೈದ್ಯನಿಂದ ಬಲವಂತವಾಗಿ ಸೆಕ್ಸ್ ಮಾಡಿಸಿದರು ಎಂಬುದನ್ನು ಒಪ್ಪಿಕೊಳ್ಳದ ಆರ್‌ಎಸ್‌ಎಸ್ "ವೈದ್ಯಕೀಯ ವಿಜ್ಞಾನದ ಪ್ರಕಾರ ಇದು ಸಾಧ್ಯವಿಲ್ಲ, ಹುಡುಗನನ್ನು ಬಲವಂತಪಡಿಸಿ ಸೆಕ್ಸ್ ಮಾಡಿಸಲು ಸಾಧ್ಯವಿಲ್ಲ" ಎಂದು ಹೊಸ ಆರೋಪ ಶುರುವಿಟ್ಟುಕೊಂಡಿದ್ದಾರೆ. ಆದರೆ ವಿದ್ಯಾರ್ಥಿನಿ ಜೊತೆ ಸೆಕ್ಸ್ ಮಾಡುವಂತೆ ಗೆಳೆಯನಿಗೆ ಬಲವಂತವಾಗಿ ಡ್ರಗ್ಸ್ ನೀಡಲಾಗಿತ್ತು. ಇದನ್ನು ಬೇಕಂತಲೇ ಮರೆಮಾಡಿದ ಆರ್‌ಎಸ್‌ಎಸ್‌ನ ಸಂಘಟನೆಗಳು ವಿದ್ಯಾರ್ಥಿನಿಯ ಗೆಳೆಯ ಮತ್ತು ಆರೋಪಿಗಳು ಮುಸ್ಲಿಮರಾಗಿದ್ದು "ಇದು ಹಿಂದೂ ಯುವತಿಯರ ಟಾರ್ಗೆಟ್" ಎಂದು ಬಿಂಬಿಸಲು ಆರಂಭಿಸಿವೆ.


"ಅದೊಂದು ಸಂಪೂರ್ಣ ಅಪರಾಧ ಪ್ರಕರಣ. ಆ ಪ್ರಕರಣದ ಆರಂಭದಿಂದಲೇ ಜತೆಗಿದ್ದ ನಾವು ಯಾವತ್ತೂ ಆ ವಿದ್ಯಾರ್ಥಿಗಳು ಯಾವ ಧರ್ಮದವರು, ಅವರಿಬ್ಬರ ಸಂಬಂಧದ ಬಗ್ಗೆ ಅವರನ್ನು ಪ್ರಶ್ನಿಸಿಲ್ಲ. ಅವರ ರಕ್ಷಣೆಯ ಜತೆಗೆ ಅವರ ಗೌಪ್ಯತೆಯನ್ನು ಕಾಪಾಡುವ ಉದ್ದೇಶ ನಮ್ಮದಾಗಿತ್ತು. ಅಪಹರಣಕಾರರು ಹಾಗೂ ವಿದ್ಯಾರ್ಥಿಗಳ ಮೇಲೆ ಅತ್ಯಂತ ಹೀನಾಯಕರ ರೀತಿಯಲ್ಲಿ ನಡೆಸಿಕೊಂಡವರು ಸಮಾಜ ವಿರೋಧಿ ಗುಂಪಿನವರು. ಅವರಿಗೆ ಖಂಡಿತಾ





ಫೇಸ್‌ಬುಕ್‌ನಲ್ಲಿ ನಗ್ನ ಚಿತ್ರಗಳನ್ನು ಹಾಕಿದ್ದ ನೀಚ ಮುಹಮ್ಮದ್ ಯಾಸೀರ್





• ದೇರಳಕಟ್ಟೆ ಗ್ಯಾಂಗ್ ರೇಪ್ ಮತ್ತು ಫೇಸ್‌ಬುಕ್ ನಗ್ನ ಚಿತ್ರಗಳಿಗೆ ಕೋಮು ಬಣ್ಣ ಕೊಟ್ಟು ಪ್ರತಿಭಟಿಸುತ್ತಿರುವ ಸಂಘ ಪರಿವಾರದ ಪಿಶಾಚಿಗಳು

ಾಗುತ್ತದೆ. ಆದರೆ ಪ್ರಕರಣದ ಬಗ್ಗೆ ಏನೂ ಂದವರು ತಮಗೆ ತೋಚಿದಂತೆ ಗುಲ್ಲೆಬ್ಬಿಸಿರುವುದು ನೀಯ. ಮಾತ್ರವಲ್ಲದೆ ಬುದ್ಧಿಜೀವಿಗಳೆಂದು ಕೊಳ್ಳುವವರು ಈಗೆಲ್ಲಿದ್ದಾರೆ ಎಂದು ತ್ತಿರುವವರಿಗೆ ಉತ್ತರವಾಗಿ, ಬುದ್ಧಿಜೀವಿಗಳೇ ಅಂದು ಬ್ಬರು ಸಂತ್ರಸ್ತರ ರಕ್ಷಣೆ ನಡೆಸಿರುವುದು ಎಂದು ಚ್ಛಿಸುತ್ತೇನೆ. ಮಾತ್ರವಲ್ಲದೆ ಈ ಘಟನೆಯ ಮಾರನೆ ಯುವತಿಗೆ ನೆರವಾಗುವ ಕುರಿತಂತೆ ಭಿನ್ನಹ ಕೊಂಡಿದ್ದೆ. ಆದರೆ ಮಹಿಳಾ ರಕ್ಷಕರೆಂದು ಕೊಳ್ಳುವವರು ಯಾರೂ ಬಂದಿಲ್ಲ" ಎಂಬುದು ನ್ದ್ರ ನಾಯಕ್‌ರ ಖಾರದ ಪ್ರತಿಕ್ರಿಯೆ. ಪಬ್ ದಾಳಿ, ಸ್ಟೇ, ಸೌಜನ್ಯ ಪದ್ಮಲತಾ ಪ್ರಕರಣ ಸೇರಿದಂತೆ ಳೆಯರ ಮೇಲಿನ ದೌರ್ಜನ್ಯವನ್ನು ತೀವ್ರವಾಗಿ ಧಿಸುತ್ತಲೇ ಬಂದಂತವರು ನರೇಂದ್ರ ನಾಯಕ್.

ಡಿಸೆಂಬರ್ 19ರಂದು ನೆರವು ಕೋರಿ ನನಗೆ ಫೋನ್ ಂದು ಬಂದಿತ್ತು, ರೋಗಿಯೊಬ್ಬರಿಗೆ ಥಳಿಸಲಾಗಿದ್ದು ಾದ ಹಣಕ್ಕಾಗಿ ಒತ್ತಾಯಿಸಲಾಗಿದೆ. ನೆರವು ಹುದೇ ಎಂದು ಕರೆ ಮಾಡಿದ್ದ ಯುವತಿ ಆಗ್ರಹಿಸಿ ಆ ಸಂದರ್ಭ ರೋಗಿಯ ಜತೆ ಮಾತನಾಡುವುದಾಗಿ ೆ. ಆಕೆ ಅಪಹರಣದ ವಿಷಯ ತಿಳಿಸಿದಳು ವಲ್ಲದೆ, ತಾನೇ ಆ ಸಂತ್ರಸ್ತೆ ಎಂದು ಹೇಳಿದಳು. ಜತೆಗಿದ್ದ ಯುವಕ ತೀರಾ ಗಂಭೀರ ಸ್ಥಿತಿಯಲ್ಲಿ ರಣಕಾರರ ಜತೆಗಿದ್ದು ನೆರವು ನೀಡುವಂತೆ ದ್ದಳು. ನನ್ನ ಪತ್ನಿ ವಕೀಲೆ ಆಶಾ ನಾಯಕ್ ಅವರಿಗೆ ಷಯ ತಿಳಿಸಿದೆ. ಆದರಂತೆ ಅವರು ನೆರವು ನೀಡಿದ್ದಾರೆ. ವಲ್ಲದೆ ಅಪಹರಣಕಾರರಿಂದ ಸಂತ್ರಸ್ತರ ಬಿಡುಗಡೆ ಯಲ್ಲಿ ಪ್ರತ್ಯಕ್ಷದರ್ಶಿಯೂ ಆಗಿದ್ದರು" ಎಂದು ನರೇಂದ್ರ ಕ್ ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿ ಸಂತ್ರಸ್ತ ವಿದ್ಯಾರ್ಥಿ ಆರೋಪಿಗಳ ೃಜೋಡಿಸಿದ್ದಾನೆಂಬ ಆರೋಪಗಳು ತೀರಾ ಬಾಲಿಶ ುವ ಆಶಾ ನಾಯಕ್ ಆರೋಪಿಗಳು ಮತ್ತು ಸಂತ್ರಸ್ತನ ದಾಯ ಒಂದೇ ಆಗಿರುವುದರಿಂದ ಈ ರೀತಿ ಬ್ಬಿಸಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಅಪಹರಣಕಾರರಿಂದ ಪೊಲೀಸರು ಆ ಯುವಕನನ್ನು ಗೊಳಿಸಿ ತಂದು ನಿಲ್ಲಿಸಿದಾಗ ಆತನನ್ನು ಕಂಡು ಆಘಾತವಾಗಿತ್ತು. ಆತನ ಕಣ್ಣಿನಿಂದ ರಕ್ತ ಸೋರುತ್ತಿತ್ತು. ನೋವಿನಿಂದ ನರಳುತ್ತಿದ್ದ. ತಲೆಕೂದಲು ಕೆದರಿತ್ತು. ೖಹಿಕವಾಗಿ ಮಾತ್ರವಲ್ಲದೆ ಮಾನಸಿಕವಾಗಿ ಸಂಪೂರ್ಣ ರಿತವಾದ ಸ್ಥಿತಿಯಲ್ಲಿದ್ದ. ಆತನಿಗೆ ತಕ್ಷಣ ವೈದ್ಯಕೀಯ ಅಗತ್ಯವಿತ್ತಾದರೂ ಆತ ಆ ನೋವಿನಲ್ಲೇ ಪೊಲೀಸರ ಷ ಪರಿಶೀಲನೆಗೂ ಸಹಕರಿಸಿದ. ನಂತರ ದೈಹಿಕವಾಗಿ ರ ಸ್ಥಿತಿಯಲ್ಲಿದ್ದ ಆತನನ್ನು ವೈದ್ಯಕೀಯ ಚಿಕಿತ್ಸೆಗಾಗಿ ಸಲಾಗಿತ್ತು. ಆತ ಆರೋಪಿಗಳ ಕಡೆಯವನಾಗಿದ್ದರೆ ಎಂಟು ಮಂದಿ ಆರೋಪಿಗಳನ್ನು ಬಂಧಿಸುವಲ್ಲಿ ಸರಿಗೆ ಸಹಕರಿಸುತ್ತಿರಲಿಲ್ಲ. ಮಾತ್ರವಲ್ಲದೆ ಪೊಲೀಸರಿಗೆ ರ್ಣ ಸಹಕಾರ ನೀಡಿರುವ ಆತ ನ್ಯಾಯಾಧೀಶರ ು ಹೇಳಿಕೆಗೂ ಸಿದ್ಧನಾಗಿದ್ದಾನೆ. ಅಲ್ಲದೆ ಸಂತ್ರಸ್ತ ಕನನ್ನು ಪೊಲೀಸರು ಅಪಹರಣಕಾರರಿಂದ ಬಚಾವು ಲು ಪ್ರಯತ್ನಿಸುತ್ತಿದ್ದ ವೇಳೆಯಂತೂ ನಮ್ಮ ಜತೆಗಿದ್ದ ತಿ 'ಆತನನ್ನು ರಕ್ಷಿಸಿ, ಅಪಹರಣಕಾರರು ತುಂಬಾ ರು. ಆತನಿಗೇನೂ ಆಗಿಲ್ಲವಲ್ಲ' ಎಂಬುದಾಗಿ ದೇ ಪೊಲೀಸರನ್ನು ಭಿನ್ನವಿಸಿಕೊಳ್ಳುತ್ತಿದ್ದಳು" ಎಂದು ನಾಯಕ್ ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿ ಆರೋಪಿಗಳ ಮೇಲೆ ಕ್ರಮ ಳ್ಳುವಲ್ಲಿ ಪೊಲೀಸರ ಮೇಲೆ ರಾಜಕೀಯ ಒತ್ತಡ ಾಗಿದೆ ಎಂಬುದನ್ನು ತಳ್ಳಿಹಾಕಿರುವ ಆಶಾ ನಾಯಕ್ ಂದ್ರ ನಾಯಕ್ ನನಗೆ ಕರೆ ಮಾಡಿದಾಕ್ಷಣ ನಾನು ತಿ ಆ ಸಂದರ್ಭ ಈ ಬಗ್ಗೆ ದೂರು ನೀಡಲು ರುವುದನ್ನು ದೃಢಪಡಿಸಿ ನನ್ನ ಸ್ನೇಹಿತೆಯ ಜತೆ ದಲ್ಲಿ ಪೊಲೀಸ್ ಕಮಿಷನರ್ ಬಳಿ ತೆರಳಿದೆವು. ಅವರು ಸ್ಥಳದಲ್ಲಿದ್ದ ಕಾರಣ ಎಸಿಪಿ ರವಿ ಕುಮಾರ್ ನೆರವು ಕೋರಲಾಯಿತು. ಅವರು ತಡಮಾಡದೆ ಠಾಣೆಗೆ ಫೋನಾಯಿಸಿದರು. ತಕ್ಷಣ ಅವರಿಬ್ಬರೂ ಸ್ವಂತ ಉಡುಗೆಯಲ್ಲಿ ನನ್ನದೇ ಕಾರಿನಲ್ಲಿ ಯುವತಿ ಅಪಹರಣಕಾರರಿಗೆ ಹಣ ನೀಡಬೇಕಾಗಿದ್ದ ಘಟನಾ ಸ್ಥಳಕ್ಕೆ ಹೊರಟೆವು. ಆದರೆ ಯುವತಿಯ ಬಗ್ಗೆ ನಮಗೆ ಪರಿಚಯವಿರಲಿಲ್ಲ. ಆಕೆ ಕೊಟ್ಟಿದ್ದ ಉಡುಪಿನ ಆಧಾರದಲ್ಲಿ ಆಕೆಯನ್ನು ಪತ್ತೆಹಚ್ಚಬೇಕಿತ್ತು. ದೇರಳಕಟ್ಟೆ ಘಟನಾ ಸ್ಥಳಕ್ಕೆ ತಲುಪಿದಾಗ ಕೆಲ ಅಪಹರಣಕಾರರು ಹೊಸ ಸ್ವಿಫ್ಟ್ ಕಾರೊಂದರಲ್ಲಿ ಬಂದು ನಮ್ಮ ಕಾರನ್ನು ಕಂಡು ಅತೀ ವೇಗವಾಗಿ ಅಲ್ಲಿಂದ ಫರಾರಿಯಾಗಲೆತ್ನಿಸಿದರು. ಇತ್ತ ಆ ಕಾರನ್ನು ನಾವೂ ತೊಕ್ಕೊಟ್ಟು ಜಂಕ್ಷನ್‌ವರೆಗೆ ಬೆನ್ನಟ್ಟಿದೆವು. ಆದರೆ ಅವರು ತಲೆಮರೆಸಿಕೊಂಡಿದ್ದರಿಂದ ಎಸಿಪಿ ಇತರ ಪೊಲೀಸರಿಗೆ ಈ ಬಗ್ಗೆ ತಿಳಿಸಿ ನಾವು ಮತ್ತೆ ಘಟನಾ ಸ್ಥಳದತ್ತ ಯುವತಿಯ ಜೊತೆ ಹೋದೆವು. ಆ ಸಂದರ್ಭದಲ್ಲಿ ಆಕೆ ಅಲ್ಲೇ ಪಕ್ಕದ ಮುಸ್ಲಿಂ ಸಮುದಾಯದವರ ಮನೆಯಲ್ಲಿ ರಕ್ಷಣೆ ಪಡೆದಿದ್ದಳು. ಅಪಾಯವನ್ನರಿತ ಆ ಮನೆಯವರು ಆಕೆಗೆ ರಕ್ಷಣೆ ನೀಡಿದ್ದು ಮಾತ್ರವಲ್ಲದೆ, ಆಕೆ ನಮ್ಮ ಬಳಿ ಸೇರುವವರೆಗೆ ಬೆಂಗಾವಲಾಗಿ ನಿಂತಿದ್ದರು. ನಿಜಕ್ಕೂ ಆ ಸಂದರ್ಭ ಅವಿಸ್ಮರಣೀಯ. ಬಳಿಕ ಆಕೆಯನ್ನು ಸುರಕ್ಷಿತ ಜಾಗಕ್ಕೆ ಕರೆದೊಯ್ದು ಆಕೆಯಿಂದ ಸಂಪೂರ್ಣ ಘಟನೆಯ ಮಾಹಿತಿ ಪಡೆದೆವು. ಆ ಸಂದರ್ಭ ಆಕೆ ಪಬ್ ದಾಳಿಯಲ್ಲಿದ್ದ ಕೆಲ ಯುವಕರ ಹೆಸರು ಹೇಳಿದ್ದಳು. ಅದರಂತೆ ಆ ಸಂದರ್ಭ ಪಬ್ ದಾಳಿಯ ಆರೋಪಿಗಳ ಚಿತ್ರಗಳನ್ನು ತೋರಿಸಿ ಆರೋಪಿಗಳು ಇವರೇ ಎಂದು ಕೇಳಿದಾಗ ಆಕೆ ಇಲ್ಲವೆಂದಳು. ಇದೇ ವೇಳೆ ಯುವಕನನ್ನು ಪತ್ತೆಹಚ್ಚಲಾಯಿತು. ತಕ್ಷಣ ನಾವು ಯುವತಿಯೊಂದಿಗೆ ಸಂಬಂಧಪಟ್ಟ ಪೊಲೀಸ್ ಠಾಣೆಗೆ ತೆರಳಿದೆವು. ನಿಜಕ್ಕೂ ಡಿಸಿಪಿ ಜಗದೀಶ್ ಮತ್ತು ಎಸಿಪಿಗಳ ನೆರವನ್ನು ನಾವು ನೆನೆಯಲೇಬೇಕು' ಎಂದಿದ್ದಾರೆ.

ಪೊಲೀಸರು ಆರೋಪಿಗಳನ್ನು ಎರಡು ಬಾರಿ ಬಂಧನಕ್ಕೊಳಪಡಿಸಿದ್ದು ಒಂದು ವೇಳೆ ಘಟನೆಯಲ್ಲಿ ಸಂತ್ರಸ್ತ ಯುವಕನ ಪಾತ್ರ ಇದ್ದಿದ್ದರೆ ಆರೋಪಿಗಳು ಪೊಲೀಸರ ಮುಂದೆ ಆತನ ಹೆಸರನ್ನು ಬಹಿರಂಗಪಡಿಸುತ್ತಿರಲಿಲ್ಲವೇ? ಎಂದು ಆಶಾ ನಾಯಕ್ ಪ್ರಶ್ನಿಸುವ ಮೂಲಕ ಸಂಘಗಳಿಗೆ ತಿರುಗೇಟು ನೀಡಿದ್ದಾರೆ. "ಸಂತ್ರಸ್ತರಿಬ್ಬರಿಗೆ ತಾನು ವಕೀಲೆಗಿಂತಲೂ ಹೆಚ್ಚಾಗಿ ಮಾನವೀಯತೆಯ ನೆಲೆಯಲ್ಲಿ ಸಹಕರಿಸಿದ್ದೆ. ಆದರೀಗ ಪ್ರಕರಣವನ್ನು ತಿರುಚಿ ಮತೀಯಗೊಳಿಸಿ ಸಮುದಾಯಗಳ ನಡುವೆ ಸಂಘರ್ಷಕ್ಕೆ ಎಡೆಮಾಡಿಕೊಡುತ್ತಿರುವುದು ನಮಗೆ ಅತೀವ ಬೇಸರ ಮೂಡಿಸಿದೆ" ಎಂದು ಆಶಾ ನಾಯಕ್ ವ್ಯಥೆಯಿಂದಲೇ ಹೇಳಿಕೊಳ್ಳುತ್ತಾರೆ.



ದೇರಳಕಟ್ಟೆ ಗ್ಯಾಂಗ್‌ರೇಪಿನಲ್ಲಿ ಸಿಕ್ಕಿಬಿದ್ದ ಕಿರಾತಕರು

ಸಂಘಿ ಕಾರ್ಯಕರ್ತರನ್ನು ಬಚಾವ್ ಮಾಡಿದ್ದೇ ಪ್ರಗತಿಪರರು!

ದೇರಳಕಟ್ಟೆ ಗ್ಯಾಂಗ್‌ರೇಪ್ ಪ್ರಕರಣವನ್ನು ಮುಂದಿಟ್ಟುಕೊಂಡು ಫೇಸ್‌ಬುಕ್ ಮತ್ತು ಅಂತರ್ಜಾಲಗಳಲ್ಲಿ ಪ್ರಗತಿಪರರ ಮೇಲೆ ಹರಿಹಾಯುತ್ತಿರುವ ಸಂಘಗಳಿಗೆ ತಾವು ಪ್ರಗತಿಪರರಿಗೆ ಕೃತಜ್ಞರಾಗಿರಬೇಕೆನ್ನುವ ಸತ್ಯವೇ ಮರೆತುಹೋದಂತಿದೆ. ಪ್ರಗತಿಪರರು ಸುಮ್ಮನಿದ್ದಿದ್ದರೆ ನೈಜ ಆರೋಪಿಗಳ ಬಂಧನದ ಬದಲು ಹಿಂದೂ ಜಾಗರಣಾ ವೇದಿಕೆಯ ಕಾರ್ಯಕರ್ತರು ಅರೆಸ್ಟ್ ಆಗುತ್ತಿದ್ದರು ಎಂಬುದು ಹಿಂದೂ ಸಂಘಟನೆಗಳಿಗೆ ಗೊತ್ತಿಲ್ಲ. ಈ ಗ್ಯಾಂಗ್‌ರೇಪ್ ನಡೆಸಿದ್ದ ದುಷ್ಕರ್ಮಿಗಳು ನಟೋರಿಯಸ್ ಕ್ರಿಮಿನಲ್‌ಗಳು. ಅವರು ಈ ದುಷ್ಕೃತ್ಯ ಎಸಗುವ ಸಂದರ್ಭ ತಮ್ಮ ಹೆಸರುಗಳನ್ನು ಬದಲಿಸಿ "ಸುಭಾಷ್ ಪಡೀಲ್" "ಮುನ್ನಾ", "ಗಣೇಶ್" ಎಂಬಿತ್ಯಾದಿಯಾಗಿ ಬಳಕೆ ಮಾಡಿದ್ದಾರೆ. ಅತ್ಯಾಚಾರಕ್ಕೊಳಗಾದ ವಿದ್ಯಾರ್ಥಿನಿಯೂ ಇದನ್ನು ಸತ್ಯವೆಂದೇ ನಂಬಿದ್ದಳು. ಪೊಲೀಸರ ವಿಚಾರಣೆ ಸಂದರ್ಭ "ಆರೋಪಿಗಳು ಪರಸ್ಪರ ಮಾತನಾಡುವಾಗ ಸುಭಾಷ್ ಪಡೀಲ್, ಮುನ್ನಾ, ಗಣೇಶ್ ಎಂದು ಮಾತನಾಡಿಕೊಳ್ಳುತ್ತಿದ್ದರು" ಎಂದು ಮಾಹಿತಿ ನೀಡಿದ್ದಳು. ತಕ್ಷಣ ಪೊಲೀಸರು ವೈರ್‌ಲೈಸ್ ಮೂಲಕ ಎಲ್ಲಾ ಠಾಣೆಗಳಿಗೂ ಮಾಹಿತಿ ರವಾನಿಸಿ ಹೋಂಸ್ಟೇ ದಾಳಿ ಕುಖ್ಯಾತಿಯ ಸುಭಾಷ್ ಪಡೀಲ್ ಮತ್ತವನ ಬಳಗವನ್ನು ಎತ್ತಾಕಿಕೊಂಡು ಬಂದಿದ್ದರು. ಅಷ್ಟರಲ್ಲಿ ಪ್ರಗತಿಪರ ಚಿಂತಕ ನರೇಂದ್ರ ನಾಯಕ್ ಮತ್ತು ಆಶಾ ನಾಯಕ್ ತಮ್ಮ ಲ್ಯಾಪ್‌ಟಾಪ್‌ನಲ್ಲಿದ್ದ ಹೋಂ ಸ್ಟೇ ದಾಳಿ ಆರೋಪಿಗಳ ಫೋಟೋವನ್ನು ವಿದ್ಯಾರ್ಥಿನಿಗೆ ತೋರಿಸಿದಾಗ ವಿದ್ಯಾರ್ಥಿನಿಯು "ಇವರಲ್ಲ" ಎಂದಿದ್ದಳು. ನರೇಂದ್ರ ನಾಯಕರು ಪೊಲೀಸ್ ಆಯುಕ್ತರ ಗಮನಕ್ಕೆ ಈ ಸಂಗತಿ ತಂದು ಹಿಂದೂ ಜಾಗರಣಾ ವೇದಿಕೆಯ ಸದಸ್ಯರನ್ನು ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದರು. ಅದರ ನಂತರವೇ ನೈಜ ಆರೋಪಿಗಳನ್ನು ಬಂಧಿಸಿದ್ದು. ಆರ್‌ಎಸ್‌ಎಸ್ ಮಂದಿ ಬೈಯುವ ಪ್ರಗತಿಪರ ಚಿಂತಕರೇನಾದರೂ ಸ್ವಲ್ಪ ಹೊತ್ತು ಕಣ್ಣು ಮುಚ್ಚಿ ಕುಳಿತಿದ್ದರೆ ಹಿಂದೂ ಜಾಗರಣಾ ವೇದಿಕೆಯ ಎಂಟು ಮಂದಿ ಅಂದರ್ ಆಗುತ್ತಿದ್ದರು! ನೈಜ ಕ್ರಿಮಿನಲ್‌ಗಳು ಮತ್ತಷ್ಟು ದಿನ ಆರಾಮವಾಗಿ ಹೊರಗಿದ್ದುಬಿಡುತ್ತಿದ್ದರು.

ಉಡುಪಿ ಸೆಕ್ಸ್ ಆ್ಯಂಡ್ ಬ್ಲ್ಯಾಕ್‌ಮೇಲ್

ದೇರಳಕಟ್ಟೆಯ ಪ್ರಕರಣ ಕಾವೇರುತ್ತಿರುವಾಗಲೇ, ಇದೀಗ ಅದೇ ಮಾದರಿಯಲ್ಲಿ ಪಾಖಂಡಿ ಕಾಮುಕ ಯುವಕನೋರ್ವ ವಿದ್ಯಾರ್ಥಿನಿಯನ್ನು ಪುಸಲಾಯಿಸಿ ಆಕೆಯೊಂದಿಗೆ ನಡೆಸಿದ ಸೆಕ್ಸ್‌ನ ಚಿತ್ರಗಳನ್ನು ಫೇಸ್‌ಬುಕ್‌ನಲ್ಲಿ ಪ್ರಕಟಿಸಿ ಗದ್ದಲ ಎಬ್ಬಿಸಿದ್ದಾನೆ. ಆತ ಮುಸ್ಲಿಂ ಯುವಕನಾಗಿದ್ದು ಆಕೆ ಹಿಂದೂ ಯುವತಿಯಾಗಿದ್ದರಿಂದ ಯಥಾಪ್ರಕಾರ ಆರೆಸ್ಸೆಸ್‌ನ ರಂಗಪ್ರವೇಶ ನಡೆದು ಉಡುಪಿ ಉದ್ರಿಕ್ತ ಸ್ಥಿತಿಯಲ್ಲಿದೆ. ಬಜರಂಗದಳದ ಕಾರ್ಯಕರ್ತರು ಉಡುಪಿ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಮುಂದೆ ಜಮಾಯಿಸಿ ಆರೋಪಿಯನ್ನು ಕೂಡಲೇ ಬಂಧಿಸುವಂತೆ ಒತ್ತಾಯಿಸಿ ಇಡೀ ಮುಸ್ಲಿಂ ಸಮುದಾಯವನ್ನು ಅವಹೇಳನ ಮಾಡಿ ಗಲಭೆಗೂ ಪ್ರಚೋದಿಸಿದ್ದಾರೆ.

ಫೇಸ್‌ಬುಕ್‌ನಲ್ಲಿ ಯುವತಿಯ ನಗ್ನ ಚಿತ್ರಗಳನ್ನು ಹಾಕಿದ ನೀಚ ಯುವಕ ಕಟಪಾಡಿಯ ಮುಹಮ್ಮದ್ ಯಾಸೀರ್ ಎಂಬಾತ ಮುಸ್ಲಿಮನೇ ಹೊರತು ಯಾವುದೇ ಮುಸ್ಲಿಂ ಸಂಘಟನೆಗೆ ಸೇರಿದವನಲ್ಲ. ಆದರೂ ಆತನ ಕೃತ್ಯವನ್ನು ಇಡೀ ಮುಸ್ಲಿಂ ಸಮುದಾಯಕ್ಕೆ ನೇತುಹಾಕಿ ಆರೆಸ್ಸೆಸ್ ಕೋಮುದಳ್ಳುರಿ ಸೃಷ್ಟಿಸಲು ಹುನ್ನಾರ ನಡೆಸಿದೆ.

ಉಡುಪಿಯ ಪ್ರತಿಷ್ಠಿತ ಕಾಲೇಜಿನ ವಿದ್ಯಾರ್ಥಿನಿ ಜತೆಗೆ ಸ್ನೇಹ ಬೆಳೆಸಿದ್ದ ಯಾಸೀರ್, ಪ್ರೀತಿಯ ನಾಟಕವಾಡಿ ವಿದ್ಯಾರ್ಥಿನಿ ಜತೆ ತನ್ನ ತೃಷೆ ತೀರಿಸಲು ಆರಂಭಿಸಿದ್ದ. ಇದೇ ಸಂದರ್ಭದಲ್ಲಿ ಚಿತ್ರಗಳನ್ನು ತೆಗೆದಿದ್ದ. ವಿಪರ್ಯಾಸವೆಂದರೆ ಯಾಸೀರ್‌ನ ಈ ಕೃತ್ಯದಲ್ಲಿ ಸದ್ಯ ವಿದೇಶದಲ್ಲಿರುವ ಆತನ ಪ್ರಿಯತಮೆಯೋರ್ವಳು ಸಾಥ್ ನೀಡಿದ್ದಾಳೆ. ಆರೋಪಿ ಮುಹಮ್ಮದ್ ಯಾಸೀರ್‌ಗೆ ಮಂಗಳೂರು ಮೂಲದ ಆಶಾ ಎಂಬ ಇನ್ನೊಬ್ಬಳು ಪ್ರಿಯತಮೆಯಿದ್ದಾಳೆ. ಸದ್ಯ ಕೆಲಸದ ನಿಮಿತ್ತ ವಿದೇಶಕ್ಕೆ ತೆರಳಿರುವ ಆಶಾ ಮತ್ತು ಲೈಂಗಿಕ ದೌರ್ಜನ್ಯ ಪೀಡಿತ ವಿದ್ಯಾರ್ಥಿನಿ ಸ್ನೇಹಿತೆಯರು. ಆಶಾ ವಿದೇಶಕ್ಕೆ ತೆರಳುತ್ತಿದ್ದಂತೆ ಯಾಸೀರ್ ಆಕೆಯ ಗೆಳತಿಯ ಮನಗೆದ್ದಿದ್ದ. ಆಕೆಯೊಂದಿಗೆ ಪ್ರೀತಿಯ ನಾಟಕವಾಡಿ ಮೋಸಗೊಳಿಸಿ ನಾಲ್ಕು ತಿಂಗಳ ಹಿಂದೆ ಸೆಕ್ಸ್ ಕೂಡಾ ನಡೆಸಿದ್ದಾನೆ. ಆ ವೇಳೆ ತೆಗೆದ ಚಿತ್ರಗಳನ್ನು ವಿದ್ಯಾರ್ಥಿನಿ ಮೊಬೈಲಿಗೆ ವಾಟ್ಸ್‌ಅಪ್ ಮೂಲಕ ಕಳುಹಿಸಿದ್ದ. ಮಾತ್ರವಲ್ಲ ವಿದೇಶದಲ್ಲಿರುವ ಪ್ರಿಯತಮೆ ಆಶಾಳಿಗೂ ಕಳುಹಿಸಿದ್ದ. ಇದು ಸ್ನೇಹಿತೆಯರ ನಡುವೆ ಒಡಕು ತಂದಿಟ್ಟಿತ್ತು.


ತನ್ನ ಮೊಬೈಲಿನಲ್ಲಿದ್ದ ನಗ್ನ ಚಿತ್ರಗಳನ್ನೇ ಬಂಡವಾಳವನ್ನಾಗಿಸಿಕೊಂಡು ತನ್ನ ಪ್ರಿಯತಮ ಮತ್ತು ಆ ಕಾಲೇಜು ಯುವತಿಯನ್ನು ಬೇರ್ಪಡಿಸಲು ಐಡಿಯಾ ರೂಪಿಸಿದ ಆಶಾ ಯಾಸೀರ್‌ನ ಫೇಸ್‌ಬುಕ್ ಅಕೌಂಟ್ ಮೂಲಕ ಇವರಿಬ್ಬರ ನಗ್ನ ಚಿತ್ರಗಳನ್ನು ಅಪ್‌ಲೋಡ್ ಮಾಡಿದ್ದಾಳೆ ಎನ್ನಲಾಗಿದೆ. ಅದು ಸುದ್ದಿಯಾಗಿ ಕಾಲೇಜು ವಿದ್ಯಾರ್ಥಿನಿ ತನ್ನ ಪ್ರಿಯತಮನ ಗೆಳೆತನ ಬಿಟ್ಟುಬಿಡುತ್ತಾಳೆ ಎಂಬ ಆಶಯ ಆಶಾಳದ್ದು. ವಿದೇಶದಲ್ಲಿರುವ ಆಶಾ ಮೇಲೆ ಪ್ರಕರಣ ದಾಖಲಾಗಿದ್ದರೂ, ಆಕೆಯ ಬಂಧನ ಸುಲಭವಲ್ಲ ಎಂದು ಪೊಲೀಸರು ಹೇಳುತ್ತಿದ್ದಾರೆ.

ಇಬ್ಬರ ಒಪ್ಪಿಗೆಯಿಂದಲೇ ಸೆಕ್ಸ್ ನಡೆದಿರುವುದಲ್ಲದೆ ಇಬ್ಬರೂ ಸೇರಿ ಸೆಕ್ಸ್ ಚಿತ್ರವನ್ನು ತೆಗೆಯಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಎಸ್.ಪಿ ಬೋರಲಿಂಗಯ್ಯ ಹೇಳಿಕೆಯನ್ನೂ ನೀಡಿದ್ದಾರೆ. ಮುಹಮ್ಮದ್ ಯಾಸೀರ್‌ನನ್ನು ಮಣಿಪಾಲ ಪೊಲೀಸರು ಬಂಧಿಸಿ ಜೈಲಿಗೂ ಅಟ್ಟಿದ್ದಾರೆ. ಸೈಬರ್ ಆ್ಯಕ್ಟ್ ಕಾಯಿದೆಯಡಿ ದಾಖಲಾಗಿರುವ ಈ ಪ್ರಕರಣದಲ್ಲಿ ಆರೋಪಿಗೆ ಜನವರಿ 21ರವರೆಗೆ ನ್ಯಾಯಾಂಗ ಬಂಧನವನ್ನೂ ಕೋರ್ಟ್ ವಿಧಿಸಿದೆ. ಇಷ್ಟೆಲ್ಲಾ ಆದರೂ ಅಪಾಪೋಲಿಯ ಕೃತ್ಯವನ್ನು ಬಳಸಿಕೊಂಡು ಮಂಗಳೂರು ಮತ್ತು ಉಡುಪಿಯಲ್ಲಿ ದಾಂಧಲೆ ಎಬ್ಬಿಸಲು ಆರ್‌ಎಸ್‌ಎಸ್ ಸಜ್ಜಾಗಿ ಶಾಂತಿ ಕದಡಲು ಸಿದ್ಧವಾಗಿದೆ.

ಇವೆರಡು ಪ್ರಕರಣಗಳು ನೆಪ ಮಾತ್ರ. ಕರಾವಳಿಯಲ್ಲಿ ತನ್ನ ಜಾಲವನ್ನು ಬಲವಾಗಿ ಪಸರಿಸಿರುವ ಸಂಘ ಪರಿವಾರ ಇದುವರೆಗೂ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ತನ್ನ ಬಿಗಿ ಹಿಡಿತ ಸಾಧಿಸಿತ್ತು. ಆದರೆ ಅವರ ಪುಂಡಾಟಿಕೆಯನ್ನು ಕಂಡು ರೋಸಿಹೋಗಿದ್ದ ಕರಾವಳಿ ಜನತೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪ್ರಪ್ರಥಮ ಬಾರಿಗೆ ಸಂಘ ಪರಿವಾರ ಬೆಂಬಲಿತ ಬಿಜೆಪಿಗೆ ಮರ್ಮಾಘಾತ ನೀಡಿದ್ದರು. ಇದು ಆರೆಸ್ಸೆಸ್‌ನ ನಿದ್ದೆಗೆಡಿಸಿತ್ತು. ತುರ್ತಾಗಿ ಕರಾವಳಿಯಲ್ಲಿ ತನ್ನ ಅಧಿಕಾರ ಸ್ಥಾಪಿಸಬೇಕೆನ್ನುವುದು ಅದರ ತುಡಿತ. ಇದೇ ಸಂದರ್ಭದಲ್ಲಿ ಲೋಕಸಭಾ ಚುನಾವಣೆಯ ಮುನ್ನ ಒಂದು ಗಟ್ಟಿ ನೆಲೆಯನ್ನು ಸೃಷ್ಟಿಸಿಕೊಳ್ಳುವುದು ಆರೆಸ್ಸೆಸ್‌ಗೆ ಅನಿವಾರ್ಯ. ಕೋಮುಗಲಭೆಯ ಹೊರತು ಮುಗ್ಧ ಜನರನ್ನು ಓಲೈಸಿಕೊಂಡು ವಂಚಿಸಲು ತನಗೆ ಮತ್ಯಾವ ಅಸ್ತ್ರವೂ ಇಲ್ಲವೆಂಬುದನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿರುವ ಸಂಘ ಪರಿವಾರ ಇದೀಗ ಕ್ಷುಲ್ಲಕ ಕ್ರಿಮಿನಲ್ ಕೇಸುಗಳಲ್ಲೂ ಮೂಗು ತೂರಿಸಿ ಅದಕ್ಕೆ ಮತೀಯ ಬಣ್ಣ ಬಳಿಯಲು ಯತ್ನಿಸುತ್ತಿದೆ. ಹಸಿದ ಬಕಾಸುರನಂತಾಗಿರುವ ಸಂಘಪರಿವಾರದ ಬಾಯಿಗೆ ದೇರಳಕಟ್ಟೆ ಮತ್ತು ಉಡುಪಿಯ ಸೆಕ್ಸ್ ಸ್ಕ್ಯಾಂಡಲ್‌ಗಳು ಆಹಾರವಾಗಿ ದೊರಕಿರುವುದು ಅಚ್ಚರಿಯೇನಲ್ಲ, ಆದರೆ ಅದು ಕರಾವಳಿಯ ವಿಪರ್ಯಾಸವಂತೂ ಹೌದು.

● ಪಾವಗಾಡ

ರಾಯಚೂರು: ಆರ್‌ಟಿಪಿಎಸ್ ಅನ್ನೇ ನುಂಗುತ್ತಿರುವ ಕಳ್ಳರು!



ಕರ್ನಾಟಕದ ಜನರಿಗೆ ಒಂದುಕಡೆ ಪ್ರತಿನಿತ್ಯ ಕರೆಂಟ್ ಕಟ್ ಸಮಸ್ಯೆಯಾದರೆ ಮತ್ತೊಂದು ಕಡೆ ಆರು ತಿಂಗಳಿಗೆ ಒಮ್ಮೆ ವಿದ್ಯುತ್ ಬೆಲೆಯೇರಿಕೆ ಮಾಡಿ ಸರ್ಕಾರಗಳು ನಮಗೆ ಶಾಕ್ ಟ್ರೀಟ್‌ಮೆಂಟ್ ಕೊಡುತ್ತಲೇ ಬಂದಿವೆ. ಹಾಗಿದ್ದರೆ ಇದು ಕರ್ನಾಟಕದ ಜನರಿಗೆ ಪರಿಹಾರವೇ ಇಲ್ಲದ ಅನಿವಾರ್ಯ ಕರ್ಮವೇ?

ವಾಸ್ತವಾಂಶಗಳನ್ನು ಪರಿಶೀಲಿಸಿದಾಗ ವಿದ್ಯುತ್ ಅಭಾವ ಹಾಗೂ ಬೆಲೆಯೇರಿಕೆ ಎರಡೂ ವಿಷಯದಲ್ಲಿ ಆಯಕಟ್ಟಿನಲ್ಲಿರುವ ಅಧಿಕಾರಿಗಳು ಹಾಗೂ ರಾಜಕಾರಣಿಗಳ ಭ್ರಷ್ಟಾಚಾರ ಮತ್ತು ದುರಾಡಳಿತಗಳೇ ನಮ್ಮ ಇಂದಿನ ದುಸ್ಥಿತಿಗೆ ಪ್ರಧಾನ ಕಾರಣ ಎಂದು ಗೊತ್ತಾಗುತ್ತದೆ. ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರದ ದುರವಸ್ಥೆಯನ್ನು ಪರಿಶೀಲಿಸಿದರೆ ಈ ಅಂಶ ನಿಚ್ಚಳವಾಗಿ ಎದ್ದು ಕಾಣುತ್ತದೆ.

ರಾಜ್ಯದ ವಿದ್ಯುತ್ ಉತ್ಪಾದನೆಯಲ್ಲಿ ರಾಯಚೂರು ಥರ್ಮಲ್ ಪವರ್ ಸ್ಟೇಷನ್ (RTPS) ನ ಪಾಲು ಶೇಕಡ 40ರಷ್ಟು! ಇಲ್ಲಿನ ಪ್ರಥಮ ಘಟಕ ವಿದ್ಯುತ್ ಉತ್ಪಾದನೆ ಆರಂಭವಾಗಿದ್ದು 1985ರಲ್ಲಿ, ನಂತರದ ದಿನಗಳಲ್ಲಿ ಹೆಚ್ಚುವರಿ ಘಟಕಗಳನ್ನು ಸ್ಥಾಪಿಸಿ ಈಗ ಒಟ್ಟು 8 ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. 2010ರಲ್ಲಿ 940 ಕೋಟಿ ವೆಚ್ಚದಲ್ಲಿ ಸ್ಥಾಪನೆ ಮಾಡಿದ 8ನೇ ಘಟಕದ ವೆಚ್ಚವನ್ನೂ ಒಳಗೊಂಡಂತೆ ಇದುವರೆಗೆ ಸುಮಾರು 4,500 ಕೋಟಿ ಸರ್ಕಾರದ ಬಂಡವಾಳ ಹೂಡಲಾಗಿದೆ. ಇಲ್ಲಿ ವಿದ್ಯುತ್ ತಲಾ 210 ಮೆಗಾವ್ಯಾಟ್ ಸಾಮರ್ಥ್ಯದ 7 ಘಟಕಗಳು ಮತ್ತು 250 ಮೆ.ವಾ ಸಾಮರ್ಥ್ಯದ ಒಂದು ಘಟಕವೂ ಸೇರಿದಂತೆ ಒಟ್ಟು 8 ಘಟಕಗಳು ಕಾರ್ಯ ನಿರ್ವಹಿಸುತ್ತಿವೆ.

ಇಡೀ ರಾಜ್ಯದ ಆರ್ಥಿಕತೆ ಮತ್ತು ಜನಜೀವನ RTPS ನಲ್ಲಿ ಉತ್ಪಾದನೆಯಾಗುವ ವಿದ್ಯುತ್‌ನ ಮೇಲೆ ಬಹುವಾಗಿ ಅವಲಂಬಿಸಿದ್ದರೂ RTPSನ ಆಡಳಿತ ಮಾತ್ರ ಗಬ್ಬೆದ್ದು ನಾರುತ್ತಿದೆ. ಇಲ್ಲಿನ ಸಮಸ್ಯೆಗಳು ಒಂದಲ್ಲ ಎರಡಲ್ಲ. 1985-90ರ ಅವಧಿಯಲ್ಲಿ ಪ್ರಾರಂಭಗೊಂಡ ಘಟಕಗಳಿಗೆ 25 ವರ್ಷಕ್ಕೂ ಹೆಚ್ಚು ಆಯಸ್ಸಾಗಿದ್ದು ಅಲ್ಲಿನ ಬಹುತೇಕ ಯಂತ್ರಗಳು ಕೆಟ್ಟ ನಿರ್ವಹಣೆಯಿಂದಾಗಿ ಕೆಲಸಕ್ಕೆ ಬಾರದ ಹಂತ ತಲುಪಿವೆ. ಹೀಗಾಗಿ ಪದೇಪದೇ ವಿದ್ಯುತ್ ಸ್ಥಾವರಗಳ ಕಾರ್ಯ ಸ್ಥಗಿತಗೊಂಡು ವಾರಗಟ್ಟಲೆ, ಕೆಲವೊಮ್ಮೆ ತಿಂಗಳುಗಟ್ಟಲೆ ವಿದ್ಯುತ್ ವ್ಯತ್ಯಯವಾಗುವುದು ಮಾಮೂಲಿಯಾಗಿಬಿಟ್ಟಿದೆ.

ಪದೇಪದೇ ಯಂತ್ರಗಳಲ್ಲಿ ತಾಂತ್ರಿಕ ದೋಷ, ಬಾಯ್ಲರ್ ಟ್ಯೂಬ್‌ನಲ್ಲಿ ಸೋರಿಕೆಗಳು ನಿತ್ಯದ ಸಂಗತಿ. ಪರಿಣಾಮವಾಗಿ 2010ರಲ್ಲಿ 95 ಬಾರಿ, 2011ರಲ್ಲಿ 105 ಬಾರಿ ವಿದ್ಯುತ್ ಉತ್ಪಾದನಾ ಕಾರ್ಯ ಸ್ಥಗಿತಗೊಂಡಿತ್ತೆಂದರೆ ಈ ಸಮಸ್ಯೆಯ ತೀವ್ರತೆ ಎಷ್ಟೆಂದು ಅರಿಯಬಹುದು. ದಿನೇ ದಿನೇ ಈ ಸಮಸ್ಯೆ ಹೆಚ್ಚಾಗುತ್ತಿದ್ದು ತೀರಾ ಇತ್ತೀಚೆಗೆ ಸ್ಥಾಪನೆಗೊಂಡಿರುವ 8ನೇ ಘಟಕ ಕೂಡ ಈಗ ಕೆಲಸ ನಿಲ್ಲಿಸಿದೆ.

ಈ ಸಮಸ್ಯೆಯನ್ನು ಅಧ್ಯಯನ ಮಾಡಿ ಪರಿಹಾರ ಸೂಚಿಸಲೆಂದು ನೇಮಕಗೊಂಡಿದ್ದ ಬಿಎಚ್‌ಇಎಲ್‌ನ ತಂತ್ರಜ್ಞರ ತಂಡ ಹಳೆಯ ಯಂತ್ರೋಪಕರಣಗಳನ್ನು ಆದ್ಯತೆಯ ಮೇರೆಗೆ ಬದಲಾಯಿಸಬೇಕೆಂದು ಶಿಫಾರಸ್ಸು ಮಾಡಿದೆ. ಹೀಗೆ ಮೀನಮೇಷ ಎಣಿಸುತ್ತಾ ಕಾಲದೂಡಿದರೆ ಮುಂದಿನ ದಿನಗಳಲ್ಲಿ ವಿದ್ಯುತ್ ಉತ್ಪಾದನೆ ಶಾಶ್ವತವಾಗಿ ಸ್ಥಗಿತಗೊಳ್ಳುವ ಸನ್ನಿವೇಶ ಎದುರಾಗಬಹುದೆಂದೂ ಹಾಗೂ ಭಾರೀ ಅನಾಹುತ ಸಂಭವಿಸುವ ಅಪಾಯ ಕಾದಿದೆಯೆಂದೂ ಎಚ್ಚರಿಸಿದೆ. ಈ ವರದಿ ಸಲ್ಲಿಕೆಯಾಗಿ ವರ್ಷಗಳೇ ಕಳೆದು ಹೋಗಿದ್ದರೂ ಇದುವರೆಗೆ ಸರ್ಕಾರಗಳ ಕ್ರಮ ಮಾತ್ರ ಶೂನ್ಯ.

ಈ ವಿದ್ಯುತ್ ಸ್ಥಾವರದಲ್ಲಿ ಕೇವಲ ಹಳೆಯ ಯಂತ್ರೋಪಕರಣಗಳ ಸಮಸ್ಯೆ ಮಾತ್ರ ಇಲ್ಲ, ಅದಕ್ಕಿಂತಲೂ ಮುಖ್ಯವಾಗಿ ಕಳಪೆ ಕಚ್ಚಾ ಸಾಮಗ್ರಿಯ ಬಳಕೆಯಿಂದ ದುಸ್ಥಿತಿಯಲ್ಲಿರುವ ಯಂತ್ರೋಪಕರಣಗಳು ಹಾಳಾಗಲು ಕಾರಣವಾಗಿದೆ. ಈ ಸಮಸ್ಯೆ ಮಿತಿಮೀರಿದ ಪರಿಣಾಮ ಇದು ಸಿಬಿಐ ತನಿಖೆಯ ಹಂತ ತಲುಪಿದೆ.

2013ರ ಮೇ ಕೊನೆಯ ವಾರ ರಾಯಚೂರಿನಲ್ಲಿ ಒಂದು ದಿಢೀರ್ ವಿದ್ಯಮಾನ ಜರುಗಿತು. ಸಿ.ಬಿ.ಐ.ನ ಡಿವೈಎಸ್‌ಪಿ ಆರ್.ಕೆ.ದಾಸ್ ಎಂಬ ಅಧಿಕಾರಿ ಆರ್.ಟಿ.ಪಿ. ಎಸ್.ಗೆ ದಿಢೀರ್ ಭೇಟಿಕೊಟ್ಟು ಕಳಪೆ ಕಲ್ಲಿದ್ದಲು ಅವ್ಯವಹಾರದ ಬಗ್ಗೆ ತನಿಖೆ ಆರಂಭಿಸಿದ್ದರು. ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳನ್ನು ಪ್ರಶ್ನಿಸಿ ದಾಖಲೆಗಳನ್ನು ಪಡೆದುಕೊಂಡಿದ್ದರು. ನಂತರ ತಿಳಿದುಬಂದ ವಿಚಾರವೇನೆಂದರೆ ರಾಯಚೂರಿಗೆ ಬರುವ ಮುನ್ನವೇ ಸಿಬಿಐ ತಂಡ ಮಹಾರಾಷ್ಟ್ರದ ನಾಗಪುರ ಸುತ್ತಮುತ್ತಲ ಕಲ್ಲಿದ್ದಲು ಗಣಿಗಳಿಗೆ ಭೇಟಿ ಕೊಟ್ಟು ಅಲ್ಲಿಂದ ಆರ್.ಟಿ.ಪಿ. ಎಸ್.ಗೆ ಸರಬರಾಜಾಗಿದ್ದ ಕಲ್ಲಿದ್ದಲಿನ ಗುಣಮಟ್ಟ ಮತ್ತು ನಿಗದಿಯಾಗಿದ್ದ ದರ ಮುಂತಾದ ದಾಖಲೆಗಳನ್ನು ಪಡೆದುಕೊಂಡಿದ್ದರು.

ಆದರೆ ಆ ಸಂದರ್ಭದಲ್ಲಿ ಪತ್ರಕರ್ತರ ಯಾವೊಂದು ಪ್ರಶ್ನೆಗಳಿಗೂ ಸ್ಪಷ್ಟ ಉತ್ತರ ಕೊಡದ ಸಿಬಿಐ ಅಧಿಕಾರಿ ತಾವು ಕಂಡುಕೊಂಡ ಸತ್ಯವನ್ನು ಮೇಲಧಿಕಾರಿಗಳಿಗೆ ವರದಿ ಮಾಡುವುದಾಗಿ ಅಷ್ಟೇ ತಿಳಿಸಿ ನುಣುಚಿಕೊಂಡಿದ್ದರು. ಅದಾದಮೇಲೆ ಆ ಮಹಾನುಭಾವ ದಾಸ್ ಏನು ವರದಿ ನೀಡಿದ್ದಾನೆ, ನಂತರ ಸಿಬಿಐ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ ಎಂಬುದೊಂದು ಚಿದಂಬರ ರಹಸ್ಯ. ಸಿಬಿಐ ಅಧಿಕಾರಿಗಳೂ ಕೂಡ ಆರ್‌ಟಿಪಿಎಸ್ ಅವ್ಯವಹಾರದಲ್ಲಿ ಕೈ ಜೋಡಿಸಿಬಿಟ್ಟಿದ್ದಾರೇನೋ ಎಂಬ ಅನುಮಾನ ರಾಜ್ಯದ ಜನತೆಗೆ ಬಂದಿರುವುದಕ್ಕೆ ನೇರವಾಗಿ ಸಿಬಿಐಯೇ ಜವಾಬ್ದಾರಿ.

ಆರ್.ಟಿ.ಪಿ.ಎಸ್.ಗೆ ಪ್ರತಿನಿತ್ಯ ಆಂಧ್ರಪ್ರದೇಶದ ಸಿಂಗರೇಣಿ ಗಣಿ ಕಂಪನಿ, ಒರಿಸ್ಸಾದ ಮಹಾನದಿ ಕೋಲ್ ಫೀಲ್ಡ್ಸ್, ಮಹಾರಾಷ್ಟ್ರದ ವೆಸ್ಟರ್ನ್ ಕೋಲ್‌ಫೀಲ್ಡ್ಸ್‌ಗಳಿಂದ ಕಲ್ಲಿದ್ದಲು ಸರಬರಾಜಾಗುತ್ತಿದೆ. ಇಲ್ಲೇ ಇರುವುದು ಭಾರೀ ಡೀಲಿಂಗ್.

ಕಲ್ಲಿದ್ದಲು ಸರಬರಾಜಿಗೆ ಟೆಂಡರ್ ಗಿಟ್ಟಿಸಿದ ಕಂಪನಿ ಮತ್ತು ಆರ್.ಟಿ.ಪಿ.ಎಸ್.ನ ಭ್ರಷ್ಟ ಅಧಿಕಾರಿಗಳು ಒಂದಾಗಿ ಷಡ್ಯಂತ್ರವೊಂದನ್ನು ಹೆಣೆದಿದ್ದಾರೆ. ಅದರಂತೆ ಸರಬರಾಜಾದ ಇದ್ದಿಲಿನ ಗುಣಮಟ್ಟವನ್ನು ಕಂಪನಿಯಲ್ಲಿ ಚೆಕ್ ಮಾಡುವಂತಿಲ್ಲ; ಬದಲಿಗೆ ಅದೇನಿದ್ದರೂ ಸಂಬಂಧಿಸಿದ ಮೈನ್ಸ್‌ನಲ್ಲಿಯೇ ಚೆಕ್ ಮಾಡಿಕೊಳ್ಳಬೇಕು. ಹೀಗಾಗಿ ಗಣಿಯಲ್ಲಿ "ಚೆಕ್ ಮಾಡಿದ" ಸರಕೇ ಬೇರೆ, ಆರ್‌ಟಿಪಿ ಎಸ್‌ನಲ್ಲಿ ಬಂದು ತಲುಪುವ ಸರಕೇ ಬೇರೆಯಾಗಲು ಅವಕಾಶ ಕಲ್ಪಿಸಲಾಗಿದೆ. ಕಳಪೆ ಗುಣಮಟ್ಟ ಕಲ್ಲಿದ್ದಲನ್ನು ಸರಬರಾಜು ಮಾಡಲು ಭ್ರಷ್ಟ ಅಧಿಕಾರಿಗಳು ಕಂಡುಕೊಂಡಿರುವ ಕ್ರಿಯೇಟಿವ್ ಐಡಿಯಾ ಇದು!

ಈ ದಂಧೆಯ ಬಗ್ಗೆ ಸ್ವತಃ ಸಿಎಜಿ ವರದಿ ಕೂಡ ಒಪ್ಪಿಕೊಂಡಿದೆ. 2009ರಿಂದ 2012ರವರೆಗಿನ ಅವಧಿಯಲ್ಲಿ ಆರ್‌ಟಿಪಿಎಸ್ ಸಂಸ್ಥೆ ಕಳಪೆ ಗುಣಮಟ್ಟದ ಕಲ್ಲಿದ್ದಲನ್ನು ಪಡೆದು 424.25 ಕೋಟಿ ರೂಪಾಯಿಗಳಷ್ಟು ಹೆಚ್ಚುವರಿ ಮೊತ್ತವನ್ನು ತನ್ನ ಸರಬರಾಜುದಾರರಿಗೆ ಪಾವತಿಸಿದೆ ಎಂದು ಸಿಎಜಿ ವರದಿ ದಾಖಲಿಸಿದೆ. ವಾಸ್ತವದಲ್ಲಿ ಈ ಮೊತ್ತ ಇದಕ್ಕಿಂತ ಎಷ್ಟೋ ಪಟ್ಟು ಅಧಿಕ. ಅಧಿಕ ಪಾವತಿ ಮಾತ್ರವಲ್ಲದೆ ಕಲ್ಲಿದ್ದಲು ಸರಬರಾಜುದಾರರಿಗೆ 11 ಕೋಟಿ 86 ಲಕ್ಷದಷ್ಟು ಭಾರೀ ಮೊತ್ತವನ್ನು ಬೋನಸ್ ಹೆಸರಿನಲ್ಲಿ ಪಾವತಿಸಲಾಗಿದೆ. ಈ ಭ್ರಷ್ಟಾಚಾರದ ಬೋನಸ್ಸನ್ನು ಆಕ್ಷೇಪಿಸಿರುವ ಸಿಎಜಿ ವರದಿ ಇದರಲ್ಲಿ ವ್ಯಾಪಕ ಅಕ್ರಮ ನಡೆದಿರುವ ಶಂಕೆ ವ್ಯಕ್ತಪಡಿಸಿದೆ.

ಆರ್.ಟಿ.ಪಿ.ಎಸ್ ಆಡಳಿತ ಮಂಡಳಿಯ ಬೇಜವಾಬ್ದಾರಿತನ ಮತ್ತು ದುರಾಡಳಿತದ ಪರಮಾವಧಿಯನ್ನು ಅರ್ಥಮಾಡಿಕೊಳ್ಳಲು ಮತ್ತೊಂದು ಉದಾಹರಣೆ ನೋಡಿ.

ಶಾಖೋತ್ಪನ್ನ ತಂತ್ರಜ್ಞಾನವೆಂದರೆ ಕಲ್ಲಿದ್ದಲು ಮತ್ತು ಡೀಸೆಲ್‌ಗಳನ್ನು ಉರಿಸಿ, ಅದರಿಂದ ಉಂಟಾಗುವ ಶಾಖದಿಂದ ವಿದ್ಯುತ್ ಉತ್ಪಾದನೆ ಮಾಡುವುದು. ಹೀಗೆ ಶಾಖವು ಅಧಿಕಗೊಂಡು ಯಂತ್ರೋಪಕರಣಗಳಿಗೆ ಹಾನಿ ಮತ್ತಿತರ ಅವಘಡಗಳು ಸಂಭವಿಸಬಾರದೆಂದು ಸ್ಥಾವರಕ್ಕೆ ನಿರಂತರ ನೀರು ಹಾಯಿಸಬೇಕಾಗುತ್ತದೆ. ಇದಕ್ಕಾಗಿ ಆಲಮಟ್ಟಿ ಆಣೆಕಟ್ಟಿನಿಂದ ನೀರು ಸರಬರಾಜಿನ ವ್ಯವಸ್ಥೆಯೂ ಉಂಟು.

ಆದರೆ ನಾಲಾಯಕ್ ಅಧಿಕಾರಿಗಳು ನೀರು ಸರಬರಾಜು ವ್ಯವಸ್ಥೆಯನ್ನು ಮಾಡಿಕೊಳ್ಳದ ಪರಿಣಾಮವಾಗಿ 2012ರಲ್ಲಿ ಸ್ಥಾವರದ ಎಲ್ಲಾ ಘಟಕಗಳನ್ನೂ ಸ್ಥಗಿತಗೊಳಿಸಿದ ಉದಾಹರಣೆಯೂ ಇದೆ. ಇದಕ್ಕೆ ಅಧಿಕಾರಿಗಳು ನೀಡಿದ ಕಾರಣ ಕಾಲುವೆಯಲ್ಲಿ ಹರಿಯುತ್ತಿದ್ದ ನೀರು ಬೇಸಿಗೆಯ ಝಳಕ್ಕೆ ಹೆಚ್ಚಾಗಿ ಆವಿಯಾಗಿ ನೀರು ಖೋತಾ ಆಗಿದೆ ಎಂಬುದು. ಬೇಸಿಗೆಯಲ್ಲಿ ನೀರು ಹೆಚ್ಚಾಗಿ ಆವಿಯಾಗುತ್ತದೆ ಎಂಬ ಸತ್ಯವನ್ನು ಸಂಶೋಧನೆ ಮಾಡಿ, ಹಡಬಿಟ್ಟಿ ಗಂಟು ಎಣಿಸುತ್ತಾ ಕುಳಿತ ಅಧಿಕಾರಿಗಳಿಗೆ ಯಾವ ರೀತಿ ಪಾಠ ಕಲಿಸಬೇಕೋ ನಿಮಗೇ ಬಿಟ್ಟದ್ದು.

ಇನ್ನು ನಾಡಿಗೆ ಅಗತ್ಯವಾದ ವಿದ್ಯುತ್ ಉತ್ಪಾದಿಸಲು ಕುಲುಮೆಯಲ್ಲಿ ಬೇಯುವುದು ಕಾರ್ಮಿಕರ ಕರ್ಮ. ಅಧಿಕಾರಿಗಳಿಗಾಗಿ ಹೇಗೂ ಸುವ್ಯವಸ್ಥಿತ ಬಂಗಲೆಗಳಿವೆ. ಹಾಳಾಗಲಿ, ಕನಿಷ್ಠ ಕಾರ್ಮಿಕರ ಸುರಕ್ಷತೆಯ ಬಗ್ಗೆಯಾದರೂ ಗಮನಹರಿಸುತ್ತಾರೆಯೇ ಅಂತ ಪ್ರಶ್ನೆ ಕೇಳುವುದೇ ನಿರರ್ಥಕ. ಸುರಕ್ಷತಾ ಕ್ರಮವೆಂದರೆ ಅಧಿಕಾರಿಗಳ ಪಾಲಿಗೆ ಕೆಲವು ಕಡತಗಳನ್ನು ತಯಾರಿಸುವುದು, ಎಲ್ಲವೂ ಸರಿಯಾಗಿದೆ ಎಂದು ದಾಖಲೆಗಳಲ್ಲಿ ತೋರಿಸಿ ಅದರಲ್ಲೂ ಅಮೇಧ್ಯ ತಿನ್ನುವುದು ಬಿಟ್ಟರೆ ಮತ್ತೊಂದು ವಿಧಾನ ಗೊತ್ತಿಲ್ಲ. ಇಂಥಾ ಅಪಾಯಕಾರಿ ಕೈಗಾರಿಕೆಯಲ್ಲಿ ತಮ್ಮ ಜೊತೆಯಲ್ಲೇ ಜೀವಿಸುತ್ತಿರುವ ಮನುಷ್ಯ ಜೀವಿಗಳು ದುಡಿಯುತ್ತಿದ್ದಾರೆ, ಅವರ ಸುರಕ್ಷತೆ ಬಗ್ಗೆ ಕನಿಷ್ಠ ಮುಂಜಾಗ್ರತೆಯನ್ನಾದರೂ ತೆಗೆದುಕೊಳ್ಳಬೇಕೆಂಬ ಸಹಜ ಮಾನವ ಸಂವೇದನೆಯನ್ನು ಇಲ್ಲಿನ ಭ್ರಷ್ಟ ಅಧಿಕಾರಿಗಳು ಕಳೆದುಕೊಂಡು ದಶಕಗಳೇ ಕಳೆದುಹೋಗಿದೆ.

ಈ ಹಿಂದೆ ಎಸ್.ಎಂ. ಜಾಮದಾರ್ ಎಂಬ ಪ್ರಾಮಾಣಿಕ ಅಧಿಕಾರಿಯ ಉಸ್ತುವಾರಿಯಲ್ಲಿದ್ದಾಗ ಅವರು ಕಾರ್ಮಿಕರ ಬಗ್ಗೆ ಕಾಳಜಿ ತೋರಿ ಬೂಟು, ಹೆಲ್ಮೆಟ್, ಹ್ಯಾಂಡ್‌ಗ್ಲೌಸ್ ಮುಂತಾದ ಪರಿಕರಗಳನ್ನು ಒದಗಿಸಿದ್ದರು ಎಂಬುದನ್ನು ಇಲ್ಲಿನ ಅಸಹಾಯಕ ಕಾರ್ಮಿಕರು ಈಗಲೂ ಮನಸಾರೆ ನೆನೆಯುತ್ತಾರೆ. ಈಗ ಸಂಪೂರ್ಣ ಶಿಥಿಲಾವಸ್ಥೆಯಲ್ಲಿರುವ ಘಟಕಗಳಲ್ಲಿನ ಯಂತ್ರೋಪಕರಣಗಳನ್ನು ಕೂಡಲೇ ಬದಲಾಯಿಸಬೇಕೆಂದು ಬಿಎಚ್‌ಇಎಲ್ ಸಂಸ್ಥೆ ಅಸೆಸ್‌ಮೆಂಟ್ ರಿಪೋರ್ಟ್ ಕೊಟ್ಟಿದ್ದರೂ ತಲೆ ಕೆಡಿಸಿಕೊಳ್ಳದ ಸರ್ಕಾರ ಹಾಗೂ ಭ್ರಷ್ಟ ಅಧಿಕಾರಿಗಳು ಕಾರ್ಮಿಕರನ್ನು ಅಪಾಯಕಾರಿ ಸ್ಥಿತಿಯಲ್ಲೇ ದುಡಿಮೆಗೆ ದೂಡುತ್ತಿದ್ದಾರೆ. ಈಗಂತೂ ಭ್ರಷ್ಟಾಚಾರದ ಶಕ್ತಿಕೇಂದ್ರವಾಗಿರುವ ಆರ್.ಟಿ.ಪಿ.ಎಸ್.ನಲ್ಲಿ ನಿತ್ಯವೂ ಕೈಕಾಲು ಕಳೆದುಕೊಂಡ ಕಾರ್ಮಿಕರಿಗೆ ಲೆಕ್ಕವಿಲ್ಲ. ಈ ಭ್ರಷ್ಟರ ಯಜ್ಞದಲ್ಲಿ ಆಗಾಗ್ಗೆ ಕಾರ್ಮಿಕರ ಪ್ರಾಣಗಳೂ ಆಹುತಿಯಾಗುತ್ತಿರುತ್ತವೆ. ಕಾರ್ಮಿಕರ ಕೈ ಕಾಲು ಹಾಗೂ ಪ್ರಾಣಗಳಿಗೆ ಇಲ್ಲಿ ಯಾವ ಬೆಲೆಯೂ ಇಲ್ಲ.

ಹೀಗೆ ತಮ್ಮ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಮರೆಮಾಚಿ, ವಿದ್ಯುತ್ ಉತ್ಪಾದನೆಯ ಕೊರತೆಗೆ ಸದಾ ಬೇರೊಂದು ಕಾರಣಗಳತ್ತ ಬೊಟ್ಟು ಮಾಡುವುದು ಅಧಿಕಾರಿಗಳ ಜನ್ಮಸಿದ್ಧ ಹವ್ಯಾಸ! ಇತ್ತೀಚಿನ ಒಂದು ಉದಾಹರಣೆ ನೋಡೋಣ.

ಆಂಧ್ರದಲ್ಲಿ ತೆಲಂಗಾಣ ರಾಜ್ಯ ಹೋರಾಟ ಸ್ಫೋಟಗೊಂಡಿದ್ದು ನಮಗೆಲ್ಲಾ ಗೊತ್ತು, ಆ ಸಂದರ್ಭದಲ್ಲಿ ಆಂಧ್ರದ ಸಿಂಗರೇಣಿ ಗಣಿಯಿಂದ ಸರಬರಾಜಿಗೆ ಒಂದಷ್ಟು ವ್ಯತ್ಯಯ ಉಂಟಾಗಿರಬಹುದು. ಆದರೆ ಇಲ್ಲಿನ ಅಧಿಕಾರಿಗಳು ಅದನ್ನೇ ನೆಪವಾಗಿಸಿ ತಮ್ಮ ದುರಾಡಳಿತವನ್ನು ಸಮರ್ಥಿಸಿಕೊಂಡಿದ್ದಾರೆ. ಆದರೆ ವಾಸ್ತವದಲ್ಲಿ ಸಿಂಗರೇಣಿ ಗಣಿ ಮಾತ್ರವಲ್ಲದೆ ಬೇರೆ ನಾಲ್ಕೈದು ಕಂಪನಿಗಳಿಂದಲೂ ಕಲ್ಲಿದ್ದಲು ಸರಬರಾಜಾಗುತ್ತಿದ್ದು ಈ ಅವಧಿಯಲ್ಲಿ ಒಪ್ಪಂದಕ್ಕಿಂತಲೂ ಹೆಚ್ಚಿನ ಪ್ರಮಾಣದ ಕಲ್ಲಿದ್ದಲು ಸರಬರಾಜಾಗಿರುವುದನ್ನು ಕಂಪನಿಯ ದಾಖಲಾತಿ ಪುಸ್ತಕಗಳೇ ಹೇಳುತ್ತವೆ.

ವಾಸ್ತವ ಹೀಗಿದ್ದರೂ ಅಧಿಕಾರಿಗಳು ತಮ್ಮ ವೈಫಲ್ಯಗಳನ್ನು ಮುಚ್ಚಿಟ್ಟು ತೆಲಂಗಾಣ ಸಮಸ್ಯೆಯಿಂದಾಗಿ ಉತ್ಪಾದನೆ ಕುಸಿತಗೊಂಡಿತೆಂಬ ನಾಚಿಕೆಗೆಟ್ಟ ಹೇಳಿಕೆ ಕೊಡುತ್ತಾರೆ. ಇಲ್ಲವೇ ಕೆಲವು ಸಂದರ್ಭಗಳಲ್ಲಿ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವಲ್ಲಿ ಆಸಕ್ತಿ ವಹಿಸುತ್ತಾರೆ. ಬೇಸಿಗೆಯಲ್ಲಿ ನೀರು ಸರಬರಾಜು ವ್ಯವಸ್ಥೆ ಮಾಡಿಕೊಳ್ಳದ ಅಧಿಕಾರಿಗಳಿಂದ ಮತ್ತೇನನ್ನು ನಿರೀಕ್ಷಿಸಲು ಸಾಧ್ಯ?

ನಾಡಿನ ಅಭಿವೃದ್ಧಿಗೆ ಶಕ್ತಿ ಕೊಡಬೇಕಿದ್ದ ಶಕ್ತಿನಗರ ದುರಾಡಳಿತ, ಸ್ವಾರ್ಥಪರರ ಕೈಗೆ ಸಿಲುಕಿದೆ. ಪರಿಣಾಮವಾಗಿ ರಾಜ್ಯ ಪದೇಪದೇ ಕತ್ತಲೆಯಲ್ಲಿ ಮುಳುಗುವಂತಾಗಿದೆ. ಸರ್ಕಾರ ಈ ದುಷ್ಟಕೂಟವನ್ನು ತಹಬಂದಿಗೆ ತರುವತ್ತ ಗಮನಹರಿಸುತ್ತದೆ ಎಂದು ನಾವು ನಂಬಬಹುದೆ?

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಕಲ್ಲಿದ್ದಲು=ಕಲ್ಲು? ಇದ್ದಿಲು!?

ಕಲ್ಲಿದ್ದಲು ಎಂಬ ಪದದ ಅರ್ಥವನ್ನು ಹೀಗೇಕೆ ವಿರೂಪ ಮಾಡುತ್ತೀರಿ ಎಂದು ನೀವು ಆಕ್ಷೇಪಿಸುವಂತಿಲ್ಲ. ಈ ಕಳಪೆ ಕಲ್ಲಿದ್ದಲು ದಂಧೆಯಲ್ಲಿ ತೊಡಗಿರುವ ಅಧಿಕಾರಿಗಳು ಇಂಥಾ ಸ್ಥಿತಿ ನಿರ್ಮಿಸಿದ್ದಾರೆ.

ಇದು ಎಷ್ಟು ರಾಜಾರೋಷವಾಗಿ ನಡೆಯುತ್ತಿದೆಯೆಂದರೆ, ಕಲ್ಲಿದ್ದಲು ದಾಸ್ತಾನು ಮಾಡುವ ಯಾರ್ಡ್ ಕಡೆ ಒಮ್ಮೆ ಕಣ್ಣುಹಾಯಿಸಿದರೂ ಸಾಕು. ಅಲ್ಲಿ ಕಲ್ಲಿದ್ದಲಿನ ರಾಶಿಯ ಜೊತೆ ಕಲ್ಲುಗಳ ರಾಶಿಯೂ ಕಂಡುಬರುತ್ತದೆ. ಈ ಕಲ್ಲುಗಳ ರಾಶಿ ಎಲ್ಲಿಂದ ಬಂತು ಅಂತ ಹೆಚ್ಚು ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ, ಅಲ್ಲೇ ಅಕ್ಕಪಕ್ಕದಲ್ಲಿ ಬೆವರು ಹರಿಸುತ್ತಾ ಕಲ್ಲಿದ್ದಲು ಸಾಗಿಸುತ್ತಿರುವ ಕಾರ್ಮಿಕರನ್ನು ಪ್ರಶ್ನಿಸಿದರೆ ಅದು ಕಲ್ಲಿದ್ದಲ ರಾಶಿಯಿಂದ ಬೇರ್ಪಡಿಸಿದ ಕಲ್ಲುಗಳ ರಾಶಿಯೆಂಬ ಉತ್ತರ ಸಿಗುತ್ತದೆ. ಇದೇನಿದು? ಕಲ್ಲಿದ್ದಲಿನಲ್ಲಿ ಕಲ್ಲುಗುಂಡುಗಳು ಎಂದು ಆಶ್ಚರ್ಯಪಡುವಂತಿಲ್ಲ, ಆರ್‌ಟಿಪಿಎಸ್‌ನಲ್ಲಿ ನಡೆಯುತ್ತಿರುವ ದಂಧೆಯೇ ಅಂಥಾದ್ದು. ದುಬಾರಿ ಹಣ ತೆತ್ತು ಕಲ್ಲುಗುಂಡು, ಧೂಳು, ಕಸ ಮಿಶ್ರಿತವಾಗಿರುವ ಕಳಪೆ ಗುಣಮಟ್ಟದ ಕಲ್ಲಿದ್ದಲನ್ನು ತರಿಸಲಾಗುತ್ತಿದೆ.

ಈ ದಂಧೆಯಿಂದ ಕೇವಲ ಹಣಕಾಸು ನಷ್ಟವಾಗುವುದು ಮಾತ್ರವಲ್ಲ; ಕಲ್ಲುಗುಂಡು ಮಿಶ್ರಿತ ಕಳಪೆ ಕಲ್ಲಿದ್ದಲನ್ನು ವಿದ್ಯುತ್ ಸ್ಥಾವರದೊಳಕ್ಕೆ ಸುರಿಯುವುದರಿಂದಾಗಿ ಪದೇಪದೇ ಘಟಕಗಳು ಕೆಟ್ಟುನಿಲ್ಲಲು ಕಾರಣವಾಗುತ್ತಿದೆ. ದೀರ್ಘಾವಧಿಯಲ್ಲಿ ಘಟಕದ ಸಾಮರ್ಥ್ಯವೇ ಕುಂಠಿತಗೊಳ್ಳುತ್ತದೆಯೆಂದು ತಾಂತ್ರಿಕ ನಿಪುಣರ ಅಭಿಪ್ರಾಯ. ಆದರೆ ಅಲ್ಪಾವಧಿಯಲ್ಲೇ ತಮ್ಮ ಖಾಸಗಿ ತಿಜೋರಿ ಭರ್ತಿಯಾಗುತ್ತದೆಂಬುದು ಭ್ರಷ್ಟ ಅಧಿಕಾರಿಗಳ ಅಭಿಪ್ರಾಯ.

ಆಯಿಲ್ ಮಾಫಿಯಾ!

ಕೆಲವು ಅಧಿಕಾರಿಗಳ ಕುಮ್ಮಕ್ಕಿನೊಂದಿಗೆ ತೈಲ ಕದಿಯುವ ಜಾಲ ವ್ಯಾಪಕ ಅಕ್ರಮದಲ್ಲಿ ತೊಡಗಿದೆಯೆಂಬುದು ಇಲ್ಲಿ ಓಪನ್ ಸೀಕ್ರೆಟ್. ತೀರಾ ಇತ್ತೀಚೆಗೆ ಕೇಂದ್ರ ಕೈಗಾರಿಕಾ ಭದ್ರತಾ ಪಡೆಯ ತನಿಖೆ ಈ ಮಾಫಿಯಾದ ಅಸ್ತಿತ್ವವನ್ನು ಅಧಿಕೃತವಾಗಿ ದೃಢಪಡಿಸಿದೆ.

ಈ ಡೀಸೆಲ್ ಮಾಫಿಯಾದ ಹಿಂದೆ ಬಿದ್ದವರು ಸಿಐಎಸ್ಎಫ್ ಅಧಿಕಾರಿ ದಯಾನಂದಸಿಂಗ್ ಮತ್ತು ಅವರ ತಂಡ. ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್‌ನ ಒಂದು ಟ್ಯಾಂಕರ್‌ನಿಂದ ಡೀಸೆಲ್‌ಅನ್ನು ಕಂಪನಿಯ ಡೀಸೆಲ್ ದಾಸ್ತಾನು ಬಂಕ್‌ಗಳಿಗೆ ಅನ್‌ಲೋಡ್ ಮಾಡಿದನಂತರ ನಿಗದಿತ ಪ್ರಮಾಣದ ಡೀಸೆಲ್ ಬಂಕರ್‌ನಲ್ಲಿ ಭರ್ತಿಯಾಗಿಲ್ಲದಿರುವುದನ್ನು ಕಂಡ ಸಿಐಎಸ್ಎಫ್ ತಂಡ ಸೂಕ್ಷ್ಮವಾಗಿ ಪರಿಶೀಲಿಸಲಾಗಿ ಆಘಾತ ಕಾದಿತ್ತು. ಕನಿಷ್ಠ 2000 ಲೀಟರ್‌ನಷ್ಟು ಡೀಸೆಲ್ ಟ್ಯಾಂಕರ್ ಒಳಗಡೆಯೇ ಉಳಿದುಬಿಡುವಂತೆ ರಂಧ್ರ ಕೊರೆದು ಮತ್ತೊಂದು ಕಳ್ಳ ಟ್ಯಾಂಕನ್ನು ಅಳವಡಿಸಲಾಗಿತ್ತು.

ದಯಾನಂದ ಸಿಂಗ್ ತನಿಖೆ ಆರಂಭಿಸುತ್ತಿದ್ದಂತೆ ಜಾಗ ಖಾಲಿ ಮಾಡಿದ ಟ್ಯಾಂಕರ್‌ನ ಡ್ರೈವರ್ ಇನ್ನೂ ಪತ್ತೆ ಆಗಿಲ್ಲ. ಈ ದಂಧೆಯಲ್ಲಿ ಒಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರ್ ಮತ್ತು ಕೆಲ ಅಧಿಕಾರಿಗಳು ಭಾಗಿಯಾಗಿದ್ದಾರೆಂಬ ತೀವ್ರ ಗುಮಾನಿಯಿದೆ. ಡ್ರೈವರ್ ಬಾಯಿಬಿಟ್ಟರೆ ತೈಲದಂಧೆಯಲ್ಲಿ ಯಾರೆಲ್ಲ ಭಾಗಿಯಾಗಿದ್ದಾರೆ ಎಂಬುದು ಹೊರಬರಲಿದೆ.

ಜಿಲ್ಲಾ ಎಸ್‌ಪಿ ಟಿ.ಆರ್.ಸುರೇಶ್ ತೈಲ ಮಾಫಿಯಾದ ಬಗ್ಗೆ ಈಗಾಗಲೇ ಎಕ್ಸಿಕ್ಯೂಟಿವ್ ಡೈರೆಕ್ಟರ್ ನಾಗರಾಜ್‌ರನ್ನು ಪ್ರಶ್ನೆಗೊಳಪಡಿಸಿದ್ದಾರೆ. ಸದ್ಯದಲ್ಲೇ ಭಾರತ್ ಪೆಟ್ರೋಲಿಯಂ ಕಂಪನಿಯ ಅಧಿಕಾರಿಗಳು ರಾಯಚೂರು ಥರ್ಮಲ್ ಸ್ಥಾವರಕ್ಕೆ ಭೇಟಿ ನೀಡಲಿದ್ದಾರೆ. ತನಿಖೆ ಯಾವ ದಿಕ್ಕಿಗೆ ಸಾಗುತ್ತದೆಯೆಂಬುದನ್ನು ದೇವರೇ ಬಲ್ಲ.

2011ರ ಜುಲೈನಿಂದ ಸೆಪ್ಟೆಂಬರ್‌ವರೆಗೆ ಕಂಪನಿ ಮಾಡಿಕೊಂಡಿದ್ದ ಸರಬರಾಜು ಒಪ್ಪಂದಕ್ಕಿಂತ ಅಧಿಕ ಪ್ರಮಾಣದ ಕಲ್ಲಿದ್ದಲು ಸರಬರಾಜಾಗಿರುವುದನ್ನು ಈ ಪಟ್ಟಿಯಲ್ಲಿ ಕಾಣಬಹುದು. (ಪ್ರಮಾಣ - ಟನ್‌ಗಳಲ್ಲಿ)

ಕಂಪನಿ	ಜುಲೈ & ಆಗಸ್ಟ್ ಒಪ್ಪಂದ	ಜುಲೈ ಸರಬರಾಜು	ಆಗಸ್ಟ್ ಸರಬರಾಜು	ಸೆಪ್ಟೆಂಬರ್ ಒಪ್ಪಂದ	ಸೆಪ್ಟೆಂಬರ್ ಸರಬರಾಜು
ವೆಸ್ಟರ್ನ್ ಕೋಲ್ ಕಂಪನಿ	1,81,500	2,84,930	2,97,014	1,75,450	2,18,240
ಮಹಾನದಿ ಕೋಲ್‌ಫೀಲ್ಡ್ಸ್	1.57 ಲಕ್ಷ	99,095	90,681	1.16 ಲಕ್ಷ	64,384
ಸಿಂಗರೇಣಿ ಗಣಿಯಿಂದ ಒಟ್ಟು					3,24,543
ವಿದೇಶಿ ಕಂಪನಿ	50,000	45,063	84,563	72,500	99,060



ಪಿ.ಎಸ್.ಐ.ಮಲ್ಲಿಕಾರ್ಜುನ ಆಸ್ಪತ್ರೆಯಲ್ಲಿ, ಬಂಡೆ ಪತ್ನಿ ಮಧು ಮಾಧ್ಯಮಗಳ ಮುಂದೆ ಗೋಳು ತೋಡಿಕೊಳ್ಳುತ್ತಿರುವುದು, ಗುಲ್ಬರ್ಗಾದಲ್ಲಿ ಸೇರಿದ್ದ ಜನಸ್ತೋಮ

ಬಂಡೆ ಸಾವು: ಭುಗಿಲೆದ್ದ ಜನ



ಶೂಟರ್ ಮುನ್ನಾನೊಂದಿಗೆ ಗುಂಡಿನ ಚಕಮಕಿಯಲ್ಲಿ ...ವ್ರವಾಗಿ ಗಾಯಗೊಂಡಿದ್ದ ಗುಲ್ಬರ್ಗಾ ಸ್ಟೇಷನ್ ಬಜಾರ ...ಣೆಯ ರೌಡಿ ನಿಗ್ರಹ ದಳದ ಉಸ್ತುವಾರಿಯನ್ನು ...ಹಿಡಿಕೊಳ್ಳುತ್ತಿದ್ದ ಪಿ.ಎಸ್.ಐ. ಮಲ್ಲಿಕಾರ್ಜುನ ಬಂಡೆ ...ನಿಧನೀಗಿದ್ದಾರೆ. ಹೈದ್ರಾಬಾದ್‌ನ ಯಶೋದ ಆಸ್ಪತ್ರೆಯಲ್ಲಿ ...ನಾಲ್ಕು ದಿನಗಳವರೆಗೆ ನೀಡಿದ ಚಿಕಿತ್ಸೆ ಫಲಕಾರಿ ...ಗಲಿಲ್ಲ. ಅವರ ಕುಟುಂಬಕ್ಕೆ ಹೇಗೋ ಸಮಾಜದ ...ಗಳೂ ಇದರಿಂದ ತೀವ್ರ ಆಕ್ರೋಶಗೊಂಡಿದ್ದಾರೆ.

... ಬಂಡೆ ಸಾವಿನಿಂದ ಗುಲ್ಬರ್ಗಾ, ಯಾದಗಿರಿ ...ಲ್ಲೆಗಳ ಊರುಗಳಲ್ಲಿ ತ್ವೇಷಮಯವಾದ ವಾತಾವರಣ ...ಟಾಗಿದೆ. ಗುಲ್ಬರ್ಗಾವಂತೂ (ಜ.15) ಯಾವ ...ಘಟನೆಯೂ ಕರೆಕೊಡದಿದ್ದರೂ ಅಘೋಷಿತ ...ದ್ ಆಚರಿಸು ವಂತಾಗಿತ್ತು. ಸದಾ ಜನರಿಂದ ...ಗುಡುತ್ತಿದ್ದ ಸೂಪರ್ ಮಾರ್ಕೆಟ್ ಏರಿಯಾ ...ಗಳಿಲ್ಲದೆ ಬಿಕೋ ಎನ್ನುತ್ತಿತ್ತು.

... ಆದರೆ ಚಡ್ಡಿ ತೊಟ್ಟುಕೊಂಡ ಬಿ.ಜೆ.ಪಿಗಳು ...ತ್ರ ಯಾರದೋ ಮನೆಗೆ ಬೆಂಕಿ ಬಿದ್ದಾಗ ತಾವು ...ನ್ನುವ ಪದಾರ್ಥವನ್ನು ಸುಟ್ಟುಕೊಂಡರು ಎಂಬಂತೆ ...ಮ್ಮ ತೀಟೆ ತೀರಿಸಿಕೊಂಡರು. ಇಷ್ಟಕ್ಕೂ ಮಲ್ಲಿಕಾರ್ಜುನ ...ಡೆ ಯಾವ ಪಕ್ಷ, ವ್ಯಕ್ತಿಯನ್ನು ಆಶ್ರಯಿಸಿ ಬೆಳೆದವರಲ್ಲ. ...ಲ್ಯದಿಂದಲೂ ತಾನು ಜೀವನದಲ್ಲಿ ಏನಾದರೊಂದು ...ಸದನ್ನು ಸಾಧಿಸಬೇಕು ಎಂಬ ಉಮೇದಿನ ಮನುಷ್ಯ. ...ಲೀಸ್ ಪೇದೆಯಾಗಿ ಇಲಾಖೆ ಸೇರಿ ಪಿ.ಎಸ್.ಐ.ವರೆಗೂ ...ತ್ತಿ ಪಡೆದಿದ್ದರಿಂದ ಸಹಜವಾಗಿ ಎಲ್ಲರೊಂದಿಗೂ ...ಯುತ್ತಿದ್ದ ವ್ಯಕ್ತಿಯಾಗಿದ್ದರು. ಸಿನಿಮೀಯ ಮಾದರಿಯಲ್ಲಿ ...ಮೈಮೇಲೆ ಹಾಕಿಕೊಂಡ ಪೊಲೀಸ್ ವಸ್ತ್ರದ ಮೂಲಕ ...ನಾದರೊಂದು ಸಾಧನೆ ಮಾಡಬೇಕೆಂಬ ಹಂಬಲ ಉಳ್ಳ ...ಕ್ತಿಯಾಗಿದ್ದರು ಎಂಬುದಂತೂ ಸತ್ಯ. ಕೊಂಚ ...ಂಗೋಪಿಯಾಗಿದ್ದರೂ ಸ್ನೇಹಜೀವಿ ಎಂಬ ಮಾತು ...ರೂ ಅಲ್ಲಗಳೆಯುವಂತಿಲ್ಲ.

ಪಾತಕಿ ಮುನ್ನಾ

... ಮೂರು ತಿಂಗಳುಗಳ ಹಿಂದೆ ಗುಲ್ಬರ್ಗಾದ ಸೇಡಂ ...ಡ್ ಪ್ರದೇಶದಲ್ಲಿರುವ ಮುತ್ತೂಟ್ ಫಿನ್‌ಕಾರ್ಪ್ ...ಂಕ್‌ನಲ್ಲಿ ದರೋಡೆಯಲ್ಲಿ ಮುನ್ನಾ ದರ್ಬಾರ್ ...ಯಾಗಿದ್ದ. ಈ ಹಿನ್ನೆಲೆಯಲ್ಲಿ ಆತನನ್ನು ವಶಕ್ಕೆ ...ಡುಕೊಳ್ಳಲು ಬಂಡೆ ನೇತೃತ್ವದಲ್ಲಿ ಅವರ ತಂಡ ಮುನ್ನಾನ ...ಡೆಯ ಮೇಲೆ ದಾಳಿ ನಡೆಸಿತ್ತು. ಮುಂಬೈನ ಭೂಗತ [illegible] ...ಕಾರಿ ಅಂತ ಬೆಳಕಿಗೆ ಬಂದುದರಿಂದ ಪೊಲೀಸ್ ಇಲಾಖೆ ಬೆಸ್ತು ಬಿದ್ದಿತ್ತು. ಭಟ್ಕಳ ಮೂಲದ ಇಕ್ಬಾಲ್ ಮಲಬಾರಿ ಮತ್ತು ರಶೀದ್ ಮಲಬಾರಿ ಜೊತೆ ನಿಕಟ ಸಂಪರ್ಕವಿದ್ದು ಅವರ ಬಲಗೈ ಬಂಟನಾಗಿ ಕೆಲಸ ಮಾಡುತ್ತಿದ್ದ ಸಂಗತಿಗಳು ಪೊಲೀಸರನ್ನು ತಲ್ಲಣಗೊಳಿಸಿದ್ದವು.

1993 ರಲ್ಲಿ ನಡೆದ ಮುಂಬೈ ಸರಣಿ ಬಾಂಬ್ ಸ್ಫೋಟ ಪ್ರಕರಣದಲ್ಲಿ ಮುಂಬೈ ಪೊಲೀಸರು ಶೋಧ ಆರಂಭಿಸಿದ ನಂತರ ಮುಂಬೈ ಬಿಟ್ಟ ಮುನ್ನಾ ಗುಲ್ಬರ್ಗಾದ ರೋಜಾದ ನಿವಾಸಿಯಾಗಿ ಆಟೋ ಡ್ರೈವ್ ಮಾಡುತ್ತ ತನ್ನ ಬದುಕು ಕಟ್ಟಿಕೊಳ್ಳುವಂತೆ ಕಾಣಿಸುತ್ತಿದ್ದ. ಆದರೆ 2002 ರಲ್ಲಿ ಗುಲ್ಬರ್ಗಾದಲ್ಲಿ ಸಂತೋಷ ಚಿತ್ರಮಂದಿರದ ಸಂಕೀರ್ಣದಲ್ಲಿದ್ದ ಮಿನಿ ಹೋಟೆಲ್ ಮಾಲೀಕನ ಕೊಲೆಯಲ್ಲಿ, ರಾಯಚೂರಿನ ಬಿಎಸ್ಪಿ ನಾಯಕ ಖಲೀಲ್ ಕೊಲೆಯಲ್ಲಿ ಹಾಗೂ ಕೆಲವು ಸುಪಾರಿ ಕೊಲೆಗಳಲ್ಲಿ ಮುನ್ನಾ ಭಾಗಿಯಾಗಿದ್ದ. ಆತನ ವಿರುದ್ಧ ಒಟ್ಟು 13 ಕೇಸುಗಳು ದಾಖಲೆಯಾಗಿದ್ದವು.

ಭೂಗತ ಪಾತಕಿಯಾಗಿದ್ದ ಮುನ್ನಾ ಗುಲ್ಬರ್ಗಾ ನಗರದ ರೋಜಾ ಪ್ರದೇಶದ ಹುಸೇನಿ ಅಲಂ ಮನೆಯಲ್ಲಿ ಅಡಗಿ ಕುಳಿತಿರುವ ಸಂಗತಿ ಗೊತ್ತಾಗುತ್ತಿದ್ದಂತೆಯೆ ಸ್ಟೇಷನ್ ಬಜಾರ್ ಪೊಲೀಸ್ ಠಾಣೆಯ ಎಎಸ್‌ಐ ಎಂ.ಎನ್.ಮುರಳಿ, ಉದ್ದಂಡಪ್ಪ ಮತ್ತು ಮಲ್ಲಿಕಾರ್ಜುನ ಬಂಡೆ ಸೇರಿಕೊಂಡು ದಾಳಿ ನಡೆಸಿದ್ದಾರೆ. ಪೊಲೀಸರ ಹಠಾತ್ ದಾಳಿಯಿಂದ ಕ್ರೋಧಗೊಂಡ ಮುನ್ನಾ ಮೊದಮೊದಲು ಅವರಿಗೆ ಈ ಜಾಗದಿಂದ ಕದಲುವಂತೆ ಗಾಳಿಯಲ್ಲಿ ಗುಂಡು ಹಾರಿಸಿದ್ದಾನೆ. ತನ್ನ ಮನೆಯ ಮಾಳಿಗೆಯಿಂದ ಮತ್ತೊಂದು ಮಗದೊಂದು ಮಾಳಿಗೆಗೆ ಜಿಗಿಯುತ್ತ ಪೊಲೀಸರಿಗೆ ಚಳ್ಳೆಹಣ್ಣು ತಿನಿಸಿದ್ದಾನೆ.



ಎಎಸ್‌ಐ ಉದ್ದಂಡಪ್ಪ


ಇದೊಂದು ರೀತಿಯ ಸಿನಿಮೀಯ ಘಟನೆಯಂತಿತ್ತು. ಏನೇ ಆದರೂ ಆತನನ್ನು ಹಿಡಿದು ವಿಚಾರಣೆಗೆ ಗುರಿಪಡಿಸಬೇಕೆಂಬ ಉಮೇದಿನಲ್ಲಿ ಪೊಲೀಸರು ಆತನನ್ನು ಹಿಗ್ಗಾಮುಗ್ಗಾ ಬೈಯುತ್ತ ಹತ್ತಿರ ಹೋಗಿದ್ದಾರೆ. ಇದರಿಂದ ಮತ್ತಷ್ಟೂ ಗಾಬರಿಗೊಂಡ ಮುನ್ನಾ ತನ್ನಲ್ಲಿದ್ದ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ ಪಿ.ಎಸ್.ಐ. ಮುರುಳಿಯೊಂದಿಗೆ ಗುದ್ದಾಡಿದ್ದಾನೆ. ಉದ್ದಂಡಪ್ಪ ಎಂಬ ಮತ್ತೊಬ್ಬ ಪೊಲೀಸ್ ಸಿಬ್ಬಂದಿ ತನ್ನ ಹತ್ತಿರ ಸುಳಿಯದಂತೆ ತನ್ನ ಪಿಸ್ತೂಲ್ ಮೂಲಕ ಗುಂಡು ಹಾರಿಸಿದ್ದಾನೆ. ಇದನ್ನೆಲ್ಲ ನೋಡುತ್ತ ಸುತ್ತಮುತ್ತಲ ಜನಗಳಿಗೆ "ದೂರ ಸರಿಯಿರಿ" ಎಂದು ಹೇಳುತ್ತಿದ್ದ, ಮುನ್ನಾನನ್ನು ಹಿಡಿದೇ ತೀರಬೇಕೆಂದು ಹೊರಟಿದ್ದ ಮಲ್ಲಿಕಾರ್ಜುನ ಬಂಡೆ ಮುನ್ನಾನ ಆಟಾಟೋಪ ಗಮನಿಸಿ ಆತನತ್ತ ಯಾವ ಹೆದರಿಕೆ ಇಲ್ಲದೆ ಮುನ್ನುಗ್ಗಿ ಹೋಗಿದ್ದಾರೆ. ಇದು ತನ್ನ ಅಸ್ತಿತ್ವದ ಪ್ರಶ್ನೆಯೆಂದು ಮನಗಂಡ ಮುನ್ನಾ ಮಾತ್ರ ಎಸ್.ಐ. ಮುರುಳಿಯ ಸೊಂಟಕ್ಕೆ ಕೈಹಾಕಿ ಆತನ ಪಿಸ್ತೂಲನ್ನೆ ಉಪಯೋಗಿಸಿ ತನ್ನತ್ತ ನುಗ್ಗಿ ಬರುತ್ತಿದ್ದ ಮಲ್ಲಿಕಾರ್ಜುನ ಬಂಡೆಯ ತಲೆಗೆ ನೇರ ಗುರಿಯಿಟ್ಟು ಗುಂಡುಹೊಡೆದಿದ್ದಾನೆ. ಆನಂತರ ಇನ್ನೊಂದು ಗುಂಡನ್ನು ಉದ್ದಂಡಪ್ಪನ ಕಡೆಗೆ ಹೊರಳಿಸಿದ್ದಾನೆ. ಆಗ ಮಾತ್ರವೇ ಪೊಲೀಸರು ಮುನ್ನಾನಿಗೆ ಗುಂಡು ಹಾರಿಸಿದ್ದಾರೆ.

ಸುಮಾರು ಒಂದುವರೆಗಂಟೆಯವರೆಗೂ ರೋಜಾ ಪ್ರದೇಶದಲ್ಲಿ ನಡೆದ ಈ ಕಾರ್ಯಾಚರಣೆ ಅಲ್ಲಿಯ ನಿವಾಸಿಗಳನ್ನು ಬೆಕ್ಕಸಬೆರಗಾಗಿಸಿತ್ತು. ಪೊಲೀಸ್ ಹಾಗೂ ಮುನ್ನಾನ ಗುಂಡಿನ ಕಾಳಗವನ್ನು ಕಣ್ಣಾರೆ ಕಂಡ ಹೆಂಗಸರು ಮಕ್ಕಳು ಮುದುಕರು ಬೆಚ್ಚಿ ಬಿದ್ದಿದ್ದರು. ಆಗ ಹೆಚ್ಚುವರಿ ಎಸ್ಪಿ ಕಾಶೀನಾಥ ತಳಕೇರಿ, ಎ.ಎಸ್.ಪಿ. ಸಂತೋಷ ಬಾಬು, ಡಿ.ವೈ.ಎಸ್ಪಿ ಉದಯಕುಮಾರ ಬೇವಿನಗಿಡದ, ಬಿ.ಎಸ್. ಸವಿಶಂಕರನಾಯಕ, ಕುಮಾರ ಇನ್ಸ್‌ಪೆಕ್ಟರ್‌ಗಳು ರೋಜಾ ಪ್ರದೇಶದಲ್ಲಿ ಭಾರಿ ಬಂದೋಬಸ್ತ್ ಒದಗಿಸದೆ ಹೋಗಿದ್ದರೆ ಮತ್ತಷ್ಟು ಅವಘಡಗಳು ಘಟಿಸುವ ಸಾಧ್ಯತೆ ಇತ್ತು.

ಶಹಾಪುರದಲ್ಲಿ ಗ್ಯಾಂಗ್

ಕೆ.ಕೆ (ಕಾಲಾ ಕುತ್ತಾ) ಗ್ಯಾಂಗ್ ಎಂಬ ಕೊಲೆಗಡುಕರ, ದರೋಡೆಕೋರರ ಗ್ಯಾಂಗ್‌ನ್ನು ಮುನ್ನಾ ಸೇರಿಕೊಂಡಿದ್ದನಾದರೂ ಈ ಗ್ಯಾಂಗ್ ಆರಂಭವಾದುದು ಯಾದಗಿರಿ ಜಿಲ್ಲೆಯ ಶಹಾಪುರದಲ್ಲಿ, ಶಹಾಪುರದಲ್ಲಿ ಈಗಲೂ ಈ ಗ್ಯಾಂಗ್‌ನ ಕೆಲವು ಸದಸ್ಯರು ಸಕ್ರಿಯವಾಗಿ ಸಮಾಜಘಾತುಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಮುನ್ನಾನೊಂದಿಗೂ ಅವರ ಸಂಬಂಧ ಇತ್ತು ಎಂಬ ಬಗ್ಗೆ ಪೊಲೀಸರಿಗೂ ಮಾಹಿತಿ ಇದೆ. ಆದರೆ ಸಮರ್ಪಕವಾದ ಆಧಾರಗಳಿಲ್ಲದೆ ಯಾವುದೇ ವ್ಯಕ್ತಿಯನ್ನು ವಿಚಾರಣೆಗೆ ಒಳಪಡಿಸುವುದು ಹಾಗೂ ಬಂಧಿಸುವುದು ಸಾಧ್ಯವಿಲ್ಲವಾದ್ದರಿಂದ ಈ ವಿಚಿದ್ರಕಾರಿ ಶಕ್ತಿಗಳನ್ನು ಮಟ್ಟ ಹಾಕಲು ಸಾಧ್ಯವಾಗುತ್ತಿಲ್ಲ ಎಂದು ಕೆಲವು ಪೊಲೀಸ್ ಅಧಿಕಾರಿಗಳೆ ಪತ್ರಿಕೆಗೆ ತಿಳಿಸಿದ್ದಾರೆ. ಆದರೂ ಈ ಬಗೆಗೆ ಪೊಲೀಸ್ ಇಲಾಖೆಯ ಮುಖ್ಯಸ್ಥರಿಗೆ ಮಾಹಿತಿ ರವಾನಿಸಿದ್ದೇವೆ ಎಂತಲೂ ಅವರು ಹೇಳುತ್ತಾರೆ.

ಕೆ.ಕೆ. ಗ್ಯಾಂಗ್‌ನ ಶಹಾಪುರ ಮೂಲದ ಫಯಿಮ್ ಖಾದ್ರಿ ಹಾಗೂ ಸ್ನೇಹಿತರು ಇಂಥ ಹಲವಾರು ಚಟುವಟಿಕೆ ಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದರೂ ಆತನನ್ನು ಬಂಧಿಸದೆ ಇರುವುದು ಸಾರ್ವಜನಿಕರು ಪೊಲೀಸ್ ಇಲಾಖೆಯ ವಿರುದ್ಧ ಸಿಡಿದೇಳಲು ಮುಖ್ಯ ಕಾರಣವಾಗಿದೆ. ಆರಂಭದಲ್ಲಿ ಸಮಾಜ ದ್ರೋಹಿ ಕೆಲಸಗಳಲ್ಲಿ ನಿರತವಾಗಿರುವ ಯಾರನ್ನೂ ಪೊಲೀಸ್ ಹದ್ದುಬಸ್ತಿನಲ್ಲಿಡದೆ ಹೋದರೆ ಮುಂದೆ ಅವರೇ ಸಮಾಜ ಕಂಟಕರಾಗುತ್ತಾರೆಂದು ಮಾಜಿ ಸಚಿವ ಎಸ್.ಕೆ.ಕಾಂತಾ ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಶಾರ್ಪ್ ಶೂಟರ್ ಮುನ್ನಾ

ಶಾರ್ಪ್ ಶೂಟರ್ ಮುನ್ನಾನ ಕೊಲೆಗಿಂತ ಕೆಲವೇ ದಿನಗಳ ಹಿಂದೆ ಎಸ್.ಕೆ.ಕಾಂತಾ ಅವರನ್ನೂ ಕೂಡ ಕೆಲವು ಗೂಂಡಾ ವ್ಯಕ್ತಿಗಳು ಅಟಕಾಯಿಸಿ ನಿಂತು ತಗಾದೆ ತೆಗೆದಿದ್ದರು. ಕಾಂತಾ ಅವರ ಜೊತೆಗಿದ್ದ ಕೆಲವರ ಮೇಲೆ ಹಲ್ಲೆಯನ್ನೂ ಮಾಡಿದ್ದರು. ಇವೆಲ್ಲವುಗಳಿಂದ ಆಕ್ರೋಶಗೊಂಡ ಜನತೆ ಸಹಜವಾಗಿ ಐಜಿಪಿ ಮಹ್ಮದ್ ವಜೀರ ಅಹ್ಮದ್ ಮೇಲೆ ಕಿಡಿಕಾರುತ್ತಿದ್ದಾರೆ. ಎಸ್ಪಿ ಅಮಿತ ಸಿಂಗ್ ಮೇಲೆ ಕ್ರೋಧ ವ್ಯಕ್ತಪಡಿಸುತ್ತಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಖಮರುಲ್ ಇಸ್ಲಾಂ ಹಿಂದೊಮ್ಮೆ ಸೂಪರ್ ಮಾರ್ಕೆಟ್‌ನಲ್ಲಿ 'ಹಮ್ ಚೋಟಾ ಪಾಕಿಸ್ತಾನ ಬನೆಂಗಾ' ಎಂದು ಆಡಿದರೆನ್ನುವ ಮಾತುಗಳನ್ನು ಜನ ಮತ್ತೆ ಜನತೆ ನೆನಪಿಸಿಕೊಳ್ಳುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಮಲ್ಲಿಕಾರ್ಜುನ ಬಂಡೆಯಂತಹ ಪ್ರಾಮಾಣಿಕ ಹಾಗೂ ದಕ್ಷ ಪೊಲೀಸ್ ಅಧಿಕಾರಿ ಹತನಾದಾಗ ಜನತೆಯಲ್ಲಿ ಸಹಜವಾಗಿ ಆಕ್ರೋಶ ಭುಗಿಲೆದ್ದಿದೆ. ಈ ಆಕ್ರೋಶವನ್ನೆ ಬಂಡವಾಳ ಮಾಡಿಕೊಳ್ಳಲು ಹೊಂಚುಹಾಕಿಕೊಂಡಿರುವ ಕೆಲವು ಪಕ್ಷಗಳ ಹುನ್ನಾರಗಳನ್ನು ತಪ್ಪಿಸಬೇಕಿದ್ದರೆ ಹಾಗೂ ರೌಡಿ ಗೂಂಡಾಗಳನ್ನು ಹದ್ದುಬಸ್ತಿನಲ್ಲಿಡಬೇಕಾದರೆ ಸರಕಾರ ಕೂಡಲೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಇಲ್ಲದೆ ಹೋದರೆ ಇಂದು ಹುಟ್ಟುತ್ತಿರುವ ಕಿಡಿ ಮುಂದೊಂದು ದಿನ ಧಗಧಗಿಸುವ ಬೆಂಕಿಯಾಗಿ ಸಮಾಜವನ್ನೇ ಬಲಿ ತೆಗೆದುಕೊಳ್ಳುವುದರಲ್ಲಿ ಯಾವುದೇ ಅನುಮಾನವಿಲ್ಲ.


● ವರದಿಗಾರ

ಎಲೈ ಮನುಷ್ಯ, ಮಾನವತ್ವದ ಹಾಡು ಮಾತ್ರ ಹಾಡು: ನಾಮದೇವ ಢಸಾಳ್

ಧಾರಾವಿಯ ಸ್ಲಂ ಹಾಗೂ ಕಾಮಾಟಿಪುರ ನೋಡಬಿದ್ದರೆ ಮುಂಬಯಿಯ ಭೇಟಿ ಅಪೂರ್ಣ ಎನಿಸುವ ಹೊತ್ತಿಗೆ ಆ ಲಿಸ್ಟಿಗೆ ಇನ್ನೂ ಒಂದು ಹೆಸರು ಸೇರ್ಪಡೆಯಾಗಿತ್ತು - ಅದು ಮರಾಠಿ ಕವಿ ನಾಮದೇವ ಢಸಾಳ್. ಬದುಕಿಸುವುದಕ್ಕೂ ಹೋರಾಟವನ್ನೇ ಉಸಿರಾಗಿಸಿಕೊಂಡ ಕವಿ ನಾಮದೇವ್ ಢಸಾಳ್ ಐದು ವರ್ಷ ಕೆಳಗೆ ತಮ್ಮ ಸಮಗ್ರ ಕವನ ಸಂಕಲನದ ಮೂಲಕ ನನಗೆ ಪರಿಚಯವಾದರು. ಅವರ ಕವಿತೆಗಳನ್ನು ಓದುವಾಗ ಎದೆಗೆ ಗುದ್ದಿದ ಅನುಭವ ಹೇಗಾಯಿತೆಂದರೆ ಓದಿದ ಮೇಲೆ ಒಂದಾದಮೇಲೊಂದು ಕವನಗಳನ್ನು ಅನುವಾದಿಸಿದ್ದೆ. ಗೆಳೆಯ ಬಸೂ ಅಡಾಯಿ ಪ್ರಕಾಶನದಿಂದ 'ಉರಿಯ ಪದವು' ಸಂಕಲನವಾಗಿಯೂ ಪ್ರಕಟಿಸಿದರು. ಮೊನ್ನೆ ಭಾನುವಾರ ಕನ್ನಡ ಸಂಘವೊಂದರ ಚಟುವಟಿಕೆಯ ಭಾಗವಾಗಿ ಮುಂಬಯಿಗೆ ಹೋದಾಗ ಢಸಾಳರನ್ನು ಭೇಟಿ ಮಾಡಲು ಸಾಧ್ಯವಾಗದೇ ಇನ್ನೊಮ್ಮೆ ವ್ಯವಸ್ಥಿತವಾಗಿ ಪ್ಲಾನ್ ಮಾಡಿ ಹೋಗಬೇಕು, ಅವರನ್ನು ಭೇಟಿಯಾಗಬೇಕು ಎಂದುಕೊಂಡು ವಾಪಸಾಗುವಾಗಲೇ ದೊಡ್ಡಕರುಳಿನ ಕ್ಯಾನ್ಸರಿನಿಂದ ಅವರು ತೀರಿಕೊಂಡ ಸುದ್ದಿ ಬಂದಿದೆ.

ಮುಂಬಯಿ-ಮರಾಠಿ ಎಂದರೆ ಭಾಷಿಕ ಹಾಗೂ ಪ್ರಾಂತೀಯ ಸಂಸ್ಕೃತಿ-ಹೆಮ್ಮೆಗಳನ್ನೇ ಬಿಂಬಿಸುವ ಸಾಹಿತ್ಯ ಸೃಷ್ಟಿಯಾಗುತ್ತಿದ್ದ ಕಾಲದಲ್ಲಿ ಅದಲ್ಲದೇ ಇನ್ನೂ ಒಂದು ಮುಂಬಯಿ, ಮಹಾರಾಷ್ಟ್ರ ಇದೆ - ಅಲ್ಲಿ ಹಸಿವನ್ನೇ ತಮ್ಮ ಮಗು ಎಂದುಕೊಂಡ ಬಡವರಿದ್ದಾರೆ; ತಲೆಹಿಡುಕರ, ಕಾಮಪಿಪಾಸುಗಳ ಜಾಲದಲ್ಲಿ ಅನಿವಾರ್ಯವಾಗಿ ನರಳುತ್ತಿರುವ ಅಸಹಾಯಕ ವೇಶ್ಯೆಯರು ಮತ್ತು ಹಿಜಡಾಗಳಿದ್ದಾರೆ; ಸ್ಲಮ್ಮಿನಲ್ಲಿ ವಾಸಿಸುವ, ರಸ್ತೆ ಬದಿ ಚರಂಡಿಗಳಲ್ಲಿ ಬೀಡುಬಿಟ್ಟ ಲಕ್ಷಗಟ್ಟಲೆ ಜನ ಇದ್ದಾರೆ; ಸ್ವಾತಂತ್ರ್ಯ ಬಂದರೂ, ಸಂವಿಧಾನ ಬರೆಯಲ್ಪಟ್ಟರೂ ಕೋಟ್ಯಂತರ ಜನ ಅತಿ ಹೀನವಾಗಿ, ದೀನವಾಗಿ ಬದುಕುತ್ತಿದ್ದಾರೆ ಎಂದು ಸಾಹಿತ್ಯ ಲೋಕಕ್ಕೆ ಗಟ್ಟಿದನಿಯಲ್ಲಿ ಕೂಗಿ ಹೇಳಿದವರು ನಾಮದೇವ ಢಸಾಳ್. ಹೈಸ್ಕೂಲಿಗಿಂತ ಹೆಚ್ಚು ಶಿಕ್ಷಣ ಪಡೆಯದೇ ಇದ್ದರೂ ಅಂಬೇಡ್ಕರರನ್ನು ವಿಸ್ತೃತವಾಗಿ ಓದಿಕೊಂಡಿದ್ದ ಅವರು, 'ಭಾಷೆಯ ಗುಪ್ತಾಂಗದ ಹುಣ್ಣು ನಾನು' ಎಂದು ಕರೆದುಕೊಳ್ಳುತ್ತಲೇ ಯಾರೂ ಕಣ್ಣೆತ್ತಿ ನೋಡದ ವಸ್ತುಗಳನ್ನೆತ್ತಿಕೊಂಡು, ಆಡು ಭಾಷೆಯಲ್ಲಿ ಕವಿತೆ ರಚಿಸಿದರು. ದಲಿತ ಕೇರಿ, ಕಾಮಾಟಿಪುರ, ಕೊಳಗೇರಿಗಳ ಕಷ್ಟದ ಬದುಕನ್ನು ತಮ್ಮ ಕವಿತೆಗಳಲ್ಲಿ ಇದ್ದ ಹಾಗೆಯೇ ಚಿತ್ರಿಸಿ ತೋರಿಸಿದರು.

ತಮ್ಮ ಮಾತು-ಕವಿತೆಗಳಲ್ಲದೆ ದಲಿತ್ ಪ್ಯಾಂಥರ್ಸ್ ಎಂಬ ಸಂಘಟನೆಯನ್ನು ಗೆಳೆಯರೊಟ್ಟಿಗೆ ಹುಟ್ಟುಹಾಕಿದ ಢಸಾಳ್ ಸಾಹಿತ್ಯದಷ್ಟೇ ಹೋರಾಟವೂ ಸಮಾಜ ಬದಲಾವಣೆಗೆ ಮುಖ್ಯ ಎಂದು ನಂಬಿದ್ದರು. ಮೊದಲಿಗೆ ಸಿಪಿಐ, ನಕ್ಸಲೈಟ್ ಚಳವಳಿಗಳನ್ನು ಬೆಂಬಲಿಸಿದ್ದರು. ನಂತರ ಲೋಹಿಯಾ ಸಮಾಜವಾದಿಗಳನ್ನು ಬೆಂಬಲಿಸಿದ್ದರು. 1972ರಲ್ಲಿ ಜೆ.ವಿ.ಪವಾರ್, ರಾಜಾ ಢಾಳೆ, ಅರ್ಜುನ್ ಡಾಂಗ್ಳೆ ಜೊತೆ ಸೇರಿ ದಲಿತ್ ಪ್ಯಾಂಥರ್ಸ್ ಹುಟ್ಟುಹಾಕಿ





ಮಹಾರಾಷ್ಟ್ರದುದ್ದಕ್ಕೂ ದಲಿತ ಯುವಕ, ಯುವತಿಯರನ್ನು ಸಂಘಟಿಸಿದರು. ಮಹಾರಾಷ್ಟ್ರವಷ್ಟೇ ಅಲ್ಲ, ಇತರ ರಾಜ್ಯಗಳಲ್ಲೂ ದಲಿತ ಸಂಘಟನೆ ಹುಟ್ಟಿಕೊಳ್ಳಲು ಆ ಚಳವಳಿ ಸ್ಫೂರ್ತಿಯಾಯಿತು. ಸಂಘಟನೆಯ ಹೋರಾಟ ಕೆಲವೆಡೆ ಹಿಂಸಾಚಾರಕ್ಕೂ ತಿರುಗಿ ಮೂರು ವರ್ಷಗಳಲ್ಲಿ ಪ್ಯಾಂಥರ್ಸ್ ಮೇಲೆ 360 ಕೇಸುಗಳು ದಾಖಲಾದವು.

ಹೀಗೆ ದಮನಿತ ಸಮುದಾಯದ ಧಮನಿಗಳಲ್ಲಿ ಹೋರಾಟದ ಕಿಚ್ಚು ಹತ್ತಿಸಿ ಆಶಾಭಾವನೆ ಮೂಡಿಸಿದ ದಿನಗಳಲ್ಲೇ ಪ್ಯಾಂಥರ್ಸ್ ತೀವ್ರ ಆಂತರಿಕ ಭಿನ್ನಮತವನ್ನೆದುರಿಸಿತು. ಕೆಲ ನಾಯಕರು ಕಮ್ಯುನಿಸ್ಟ್ ನೀತಿಯತ್ತ ಒಲವು ತೋರಿದರು. ಕೆಲವರು ಅಧಿಕಾರ ಪಡೆವ, ತನ್ಮೂಲಕ ಬದಲಾವಣೆ ಮಾಡುವ ಕನಸು ಹೊತ್ತು ವಿವಿಧ ರಾಜಕೀಯ ಪಕ್ಷಗಳನ್ನು ಸೇರಿದರು. ತಾತ್ವಿಕ, ಸರ್ವಸಮ್ಮತ ನಾಯಕನ ಕೊರತೆ ಕಾಡಿದ ಪರಿಣಾಮ ಪ್ಯಾಂಥರ್ಸ್ ಹೋಳಾಯಿತು. ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಉದಯವಾಯಿತು. ರಾಜಕೀಯ ರಂಗದಲ್ಲಿ ಎಲ್ಲರೂ ಚದುರಿದ ಕಾಯಿಗಳಾದಾಗ ದುರ್ಬಲಗೊಂಡ ರಿಪಬ್ಲಿಕನ್ ಪಕ್ಷವನ್ನು ಢಸಾಳ್ ಮುನ್ನಡೆಸಿದರು. ಪ್ಯಾಂಥರ್ಸ್ ಕೂಡ ಅದರ ಒಂದು ಭಾಗವಾಗಿ ಉಳಿಯಿತು.

ತುರ್ತುಪರಿಸ್ಥಿತಿಯ ಕಾಲದಲ್ಲಿ ಎಲ್ಲರೂ ಬೆಚ್ಚಿಬೀಳುವಂತೆ ಢಸಾಳ್ ಇಂದಿರಾ ಗಾಂಧಿಯನ್ನು ಬೆಂಬಲಿಸಿದರು. ಇಂದಿರಾ-ಢಸಾಳ್ ಭೇಟಿಯ ನಂತರ ಪ್ಯಾಂಥರ್ಸ್ ಮೇಲಿನ ಎಲ್ಲ ಕೇಸುಗಳನ್ನೂ ವಾಪಸು ತೆಗೆದುಕೊಳ್ಳಲಾಯಿತು. ಪ್ಯಾಂಥರ್ಸ್ ಹಿನ್ನಡೆಯ ಕಾಲವೇ ಶಿವಸೇನೆಯ ಉಚ್ಛ್ರಾಯದ ಕಾಲವೂ ಆಯಿತು ಎಂಬುದನ್ನು ಗಮನಿಸಬೇಕು. ಢಸಾಳ್ ರಾಜಿ ಅನಿವಾರ್ಯವೆಂದು ಶಿವಸೇನೆ ಜೊತೆ ಹೊಂದಾಣಿಕೆ ಮಾಡಿಕೊಂಡರು. 'ಸಾಮ್ನಾ'ದಲ್ಲಿ ಅಂಕಣ ಬರೆದರು. ಅವರಿಗಿದ್ದ 'ಮಯಸ್ತೇನಿಯಾ ಗ್ರೇವಿಸ್' ಕಾಯಿಲೆಯ ದುಬಾರಿ ಚಿಕಿತ್ಸಾ ವೆಚ್ಚವನ್ನು ಶಿವಸೇನೆ ಭರಿಸಿತು. ಇವೆಲ್ಲ ಅವರ ಸಂಗಾತಿಗಳಲ್ಲಿ ಅಸಮಾಧಾನ ಮೂಡಿಸಿದವು. ಅಂಬೇಡ್ಕರ್, ಕಮ್ಯುನಿಸಂ, ಲೋಹಿಯಾ ಸಮಾಜವಾದಗಳನ್ನೆಲ್ಲ ಅರಗಿಸಿಕೊಂಡ ವ್ಯಕ್ತಿಯ ಬಲಪಂಥೀಯ ಒಲವುಗಳು ವಿವಾದಕ್ಕೆಡೆಮಾಡಿದವು. ಆದರೆ ಪ್ರಶ್ನಿಸುವವರಿಗೆಲ್ಲ ತಾಳ್ಮೆಯಿಂದಲೇ ಉತ್ತರಿಸಿದ ಢಸಾಳ್, 'ದಲಿತರನ್ನು ಚುನಾವಣೆಗಾಗಿ ಮತಬ್ಯಾಂಕ್‌ಗಳೆಂದು ಪರಿಗಣಿಸಿ ಓಲೈಸಲಾಗುತ್ತದೆ. ಚುನಾವಣೆಗಾಗಿ ದಲಿತರನ್ನು ಒಡೆದಷ್ಟು ಮತ್ಯಾವ ಸಮುದಾಯವನ್ನೂ ಛಿದ್ರಗೊಳಿಸಿಲ್ಲ. ಇಡೀ ವ್ಯವಸ್ಥೆ ಭ್ರಷ್ಟರಿಂದ, ಅಪರಾಧಿಗಳಿಂದ ತುಂಬಿಹೋಗಿ

ಢಸಾಳರ ಎರಡು ಅನುವಾದಿತ ಕವಿತೆಗಳು 'ಉರಿಯ ಪದವು' ಸಂಕಲನದಿಂದ

1

ಎಲೈ ಮನುಷ್ಯ, ನೀ ಸಿಡಿಯಬೇಕು

ಎಲೈ ಮನುಷ್ಯ
ನೀ ಸಿಡಿಯಬೇಕು
ಮೊತ್ತಮೊದಲು ನಿನ್ನ ಸ್ಫೋಟಿಸಿಕೋ
ಚಂಡೆಯ ಲಯಕ್ಕೆ ಹೆಜ್ಜೆ ಹಾಕು
ಹಶಿಶ್ ಸೇದು ಗಾಂಜಾ ಸೇದು
ಓಪಿಯಮ್ ಜಗಿ, ಲಾಲ್ ಪಾರಿ ಅಗಿ
ಕಾಸಿಲ್ಲದ ದಿವಾಳಿಯೆ? ಕಂಟ್ರಿ ಸಾರಾಯಿ ಕುಡಿ
ಅಗ್ಗದ ಡಾಲ್ಡಾ ಹೀರು
ಹಗಲೂ ರಾತ್ರಿ ತೂರಾಡು,
ದಿನಪೂರ್ತಿ ಕಂಠಮಟ್ಟ ಕುಡಿದೇ ಇರು
ಎಲ್ಲರಿಗೂ ಶಾಪ ಹಾಕು;
ಅವನಮ್ಮನ ಶೀಲ, ಅವನಕ್ಕನ ಪಾದರ ಹಿಡಿದು
ಎಲ್ಲರ ಬೈಯ್ಯಿ, ಕಪಾಳಕ್ಕೆ ಬಾರಿಸು, ಗುದ್ದು..
ಒಂದು ರಾಮ್‌ಪುರೀ ಚಾಕು ಕೈಗೆ ಸಿಗೋ ಹಾಗಿಟ್ಟುಕೊಳ್ಳಯ್ಯಾ
ಒಂದು ಚೂರಿ, ಕೊಡಲಿ, ಕತ್ತಿ, ಕಬ್ಬಿಣದ ರಾಡು, ಬಿದಿರು, ಹಾಕಿ ಸ್ಟಿಕ್ ಎಲ್ಲ ಇರಲಿ..
ಆಸಿಡ್ ಬಾಟಲು ಒಯ್ಯಿ
ಕ..ಸೆ ಮಿಟುಕಿಸದೆ ಕರುಳು ಬಗೆದು ಹೊರಗೆಳೆ
ಕೊಲೆ ಮಾಡು, ನಿದ್ದೆ ಹೊಡೆಯುತ್ತಿರುವವರ ಕೊಲ್ಲು
ಮನುಷ್ಯರ ಗುಲಾಮರಾಗಿಸು
ಕುಂಡೆ ಮೇಲೆ ಚಾಟಿಯಿಂದ ಬಾರಿಸು
ರಕ್ತ ಸೋರುವ ಬೆನ್ನ ಮೇಲೆ ನಿನ್ನ ಬೇಳೆ ಬೇಯಿಸು
ಸೆರೆಮನೆ ಕಳವು ಮಾಡು, ಬ್ಯಾಂಕ್ ಲೂಟಿ ಹೊಡಿ
ಗಬ್ಬುನಾರುವ ಲೇವಾದೇವಿ ಬಡ್ಡಿಮಕ್ಕಳ ಪಾಯ್ಗಂಡನಾಗು
ಗೊತ್ತೇ ಆಗದಂತೆ ಸೆಂಟರ ಗಂಟಲು ಸೀಳು;
ವಿಷವಿಕ್ಕು ದುಃಸ್ವಪ್ನವಾಗು
ಯಾರ ಅಮ್ಮ ಅಕ್ಕನನ್ನಾದರೂ, ಎಲ್ಲೆಂದರಲ್ಲಿ ಅನುಭವಿಸು
ಮುದುಕಗಿದುಕರೆಂದು ಸುಲಿಗೆ ಮಾಡದೆ ಬಿಟ್ಟೀಯ ಮತ್ತೆ
ಒಬ್ಬೊಬ್ಬರಂತೆ ಎಲ್ಲರ ಕೆಡವಿ
ಸಾರ್ವಜನಿಕ ವೇದಿಕೆ ಮೇಲೆ ಸಾಮೂಹಿಕ ಅತ್ಯಾಚಾರ ಮಾಡು
ಸೂಳೆಗೇರಿ ಬೆಳೆಸು; ತಲೆಹಿಡುಕನ ಲಂಚದಲ್ಲಿ ಬದುಕು;
ಹೆಂಗಸಿನ ಮೂಗು, ಮೊಲೆ ತೊಟ್ಟು ಕೊಯ್ಯಿ
ಬೆತ್ತಲಾಗಿಸಿ ಕತ್ತೆ ಮೇಲೆ ಮೆರವಣಿಗೆ ಮಾಡಿ ಮರ್ಯಾದೆ ಕಳಿ

ಗೊತ್ತಾಯಿತೇನಯ್ಯಾ ಮನುಷ್ಯ?

ರಸ್ತೆ ಬಗೆದು ಹಾಕು, ಸೇತುವೆ ಉಡಾಯಿಸು
ಬೀದಿದೀಪಗಳ ಉರುಳಿಸು
ಪೊಲೀಸ್ ರೈಲ್ವೆ ಸ್ಟೇಷನ್ನುಗಳ ಚಿಂದಿ ಮಾಡು
ಸಾಹಿತ್ಯ ಸಂಘ, ಶಾಲೆ, ಕಾಲೇಜು, ಆಸ್ಪತ್ರೆ, ವಿಮಾನ ನಿಲ್ದಾಣ
ಎಲ್ಲ ನೆಲಸಮವಾಗಲಿ
ಗ್ರೆನೇಡ್ ಬಿಸಾಡು; ಹೈಡ್ರೋಜೆನ್ ಬಾಂಬ್ ಹಾಕು
ಪ್ಲೇಟೋ, ಐನ್‌ಸ್ಟೀನ್, ಆರ್ಕಿಮಿಡಿಸ್, ಸಾಕ್ರೆಟಿಸ್
ಮಾರ್ಕ್ಸ್, ಅಶೋಕ, ಹಿಟ್ಲರ್, ಕಾಮು, ಸಾರ್ತ್ರೆ, ಕಾಫ್ಕಾ
ಬೋದಿಲೇರ್, ರಿಂಬಾಡ್, ಎಜ್ರಾ ಪೌಂಡ್, ಹಾಪ್‌ಕಿನ್ಸ್, ಗಯಟೆ
ದೋಸ್ತೊಯೇವ್ಸ್ಕಿ, ಮಯಕೋವ್‌ಸ್ಕಿ ಮಾಕ್ಸಿಂ ಗಾರ್ಕಿ
ಎಡಿಸನ್, ಮ್ಯಾಡಿಸನ್, ಕಾಳಿದಾಸ.. ತುಕಾರಾಮ, ವ್ಯಾಸ, ಶೇಕ್ಸ್‌ಪಿಯರ್, ಜ್ಞಾನೇಶ್ವರ..
ಚರಂಡಿಯ ಮ್ಯಾನ್‌ಹೋಲ್ ತೆಗೆದು ಈ ಎಲ್ಲರ ದೂಡಿ
ಅವರವರ ಪದಗಳ ಜೊತೆ ಕೊಳೆಸು
ಜೀಸಸ್, ಪೈಗಂಬರ್, ಬುದ್ಧ ಮತ್ತು ವಿಷ್ಣುವಿನ ಅನುಯಾಯಿಗಳ ಗಲ್ಲಿಗೇರಿಸು
ದೇವಸ್ಥಾನ, ಮಸೀದಿ, ಚರ್ಚು, ಶಿಲ್ಪ, ಮ್ಯೂಸಿಯಂ ಕೆಡವು
ಪುರೋಹಿತರ ಗುಂಡಿಟ್ಟು ಕೊಲ್ಲು
ಅವರ ರಕ್ತದಿಂದ ಶಿಲಾಶಾಸನ ಬರೆಸು
ಪ್ರಪಂಚದ ಎಲ್ಲ ಪವಿತ್ರ ಗ್ರಂಥಗಳ ಎಲ್ಲ ಪುಟ ಹರಿದು
ಹೇತವನ ಕುಂಡೆ ಒರೆಸಿಕೊಳ್ಳಲು ಕೊಟ್ಟುಬಿಡಯ್ಯಾ
ಬೇಲಿ ಗೂಟ ಕಿತ್ತು ಅಲ್ಲೇ ಹೇಲು ಉಚ್ಚೆ ಮಾಡಿ ತಿಪ್ಪೆಯೆಬ್ಬಿಸು
ಮುಟ್ಟಿನ ಬಟ್ಟೆ ಬಿಸುಡು, ಕಫ ಉಗುಳು, ಸೀನು, ಸಿಂಬಳ ಸುರಿಸು
ಸಹಿಸಬಾರದ ಗಬ್ಬು ನಾತ ಹರಡಿ ಎಲ್ಲವನ್ನೂ ಮುಗಿಸು
ಮೇಲೆ, ಕೆಳಗೆ, ನಡುವೆ - ಎಲ್ಲ ನರಕಗೊಳಿಸು
ಕೇಳಯ್ಯಾ,
ನೀನು ಮನುಷ್ಯ ರಕ್ತವನ್ನೇ ಕುಡಿ
ಮನುಷ್ಯ ಮಾಂಸವನ್ನೇ ಹುರಿದು ತಿನ್ನು
ಅವರದೇ ನೆಣ ಕರಗಿಸಿ ನೆಕ್ಕು
ಬಂಡೆಗೆ ನಿನ್ನ ಟೀಕಾಕಾರರ ಮೂಳೆ ಕುಟ್ಟಿ ಪುಡಿಪುಡಿ ಮಾಡಿ ತುಪ್ಪ ಹೀರು
ಯಾರೇ ಆಗಲಿ ಅನಾಗರಿಕ, ಕ್ರೂರ, ಸನಾತನವಾಗಬೇಕು ಹಾಗೆ
ವರ್ಗಯುದ್ಧ ಜಾತಿಯುದ್ಧ ಕೋಮುಯುದ್ಧ ಪಕ್ಷಯುದ್ಧ ಧರ್ಮಯುದ್ಧ
ಮಹಾಯುದ್ಧಗಳ ಸಂಘಟಿಸು
ಯಾವನಿಗೂ ಹೆದರದೇ ಸೊಪ್ಪು ಹಾಕದೇ ಅರಾಜಕತೆ ಹುಟ್ಟಿಸು
ಉಳದೇ, ಬೆಳೆ ಬೆಳೆಯದೇ, ಎಲ್ಲ ಉಪವಾಸ ಸಾಯುವಂಥ ಆಂದೋಲನ ಶುರುಮಾಡು
ಅವರವರನ್ನೇ ಕೊಂದುಕೊಳ್ಳಲಿ
ಕಾಯಿಲೆ ಹರಡಲಿ, ಮರಗಳ ಎಲೆ ಉದುರಿ ಬೋಳಾಗಲಿ
ಒಂದೂ ಹಕ್ಕಿ ಹಾಡದಂತೆ ನೋಡಿಕೋ
ನೋವಲ್ಲಿ ಅರಚುತ್ತ ಎಲ್ಲ ಸಾಯಬೇಕು
ಕ್ಯಾನ್ಸರ್ ಗಡ್ಡೆಯಂತೆ ಬೆಳೆಬೆಳೆದು ಜಗತ್ತು ಬಲೂನಿನಂತೆ ಉಬ್ಬಲಿ
ಹೊತ್ತಲ್ಲದ ಹೊತ್ತಲ್ಲಿ ಒಡೆದು ಮುದುಡಿ ಬಿಸಾಡು

ಇಷ್ಟಾದಮೇಲೂ

ಯಾರಾದರೂ ಬದುಕುಳಿದರೆ
ಅವರು ದರೋಡೆ ನಿಲಿಸಲಿ
ಅಸಹಾಯಕರ ಗುಲಾಮರಾಗಿಸದೇ ಇರಲಿ
ಬಿಳಿ-ಕಪ್ಪು, ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರ ಎಂದು ಹೆಸರಿಟ್ಟು ಕರೆಯದಿರಲಿ
ಪಕ್ಷ ಕಟ್ಟದೆ, ಆಸ್ತಿ ಮನೆ ಮಾಡದೇ ಇರಲಿ
ತಾಯಿತಂಗಿಬಂಧುಗಳನೇ ಗುರುತಿಸದ ಗುನ್ಹೆ ಎಸಗದಿರಲಿ
ಎಲ್ಲರಿಗೂ ಆಕಾಶ ಅಜ್ಜ, ಭೂಮಿ ಅಜ್ಜಿಯಾಗಲಿ
ಒಬ್ಬರಿಗೊಬ್ಬರು ಪ್ರೀತಿಯಿಂದ ಮುದ್ದಾಡಲಿ

ಸೂರ್ಯ ಚಂದ್ರ ನಾಚಿಕೆಯಿಂದ ಕಳಾಹೀನರಾಗುವಂತ ಒಳ್ಳೆ ಕೆಲಸ ಮಾಡಯ್ಯಾ
ಉಣ್ಣುವ ಪ್ರತಿ ಅಗುಳನ್ನೂ ಎಲ್ಲರೊಂದಿಗೆ ಹಂಚಿಕೊಳ್ಳುವಂತೆ
ಮಾನವೀಯತೆಯ ಹಾಡನ್ನು ಕಟ್ಟಿ ಹಾಡುವಂತೆ ಮಾಡಯ್ಯಾ
ಓ ಮನುಷ್ಯಾ..
ಮಾಡಯ್ಯಾ ಮನುಷ್ಯ ಮನುಷ್ಯತ್ವದ ಹಾಡು ಮಾತ್ರ ಹಾಡುವಂತೆ..



...ಧಾನಿಕ ನೈತಿಕತೆ ಕುರಿತ ಮಾತುಗಳೆಲ್ಲ ನಾಲಿಗೆ ...ಲಿನ ಪದಗಳಾಗಿವೆ. ತಾರತಮ್ಯದ ಸಮಾಜದಲ್ಲಿ ...ಾತಿ ಬಡವನಿಗೆ ಉಳಿವಿನ ಹಾದಿಗಳು ಬಹಳ ...ುಯಿವೆ ಮತ್ತು ಅವು ಶುದ್ಧವಾಗಿಲ್ಲ, ಎಂದೇ ...ಯಿಲ್ಲದೆ ರಾಜಕಾರಣ ಈಗ ಸಾಧ್ಯವಿಲ್ಲ' ಎಂದು ... ನಡೆಯನ್ನು ಸಮರ್ಥಿಸಿಕೊಂಡರು.

...ವಯಿತ್ರಿ ಮಲ್ಲಿಕಾ ಅಮರ್ ಶೇಖ್ ಢಸಾಳರ ಪತ್ನಿ. ...ಗಿಂತ 15 ವರ್ಷ ಕಿರಿಯಳಾದ, ಭಿನ್ನ ಸೈದ್ಧಾಂತಿಕ ...ುವುಗಳನ್ನು ಹೊಂದಿದ ಆಕೆ ಢಸಾಳರ ನಡೆಗಳನ್ನು ...ಲ್ಲ, ಅವರ ದಾಂಪತ್ಯ ಜೀವನವೂ ಏರಿಳಿತಗಳಲ್ಲೇ ಸಾಗಿತ್ತು. ವಿಷಮ ದಾಂಪತ್ಯದ ವಿವರಗಳಿದ್ದ ಮಲ್ಲಿಕಾರ ಆತ್ಮಕತೆಯೂ ಹೊರಬಂತು. ನಂತರ ರಾಜಕೀಯ ಕಾರಣಗಳಿಗಾಗಿ ಅದನ್ನು ವಾಪಸು ಪಡೆಯಲಾಯಿತು.



ಅವರ ನಿಲುವುಗಳನ್ನು ಕೆಲವರು ಒಪ್ಪಿ ಹಲವರು ಪ್ರಶ್ನಿಸುತ್ತಿದ್ದ ಸಮಯದಲ್ಲೇ ಮಯಸ್ತೇನಿಯಾ ಗ್ರೆವಿಸ್ ಕಾಯಿಲೆ ಅವರ ಚಲನವಲನಗಳನ್ನು ನಿರ್ಬಂಧಿಸಿತು. ಜೊತೆಗೆ ದೊಡ್ಡ ಕರುಳಿನ ಕ್ಯಾನ್ಸರ್ ಆಗಿ 2014, ಜನವರಿ 15ರಂದು 64 ವರ್ಷ ವಯಸ್ಸಿಗೆ ಢಸಾಳ್ ದೇಹ ತಣ್ಣಗಾಯಿತು.

ಕೋಮುವಾದ ಮತ್ತು ಆರ್ಥಿಕ ಉದಾರೀಕರಣ ನೀತಿಗಳು ಜನಸಮುದಾಯಗಳನ್ನು ಧರ್ಮ-ಸಂಸ್ಕೃತಿ-ಮಾರುಕಟ್ಟೆ ಹೆಸರಿನಲ್ಲಿ ಮಂಕುಬೂದಿ ಎರಚಿ ನಿರ್ವೀರ್ಣರಾಗಿಸಲು ಪ್ರಯತ್ನಿಸುತ್ತಿರುವ ಈ ಕಾಲದಲ್ಲಿ ಶೋಷಿತ ಸಮುದಾಯಗಳು ಎಚ್ಚೆತ್ತು ಸಂಘಟಿತರಾಗಬೇಕಿದೆ. ಜೊತೆಗೆ ರಾಜಕಾರಣದ ಆಮಿಷದ ಪಟ್ಟುಗಳಿಗೆ ಬಲಿಯಾಗದೇ ಸಮುದಾಯದ ಹಿತಾಸಕ್ತಿಯನ್ನೂ ಕಾಪಾಡಿಕೊಳ್ಳಬೇಕಿದೆ. ಇಂಥ ಹೊತ್ತಲ್ಲಿ ಹೊಸದಾಗಿ ಕಟ್ಟಹೊರಡುವವರು ಸಂಘಟನೆಯ ಆಶಯ, ರೂಪುರೇಶೆಗಳನ್ನು ನಿರ್ಧರಿಸುವಾಗ ಹಳೆಯ ಪಾಠಗಳನ್ನು ಹಿಂತಿರುಗಿ ನೋಡಬೇಕಾಗುತ್ತದೆ. ಈ ಕಾರಣಕ್ಕೆ ಢಸಾಳ್ ಮತ್ತೆ ಓದುವ ಕವಿಯೆನಿಸಿಕೊಳ್ಳುತ್ತಾರೆ, ವಿಮರ್ಶಿಸಬೇಕಾದ ಹೋರಾಟಗಾರನೆನಿಸಿಕೊಳ್ಳುತ್ತಾರೆ.

ದೀರ್ಘಕಾಲ ಕಾಯಿಲೆಯಿಂದ ತತ್ತರಿಸಿದ ಅಶಾಂತ ಕವಿ ಜೀವ ಇನ್ನಾದರೂ ಶಾಂತಿಯಿಂದ ವಿರಮಿಸಲಿ. ಮಲ್ಲಿಕಾ ಅಮರ್ ಶೇಖ್ ಎಂಬ ಹೆಣ್ಣುಮಗಳು ಇನ್ನಾದರೂ ದನಿಯೆತ್ತುವಷ್ಟು ಮುಕ್ತಳಾಗಲಿ.

● ಡಾ.ಎಚ್.ಎಸ್. ಅನುಪಮಾ

2

...ೌರ್ಯ

...ೆಯ ಗುಪ್ತಾಂಗದ ಹುಣ್ಣು
...ಖ, ಕರುಣೆ ತುಂಬಿದ ಲಕ್ಷಗಟ್ಟಲೆ ಕಣ್ಣುಗಳ
...ನ ಪ್ರೀತಿ
... ಅಲುಗಿಸುತ್ತಿದೆ
...ಳಗಿನ ದಂಗೆಗೆ ಸಿಡಿದು ಚೂರಾಗಿದ್ದೇನೆ
... ಬೆಳದಿಂಗಳಿಲ್ಲ
...ಲ್ಲ
...ಷ್ಟು ತೋಳ ಕೋರೆ ಹಲ್ಲುಗಳಿಂದ
... ಮಾಂಸ ಕಿತ್ತು ಹರಿಯುತ್ತಿದೆ
...ದಂತಹ ಭಯಂಕರ ಕ್ರೌರ್ಯ
...ಲುಬಿಂದ ಹೊರಚಿಮ್ಮುತ್ತಿದೆ

...ಪ ಕುರುಹುಗಳಿಂದೊಮ್ಮೆ ನನ್ನ ಬಿಡುಗಡೆಗೊಳಿಸು
...ಗಳ ಪೋಷಿಸುವ ಬಿಡು


...ೆ ಹೂವು ದಿಗಂತದತ್ತ ತೆರಳುತ್ತಿದೆ
... ಮುಖಗಳ ಮೇಲಿನ ಓಯಸಿಸ್ ಬಾಷ್ಪವಾಗುತ್ತಿದೆ
...ಾಗದ ಜೋಪಡಿಗಳಲ್ಲಿ ಚಂಡಮಾರುತ
... ದುಃಖದ ಕಡಲು ಬಾಚುತ್ತಿದೆ
... ಆಕ್ರೋಶಕ್ಕೆ ಇರುಳು ಜಾಗ ಕೊಟ್ಟಿದೆ
...ನು ಕಣ್ಣುಗಳಲ್ಲಿ ಬೀದಿನಾಯಿ ಕುಣಿಯುತ್ತಿರುವಾಗ

ಕೋಳಿ ಗುಜರಿಮೊಟ್ಟೆ ಕುಟುಕುತ್ತಿದೆ
ಆತ್ಮದ ಬಾಗಿಲುಗಳು ಪಟಾರನೆ ಮುಚ್ಚಿಕೊಳ್ಳುತ್ತವೆ
ರಕ್ತತೊರೆ ಅವರಿವರಲ್ಲಿ ಹರಿದು
ವ್ಯಾಕರಣದ ಗೋಡೆಗಳಾಚೆ ನನ್ನ ದಿನ ಹುಟ್ಟುತ್ತಿದೆ
ನೆಲದ ಮೇಲೆ ಹರಡಿದ ದೇವರ ಹೊಲಸು ನಾತ

ನೋವು ರೊಟ್ಟಿ ಎರಡನ್ನೂ
ಒಂದೇ ತಂದೂರಿಯಲ್ಲಿ ಹುರಿಯುತ್ತಿದ್ದಾರೆ
ನಗ್ನ ಮೈಗಳ ಬೆಂಕಿ ಕತೆ ಪುರಾಣಗಳಲ್ಲಿ ವಿರಮಿಸಿದೆ
ಹಾದರದ ಬಂಡೆ ಜೇವಬೇರನ್ನು ಭೇಟಿಯಾಗಿ
ಕುಂಟುಕಾಲ ಮೇಲೆ ನಿಟ್ಟುಸಿರು ನಿಂತಿದೆ
ಶನಿ ಉದ್ದ ಕಾಲುವೆ ತೋಡುತ್ತಿದ್ದಾನೆ
ಹೊಸ ಚಿಗುರು ಆಸೆ ಬಾಗಿಲುಗಳ ದೂಡುತ್ತಿದೆ
ಹತಾಶೆಯ ಹೆಣ ಹೊಲಿಯಲಾಗಿದೆ
ಅಮರ ಮೂರ್ತಿಯನು ಹುಚ್ಚುಚ್ಚು
ಸಿದ್ಧಾಂತಗಳು ಬೀಳಿಸುತ್ತಿವೆ
ಕವಚಗಳಿಗೆ ಧೂಳಡರುತ್ತ ಕತ್ತಲ ರುಮಾಲು ಕಳಚುತ್ತಿದೆ


ನೀನು ಕೇಳ್ತೆರೆ; ಇವೆಲ್ಲ ಹಳೆಯ ಮಾತುಗಳು
ಭರತಕ್ಕೆ ಖಾರಿ ತುಂಬಿಕೊಳ್ಳುತ್ತಿದೆ
ಹೆದ್ದೆರೆಗಳು ತೀರ ಮುಟ್ಟುತ್ತಿವೆ
ಆದರೂ
ವಿಷದಂತಹ ಕ್ರೌರ್ಯವೊಂದು ನನ್ನ ಬೆನ್ನ ತುದಿಯಿಂದ
ಹರಡಿಕೊಳ್ಳುತ್ತಿದೆ
ಆದು ಸ್ವಪ್ನ ಮತ್ತು ತಿಳಿ; ನರ್ಮದಾ ನದಿಯ ನೀರಿನಂತೆ..

ಬಿಜೆಪಿಯನ್ನು ಖಂಡಿಸಿದ ಭೂಪ!



ಪ್ರಧಾನಿ ಅಭ್ಯರ್ಥಿ ಎಂದು ಘೋಷಣೆಯಾದ ನಂತರ ನರೇಂದ್ರ ಮೋದಿ ಕಾಲುಗಳಿಗೆ ಚಕ್ರ ಕಟ್ಟಿಕೊಂಡು ದೇಶಸಂಚಾರ ಮಾಡುತ್ತಿದ್ದಾನೆ. ಭಾಷಣಗಳ ಹೆಸರಿನಲ್ಲಿ ತೌಡು ಕುಟ್ಟುತ್ತಿದ್ದಾನೆ. ಆತನ ಸಭೆಗಳಲ್ಲಿ 'ಲಕ್ಷೋಪಲಕ್ಷ' ಜನ ಭಾಗವಹಿಸುತ್ತಾರೆ, ಘೋಷಣೆ ಕೂಗುತ್ತಾರೆ ಎನ್ನಲಾಗುತ್ತದೆ. ಆದರೆ ಆ 'ಲಕ್ಷೋಪಲಕ್ಷ' ಜನರೆಲ್ಲರೂ ಮೋದಿ ಬೆಂಬಲಿಗರೆಂದು ಭಾವಿಸಿದರೆ ಖಂಡಿತಾ ತಪ್ಪಾಗುತ್ತದೆ. ಅಸಲಿಗೆ ಅವರಲ್ಲಿ ಹೆಚ್ಚಿನವರು ಬಾಡಿಗೆ ಸಭಿಕರು! ಅದ್ಹೇಗೆಂದರೆ ಜನಸಂಖ್ಯೆಯನ್ನು ಆಧರಿಸಿ ಒಂದೊಂದು ಊರಿಗೆ ಒಂದೊಂದು ನಮೂನೆಯ ವಾಹನವನ್ನು ಕಳುಹಿಸಲಾಗುತ್ತದೆ; ಪ್ರಯಾಣಭತ್ಯೆಯನ್ನೂ ನೀಡಲಾಗುತ್ತದೆ; ಇನ್ನು ಊಟ, ತಿಂಡಿಯೂ ಉಚಿತ. ಇಂಥಾ ಬಾಡಿಗೆ ಜನರಿಗೆ ಮೋದಿ ಮಾತುಗಳು ಮುಖ್ಯವೇ ಅಲ್ಲ, ಹಾಗಾಗಿ ಮೋದಿ ಸುಳ್ಳು ಅಂಕಿಅಂಶ ಕೊಟ್ಟರೂ, ಚಾರಿತ್ರಿಕ ಘಟನೆಗಳನ್ನು ತಪ್ಪುತಪ್ಪಾಗಿ ಹೇಳಿದರೂ ಅವರಿಗೇನೂ ಆಗಬೇಕಾದ್ದಿಲ್ಲ, ಇತ್ತೀಚೆಗೆ ರಾಂಚಿಯಲ್ಲಿ ಮಾತನಾಡಿದ ಮೋದಿ ಮಹಾಶಯ ಕಾಂಗ್ರೆಸ್ ಪಕ್ಷವನ್ನು ತೆಗಳುವ ಭರದಲ್ಲಿ ಪರೋಕ್ಷವಾಗಿ ತನ್ನದೇ ಪಕ್ಷವನ್ನು ನಿಂದಿಸಿದಾಗಲೂ ಯಾರೊಬ್ಬರೂ ಕಮಕ್ ಕಿಮಕ್ ಅನ್ನಲಿಲ್ಲ!!

ರಾಂಚಿಯ ಭಾಷಣದ ವೇಳೆ ಛತ್ತೀಸ್‌ಗಡ ಮತ್ತು ಜಾರ್ಖಂಡ್ ರಾಜ್ಯಗಳ ಅಭಿವೃದ್ಧಿಯನ್ನು ಹೋಲಿಸಿದ ಮೋದಿ ಕಾಂಗ್ರೆಸ್ ಪಕ್ಷದ ದುರಾಡಳಿತದಿಂದಾಗಿ ಜಾರ್ಖಂಡ್ 'ಹಿಂದುಳಿದಿದೆ' ಎಂದೂ, ಬಿಜೆಪಿ ಆಡಳಿತವನ್ನು ಆಯ್ಕೆ ಮಾಡಿರುವ ಛತ್ತೀಸ್‌ಗಡ ತುಂಬಾ ಮುಂದುವರಿದಿದೆ ಎಂದೂ ಕೊಚ್ಚಿದ. ಜಾರ್ಖಂಡದ ಹಿಂದುಳಿಯುವಿಕೆಗೆ ತನ್ನದೇ ಪಕ್ಷ ಕಾರಣವೆಂಬ ವಾಸ್ತವಾಂಶ ಅರಿಯದ ಮೋದಿ ಕಾಂಗ್ರೆಸ್ ಮೇಲೆ ಗೂಬೆ ಕೂರಿಸಲು ಹೊರಟು ತನ್ನ ಪೆದ್ದುತನವನ್ನು ಮತ್ತೊಮ್ಮೆ ಪ್ರದರ್ಶಿಸಿದ್ದಾನೆ.



ತಮಾಷೆಯ ಸಂಗತಿಯೆಂದರೆ 2000ದಲ್ಲಿ ಅಸ್ತಿತ್ವಕ್ಕೆ ಬಂದ ಜಾರ್ಖಂಡ್ ರಾಜ್ಯ ಇದುವರೆಗೆ ಕಂಡಿರುವ 5 ಮುಖ್ಯಮಂತ್ರಿಗಳಲ್ಲಿ ಬಾಬುಲಾಲ್ ಮರಾಂಡಿ ಮತ್ತು ಅರ್ಜುನ್ ಮುಂಡಾ ಎಂಬಿಬ್ಬರೂ ಬಿಜೆಪಿಯವರು. ಸಿಬು ಸೊರೆನ್ ಮತ್ತು ಹೇಮಂತ ಸೊರೆನ್ ಜಾರ್ಖಂಡ್ ಮುಕ್ತಿ ಮೋರ್ಚಾದವರು. ಐದನೆಯವರಾದ ಮಧು ಕೋಡಾ ಸ್ವತಂತ್ರ ಅಭ್ಯರ್ಥಿ. ನವಂಬರ್ 15, 2000ದಿಂದ ಜನವರಿ 18, 2013ರ ವರೆಗಿನ ಸುಮಾರು 13 ವರ್ಷಗಳ ಅವಧಿಯಲ್ಲಿ 2982 ದಿನಗಳ ಕಾಲ ಬಿಜೆಪಿ ಅಧಿಕಾರದಲ್ಲಿತ್ತು, ಜಾರ್ಖಂಡ್ ಮುಕ್ತಿ ಮೋರ್ಚಾದ ಅಧಿಕಾರಾವಧಿ 475 ದಿನಗಳು. ರಾಷ್ಟ್ರಪತಿ ಆಡಳಿತದ ಅವಧಿ: 421 ದಿನಗಳು. ಸ್ವತಂತ್ರ: 709 ದಿನಗಳು. ಅಲ್ಲಿಗೆ ಜಾರ್ಖಂಡವನ್ನು ಅತಿ ಹೆಚ್ಚುಕಾಲ ಆಳಿರುವ ಪಕ್ಷವೆಂದರೆ ಬಿಜೆಪಿ ಎಂದಾಯಿತು!

ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದ ತನ್ನದೇ ಪಕ್ಷದ ಬಾಬುಲಾಲ್ ಮರಾಂಡಿಯನ್ನು ಕಿತ್ತುಹಾಕಿದ ಬಿಜೆಪಿ ಆ ಸ್ಥಾನಕ್ಕೆ ಅರ್ಜುನ್ ಮುಂಡಾನನ್ನು ನೇಮಿಸಿತ್ತು, ಅರ್ಜುನ್ ಮುಂಡಾ ಸಚಿವಸಂಪುಟದಲ್ಲಿ ಭೂಮಿ ಹಾಗೂ ಕಂದಾಯ ಸಚಿವನಾಗಿದ್ದ ಮಧು ಸಿಂಘ್ ಎಂಬಾತ 50 ಲಕ್ಷ ರೂ. ಲಂಚ ಡಿಮಾಂಡ್ ಮಾಡಿದ್ದ ಪ್ರಕರಣ 2004ರಲ್ಲಿ ಭಾರಿ ದೊಡ್ಡ ಸುದ್ದಿ ಮಾಡಿತ್ತು, ಆಗ ಕೇಂದ್ರದಲ್ಲೂ ಎನ್‌ಡಿಎ ಸರ್ಕಾರದ ಆಡಳಿತ ಇದ್ದುದನ್ನು ಗಮನಿಸಬೇಕು. ಮೂರು ಅವಧಿಗೆ ಮುಖ್ಯಮಂತ್ರಿಯಾಗಿ ಮುಂದುವರಿದಿದ್ದ ಅರ್ಜುನ್ ಮುಂಡಾನ ಭ್ರಷ್ಟಾಚಾರವನ್ನು ಪ್ರತಿಭಟಿಸಿದ ಬಾಬುಲಾಲ್ ಮರಾಂಡಿ ಕೊನೆಯಲ್ಲಿ ಬಿಜೆಪಿಗೆ ರಾಜೀನಾಮೆ ಬಿಸಾಕಿ ಹೊರಬಿದ್ದರು. 2011ರಲ್ಲಿ ಆತ ಮುಂಡಾ ಸರ್ಕಾರದ ಸರಣಿ ಭ್ರಷ್ಟಾಚಾರ ಪ್ರಕರಣಗಳನ್ನು ಬಯಲಿಗೆಳೆದರು. ಪ್ರಮಾಣದಲ್ಲಿ 2-ಜಿ ಹಗರಣಕ್ಕೆ ಸಮನಾದ ಹಗರಣಗಳಿವು. ಪಿಡಬ್ಲ್ಯೂಡಿ, ರಸ್ತೆ ಮತ್ತು ವಿದ್ಯುತ್ ಖಾತೆಗಳನ್ನು ನೋಡಿಕೊಳ್ಳುತ್ತಿದ್ದ ಮುಂಡಾ ಒಂದು ರಸ್ತೆ ನಿರ್ಮಾಣದ ಕಾರ್ಯದಲ್ಲಿ 3765 ಕೋಟಿ ನುಂಗಿದ್ದರೆಂಬ ಆರೋಪಗಳಿವೆ.


ಇದೇ ಭ್ರಷ್ಟಾತಿಭ್ರಷ್ಟ ಅರ್ಜುನ್ ಮುಂಡಾ ಮೊನ್ನೆಯ ರಾಂಚಿ ರ್‍ಯಾಲಿಯಲ್ಲಿ ಮೋದಿ ಪಕ್ಕದಲ್ಲಿ ರಾರಾಜಿಸುತ್ತಿದ್ದ. ಮೋದಿ ಭ್ರಷ್ಟಾಚಾರವನ್ನು ಸಹಿಸುವುದಿಲ್ಲ ಎನ್ನುವವರು ಆತ ಅರ್ಜುನ್ ಮುಂಡಾ ಮತ್ತು ಯಡಿಯೂರಪ್ಪರಂಥವರನ್ನು ಆಲಂಗಿಸಿರುವುದರ ಬಗ್ಗೆ ಏನೆನ್ನುತ್ತಾರೆ?

ಪುಸ್ತಕ ಪರಿಚಯ


ಪಿ. ಲಂಕೇಶರು 1974 ರಲ್ಲಿಯೇ ಫ್ರೆಂಚ್ ಕವಿ ಚಾರ್ಲ್ಸ್ ಬೋದಿಲೇರ್‌ನ 'ಪಾಪದ ಹೂವುಗಳು' ಕೃತಿಯನ್ನು ಅನುವಾದಿಸಿದ್ದರು. ನಾಲ್ಕು ಮುದ್ರಣಗಳನ್ನು ಕಂಡಿರುವ ಆ ಪುಸ್ತಕವನ್ನು ಕನ್ನಡ ಸಾಹಿತ್ಯಾಭಿಮಾನಿಗಳು ಮೆಚ್ಚಿದ್ದರು.

ಅನಂತರ 1998 ರಲ್ಲಿ ಲಂಕೇಶರು ಮತ್ತು ಅವರ ಆಪ್ತ ಮಿತ್ರರಾದ ಎಸ್.ಎಫ್. ಯೋಗಪ್ಪನವರ್ ಪತ್ರಿಕೆಯಲ್ಲಿ 'ರೂಪಕ ಲೇಖಕರು' ಎಂಬ ಅಂಕಣವನ್ನು ರೂಪಿಸಿದ್ದರು. ಆ ಅಂಕಣಗಳ ಸಂಗ್ರಹವೂ ಈಗ ಪುಸ್ತಕ ರೂಪದಲ್ಲಿ ಲಭ್ಯವಿದೆ.

ಇದೀಗ ಯೋಗಪ್ಪನವರ್ ಅದೇ ಬೋದಿಲೇರ್‌ನ `Le Spleen de Paris' ಎಂಬ ಗದ್ಯ ಕವಿತೆಗಳನ್ನು ಅನುವಾದಿಸಿದ್ದು ಅದು 'ಮಾಯಾಕನ್ನಡಿ' ಎಂದು ಪ್ರಕಟಗೊಂಡಿದೆ. ಈ ಹೊಸ ಪುಸ್ತಕವನ್ನು ನಮ್ಮ ಓದುಗರಿಗೆ ಪರಿಚಯಿಸಲು ಇಲ್ಲಿ ಅದರ ಹಲವು ಆಯ್ದ ಗದ್ಯಕವಿತೆಗಳನ್ನು ಪ್ರಕಟಿಸುತ್ತಿದ್ದೇವೆ.



ಮಾಯಾಕನ್ನಡಿ
ಬೆಲೆ : ರೂ. 200
ಪುಟಗಳು : xx+136=156





ಕುಮಾರಿ ಬಿಸ್ತೂರಿ

ನಾನು ನಗರದ ಸರಹದ್ದು ತಲುಪಿ, ಗಲ್ಲಿಯ ಬೆಳಕಿನಲ್ಲಿ ನಡೆದು ಹೋಗುತ್ತಿದ್ದಂತೆ, ನನ್ನ ಕೈಯೊಳಗೆ ಯಾರದೋ ಮತ್ತೊಂದು ಕೈ ನುಸುಳಿತು ಹಾಗು ನನ್ನ ಕಿವಿಯಲ್ಲಿ ಉಸುರಿತು "ನೀವು ಡಾಕ್ಟರ್ ಮಹಾಶಯರಲ್ಲವೆ?"

ನಾನು ಮೇಲಕ್ಕೆ ಮುಖ ಎತ್ತಿ ನೋಡಿದೆ, ಎತ್ತರವಾದ, ತುಂಬು ಮೈ ಕಟ್ಟಿನ ವಿಶಾಲವಾದ ಕಣ್ಣುಗಳ, ಮುಖಕ್ಕೆ ತೆಳುವಾದ ಮೇಕಪ್ ಹಚ್ಚಿದ ತರುಣಿ ನಿಂತಿದ್ದಳು. ಆಕೆಯ ಕೂದಲುಗಳು ಆಕೆಯ ಹ್ಯಾಟಿನ ರಿಬ್ಬನ್‌ನಂತೆ ಗಾಳಿಯಲ್ಲಿ ತುಯ್ಯುತ್ತಿದ್ದವು.

"ನಾನು ಡಾಕ್ಟರ್ ಅಲ್ಲ ಕ್ಷಮಿಸಿ."

"ನೀವು ಡಾಕ್ಟರ್ ನನಗೆ ಗೊತ್ತಿದೆ. ನನ್ನ ಜೊತೆ ಮನೆಗೆ ಬನ್ನಿ, ನೀವು ವಿಷಾದ ಪಡುವುದೇನೂ ಇಲ್ಲ."

"ನಾನು ಭೇಟಿಕೊಡಲು ಸಂತೋಷಿಸುತ್ತೇನೆ. ಆದರೆ ನಿಮ್ಮ ಡಾಕ್ಟರ್ ನಿಮಗೆ ಸಿಕ್ಕ ನಂತರ!"

"ಹಾ" ಆಕೆ ಹೇಳಿದಳು, ಇನ್ನೂ ನನ್ನ ಕೈಯನ್ನು ತನ್ನ ಕೈಯಲ್ಲಿಯೇ ಹಿಡಿದುಕೊಂಡಿದ್ದಳು, ತಕ್ಷಣ ನಕ್ಕು ಮುಂದುವರಿಸಿದಳು:

"ನೀವು ಡಾಕ್ಟರರೇ ಆಗಿರುವಿರಿ, ನನ್ನ ಜೊತೆ ಚೇಷ್ಟೆ ಮಾಡುತ್ತಿರುವಿರಿ. ನಿಮ್ಮಂಥ ಚೇಷ್ಟೆ ಮಾಡುವ ಬಹಳ ಜನರನ್ನು ನಾನು ನೋಡಿದ್ದೇನೆ. ಬನ್ನಿ."

ನಾನು ರಹಸ್ಯಗಳನ್ನು ಪ್ರೀತಿಸುತ್ತೇನೆ, ಯಾಕೆಂದರೆ ನಾನು ಯಾವಾಗಲು ಯೋಚಿಸುತ್ತೇನೆ ಆ ರಹಸ್ಯಗಳನ್ನು ಭೇದಿಸಬಹುದೆಂದು! ಆದ್ದರಿಂದ ನಾನು ಆ ಸಂಗಾತಿಯ ಜೊತೆ ಹೊರಟೆ, ಅಂದರೆ ಅವಕಾಶಿತ ಆ ಗೂಢ ಹೆಣ್ಣಿನ ಜೊತೆ.



ಮಲಿನವಾದ ಆ ಕೋಣೆಯನ್ನು ವರ್ಣಿಸಲು ಹೋಗುವುದಿಲ್ಲ; ಅಲ್ಲಿಗೆ ಪ್ರಸಿದ್ಧ ಫ್ರೆಂಚ್ ಕವಿಗಳು ಬಂದು ಹೋಗಿರಬಹುದು. ಆದರೆ ಚಿತ್ರಕಾರ ರೆನಿಯರ್ ಅಲ್ಲಿಯ ವಿವರಗಳಿಗೆ ಗಮನ ಕೊಟ್ಟಿಲ್ಲ- ಆ ಗೋಡೆಗಳ ಮೇಲೆ ಎರಡು ಅಥವಾ ಮೂರು ಖ್ಯಾತಿವೆತ್ತ ಡಾಕ್ಟರುಗಳ ಭಾವಚಿತ್ರಗಳಿದ್ದವು. ಆಕೆ ನನಗೆ ಹುಡುಗಾಟ ಮಾಡಿದಳು! ಒಳ್ಳೆಯ ಅಗ್ಗಿಷ್ಟಿಕೆ, ಬೆಚ್ಚಗಿನ ವೈನ್, ಸಿಗಾರ್-ಔದಾರ್ಯದಲ್ಲಿ ಆ ಎಲ್ಲವನ್ನೂ ಸಮರ್ಪಿಸಿದ್ದಳು ಹಾಗು ತಾನು ಒಂದು ಸಿಗಾರ್ ಹಚ್ಚಿ, ರಂಜಿಸುವ ಆ ಹೆಣ್ಣು ಹೇಳಿತು: "ಇದು ನಿಮ್ಮದೇ ಮನೆ ಎಂದು ತಿಳಿಯಿರಿ, ಆರಾಮಾಗಿರಿ ಮತ್ತು ನನ್ನ ಪ್ರಿಯ ಸ್ನೇಹಿತನೆ, ನೀವು ಹಾಸ್ಪಿಟಲ್‌ನಲ್ಲಿ ಕೆಲಸ ಮಾಡುತ್ತಿದ್ದ ಹಿಂದಿನ ಸಮಯವನ್ನು ನೆನಪಿಸಿಕೊಳ್ಳಿ, ನಿಮ್ಮ ತಾರುಣ್ಯದ ಹಾಗು ಸಂತೋಷದ ಆ ದಿನಗಳನ್ನು, ಇದೆಲ್ಲಾ ಏನು ಈ ಬಿಳಿಕೂದಲುಗಳು? ಕೆಲವು ಸಮಯದ ಹಿಂದೆ ಹೀಗಿರಲಿಲ್ಲ, ನೀವು ಆ 'ಎಲ್'ನ ಬಳಿ ಸಹಾಯಕ ಶಸ್ತ್ರಚಿಕಿತ್ಸಕರಾಗಿ ಕೆಲಸ ಮಾಡುತ್ತಿದ್ದಾಗ, ನೆನಪಿಸಿಕೊಳ್ಳಿ, ನೀವು ಅವನಿಗೆ ಗಂಭೀರ ಶಸ್ತ್ರಚಿಕಿತ್ಸೆಗಳಲ್ಲಿ ಸಹಾಯ ಮಾಡುತ್ತಿದ್ದಿರಿ, ಆ ಮನುಷ್ಯ ಇಷ್ಟಪಡುತ್ತಾ ಕೊಯ್ಯುತ್ತಿದ್ದ, ಕತ್ತರಿಸುತ್ತಿದ್ದ, ಸರಿ ಮಾಡುತ್ತಿದ್ದ. ನೀವು ಅವನಿಗೆ ಉಪಕರಣಗಳನ್ನು ಕೊಡುತ್ತಿದ್ದಿರಿ; ದಾರ, ಅರಳೆಯ ಉಂಡೆ ಇತ್ಯಾದಿ. ಶಸ್ತ್ರಕ್ರಿಯೆ ಮುಗಿದ ಮೇಲೆ, ಅವನು ತನ್ನ ಕೈಗಡಿಯಾರ ನೋಡುತ್ತ, ಹೆಮ್ಮೆಯಿಂದ ಹೇಳುತ್ತಿದ್ದ: "ಸ್ನೇಹಿತರೇ, ಐದು ನಿಮಿಷ" ಎಂದು. ನೀನೆ ನೋಡು ಇದೆಲ್ಲಾ ನನಗೆ ಹೇಗೆ ಗೊತ್ತಿದೆ? ನನಗೆ ಆ ಸಭ್ಯಗೃಹಸ್ಥರೆಲ್ಲಾ ಗೊತ್ತು."

ಕೆಲವು ಸಮಯದ ನಂತರ, ಅದೇ ಸಲುಗೆಯ ಭಾಷೆಯಲ್ಲಿ ಮತ್ತೆ ಶುರು ಹಚ್ಚಿಕೊಂಡಳು: "ಒಪ್ಪು, ನನ್ನ ಮೆಚ್ಚಿನ ಗೆಳೆಯನೆ, ನೀನು ಡಾಕ್ಟರ್ ಎಂದು!"

ಆ ಮೂರ್ಖ ಪಲ್ಲವಿ ಸಿಟ್ಟು ತರಿಸಿತು, ನಾನು ಕೂಡಲೇ ಎದ್ದು ನಿಂತು ಕೂಗಿ ಹೇಳಿದೆ: "ನಾನು ಡಾಕ್ಟರ್ ಅಲ್ಲ."

"ಹಾಗಾದರೆ ಶಸ್ತ್ರಚಿಕಿತ್ಸಕನೆ?"

"ಅಲ್ಲ! ನಿನ್ನ ಕುತ್ತಿಗೆಯನ್ನು ಕೊಯ್ಯುವ ಪ್ರಸಂಗ ಬಂದರೆ ಮಾತ್ರ, ನಿನ್ನ ..." ಹಾಗು ಮುದ್ರಿಸಲಸಾಧ್ಯವಾದ ಶಬ್ದಗಳಲ್ಲಿ ಆಕೆಯನ್ನು ದೂಷಿಸಿದೆ.

"ನಾನು ಸಿದ್ಧಮಾಡಿ ತೋರಿಸುತ್ತೇನೆ" ಎಂದು ಮುಂದುವರಿಸಿದಳು. ಆಕೆಯು ಕಪಾಟಿನಿಂದ ಪೇಪರುಗಳ ಒಂದು ಬಂಡಲ್ ಹೊರತೆಗೆದಳು. ಅವು ಮಾರಿನ್‌ನು ಬಿಡಿಸಿದ ಭಾವಚಿತ್ರಗಳ ಪ್ರತಿಗಳಾಗಿದ್ದವು, ಸುಪ್ರಸಿದ್ಧ ಸಮಕಾಲೀನ ವೈದ್ಯರುಗಳ ಭಾವಚಿತ್ರಗಳ ಪ್ರತಿಗಳಾಗಿದ್ದವು ಹಾಗು ಕೆಲವು ವರ್ಷಗಳ ಹಿಂದೆ ಅವುಗಳನ್ನು ಕ್ವಿವಾವಾಲ್ಟೇರ್‌ನಲ್ಲಿ ಪ್ರದರ್ಶಿಸಲಾಗಿತ್ತು.

"ಇವನನ್ನು ಗುರುತು ಹಿಡಿಯುತ್ತೀಯಾ?"

"ಹೌದು. ಇವನು 'ಎಕ್ಸ್' ಅದನ್ನು ಕೆಳಗಡೆ ಬರೆದಿದ್ದಾರೆ, ನಾನು ಅವನನ್ನು ವೈಯಕ್ತಿಕವಾಗಿ ಚೆನ್ನಾಗಿ ಬಲ್ಲವನಾಗಿದ್ದರು."

"ನೀನು ನೋಡಿಲ್ಲ, ನನಗೆ ಗೊತ್ತಿದೆ! ಇಲ್ಲ; ಇವನು 'ಝೆಡ್', ಇವನು 'ಎಕ್ಸ್'ನನ್ನು ಮುಖದ ಮೇಲೆ ಕಪ್ಪು ಆತ್ಮ ಧರಿಸಿದ ರಾಕ್ಷಸನೆಂದು ತನ್ನ ತರಗತಿಯಲ್ಲಿ ವರ್ಣಿಸಿದ್ದ. ಯಾಕೆಂದರೆ ರೋಗ ಪರೀಕ್ಷೆಯಲ್ಲಿ ಇವರಿಗೆ ಭಿನ್ನಾಭಿಪ್ರಾಯಗಳು ಉಂಟಾಗಿದ್ದವು. ಇದು ನಗೆಪಾಟಲಿನ ವಿಷಯವಾಗಿ ಉಳಿದ ವೈದ್ಯರ ಮಧ್ಯೆ ಚರ್ಚೆಯಾಗಿತ್ತು, ನೆನಪಿಟ್ಟುಕೋ, ಇವನು 'ಕೆ', ಈತ ತನ್ನ ಆಸ್ಪತ್ರೆಯಲ್ಲಿ ದಂಗೆಕೋರರಿಗೆ ಚಿಕಿತ್ಸೆ ಕೊಟ್ಟು; ನಂತರ ಅವರ ಹೆಸರುಗಳನ್ನು ಅಧಿಕಾರಿಗಳಿಗೆ ತಿಳಿಸಿದ್ದ, ಅದು ದಂಗೆಯ ಸಮಯವಾಗಿತ್ತು, ಒಳ್ಳೆಯ ಮನುಷ್ಯನಂತೆ ಕಾಣುತ್ತಿದ್ದ ಆ ವೈದ್ಯ, ಅಂತಹ ಸಂಕುಚಿತ ಹೃದಯ ಹೊಂದಿದ್ದ. ಇಲ್ಲಿ ನೋಡು ಇವನು 'ಡಬ್ಲ್ಯೂ' ಪ್ರಸಿದ್ಧ ಇಂಗ್ಲಿಷ್ ಡಾಕ್ಟರ್, ಇವನು ಪ್ಯಾರಿಸ್ಸಿನ ಭೇಟಿಗೆ ಬಂದಾಗ ನೋಡಿದ್ದೆ. ಇವನು ಒಂದಿಷ್ಟು ಹುಡುಗಿಯ ಹಾಗೆ ಕಾಣುತ್ತಿದ್ದ, ಹಾಗೆ ಕಾಣಿಸುವುದಿಲ್ಲವೆ?"

ನನ್ನ ಕೈಯನ್ನು ಟೇಬಲ್ ಮೇಲೆ, ಒಂದು ದಾರದಿಂದ ಕಟ್ಟಿದ ಹಾಳೆಗಳ ಸುರುಳಿಯ ಮೇಲೆ ಇಟ್ಟಿದ್ದೆ. "ಒಂದು ಗಳಿಗೆ ತಡೆ" ಎಂದು ಹೇಳಿದಳು. "ಈ ಸುರುಳಿಯಲ್ಲಿ ಅರೆವೈದ್ಯರು, ಅಲ್ಲಿರುವ ಸುರುಳಿಯಲ್ಲಿ ಹೊರ ವೈದ್ಯರಿದ್ದಾರೆ!"

ಆಕೆ ಅತ್ಯಂತ ತಾರುಣ್ಯದ ಮುಖಗಳ ಭಾವಚಿತ್ರಗಳನ್ನು ನನ್ನೆದುರು ಹರಡಿದಳು.

"ನಾವು ಮುಂದಿನಸಾರಿ ಭೇಟಿಯಾಗುವ ಸಮಯದಲ್ಲಿ, ನಿನ್ನ ಭಾವಚಿತ್ರವನ್ನು ಕೊಡಬೇಕು, ನನ್ನ ನೆಚ್ಚಿನ ಗೆಳೆಯನೆ! ನೀನು ಕೊಡುವುದಿಲ್ಲವೆ?"

ನನ್ನ ಮನಸ್ಸಿನ ಭ್ರಾಂತಿಯಿಂದ ಹೊರಬರಲು ಸಾಧ್ಯವಾಗದೇ ಕೇಳಿದೆ: "ನೀನು, ನಾನು ಡಾಕ್ಟರನೆಂದು ಯಾಕೆ ತಿಳಿಯುತ್ತಿದ್ದೀ?"

"ಯಾಕೆಂದರೆ ನೀನು ಕರುಣಾಮಯಿ ಆಗಿರುವಿ ಹಾಗು ಹೆಂಗಸರನ್ನು ಆದರದಿಂದ ಕಾಣುತ್ತಿರುವಿ!"

"ಕೆಟ್ಟ ತರ್ಕ!" ಎಂದು ಅಂದುಕೊಂಡು ಸುಮ್ಮನಾದೆ.

"ಹಾ, ನಾನು ಯಾವಾಗಲೂ ಸರಿಯಾಗಿಯೇ ಗುರುತು ಹಿಡಿಯಬಲ್ಲೆ. ಅವರಲ್ಲಿ ಬಹಳಷ್ಟು ಜನರು ನನಗೆ ಗೊತ್ತಿದ್ದಾರೆ. ನಾನು ವೈದ್ಯರುಗಳನ್ನು ಪ್ರೀತಿಸುತ್ತೇನೆ. ನಾನು ಕೆಲವು ಸಲ ಅನಾರೋಗ್ಯವಿರದಿದ್ದರೂ ಅವರನ್ನು ಕಾಣುತ್ತೇನೆ. ಕೆಲವರು ಒರಟಾಗಿರುತ್ತಾರೆ: "ನಿನಗೆ ಏನೂ ಆಗಿಲ್ಲ" ಎಂದು ಹೇಳುತ್ತಾರೆ. ಆದರೆ ಉಳಿದವರಿಗೆ ಗೊತ್ತಾಗುತ್ತದೆ, ನಗುತ್ತ ನಾನು ನೋಡುವ ದೃಷ್ಟಿಯಿಂದ."

"ಒಂದು ವೇಳೆ ಅವರಿಗೆ ಗೊತ್ತಾಗದೇ ಹೋದರೆ?..."

"ಹಾ, ನಾನು ಯಾವುದೇ ಅನಾರೋಗ್ಯವಿಲ್ಲದೆ ತೊಂದರೆ ಕೊಟ್ಟದ್ದಕ್ಕೆ ಹತ್ತು ಫ್ರಾಂಕ್ ಹಣವನ್ನು ಅವರ ಟೇಬಲ್ ಮೇಲೆ ಇಟ್ಟು ಬರುತ್ತೇನೆ. ಅವರು ಬಹಳಷ್ಟು ಮೃದು ಸ್ವಭಾವದ, ಅರ್ಥಮಾಡಿಕೊಳ್ಳುವ ಜನರಾಗಿರುತ್ತಾರೆ. ಪಿಟಿ ಆಸ್ಪತ್ರೆಯಲ್ಲಿ ನಾನೊಬ್ಬ ತರುಣ ಸಹಾಯ ಒಳವೈದ್ಯನನ್ನು ನೋಡಿದೆ, ಅವನು ಬಹಳಷ್ಟು ಸುಂದರನಾಗಿದ್ದ, ಸಭ್ಯನಾಗಿದ್ದ ಹಾಗು ಕ್ರಿಯಾಶೀಲನಾಗಿದ್ದ. ಅವನ ಸಂಗಾತಿಗಳು ನನಗೆ ಹೇಳಿದರು ಅವನ ಹತ್ತಿರ ಎಳ್ಳಷ್ಟೂ ಹಣವಿಲ್ಲವೆಂದು ಹಾಗು ಅವನ ಪಾಲಕರು ಒಂದು ಬಿಡಿಕಾಸನ್ನು ಕಳುಹಿಸುವ ಸ್ಥಿತಿಯಲ್ಲಿ ಇಲ್ಲವೆಂದು. ಅದು ನನ್ನ ಧೈರ್ಯ ಹೆಚ್ಚಿಸಿತು. ನನಗೆ ಒಂದಿಷ್ಟು ವಯಸ್ಸಾಗಿದ್ದರೂ, ಚೆಲುವೆಯಾಗಿದ್ದೆ. "ನೀನು ಆಗೀಗ ಬರುತ್ತಿರು ಹಾಗು ನನ್ನನ್ನು ಕಾಣುತ್ತಿರು. ನಿನಗೆ ಎಷ್ಟು ಹಣ ಬೇಕು ನನಗೆ ಹೇಳು. ನಾನು ನಿನಗೆ ಹಣ ಕೊಡಬಲ್ಲೆ, ಆದರೆ ನನಗೆ ಯಾವುದೇ ರೀತಿಯ ಹಣದ ಅವಶ್ಯಕತೆ ಇರುವುದಿಲ್ಲ"-ನಾನು ನಿಜವಾಗಿ ಹೇಳಬೇಕೆಂದರೆ ಈ ಸಂದೇಶವನ್ನು ಸುತ್ತುಬಳಸಿ ಅವನಿಗೆ ತಲುಪಿಸಿದ್ದೆ, ನೇರವಾಗಿ ಹೇಳಿರಲಿಲ್ಲ. ಆ ಬಡ ಹುಡುಗನಿಗೆ ಅವಮಾನವಾಗಬಹುದೆಂಬ ಭಯವಿತ್ತು, ನೀನು ಹಾಗೆ ವಿಚಾರಿಸಲಿಕ್ಕಿಲ್ಲ, ಆದರೆ ನನಗೆ ಆ ಭ್ರಮೆ ಇತ್ತು, ನೀನು ನಂಬುತ್ತೀಯಾ! ನನಗೆ ವಿಚಿತ್ರವಾದ ಆಶೆ ಇತ್ತು ಅವನಿಗೆ ಹೇಳಲು ಧೈರ್ಯ ಬರಲಿಲ್ಲ-ನಾನು ಇಚ್ಛಿಸುತ್ತಿದ್ದೆ, ಅವನು ಶಸ್ತ್ರಚಿಕಿತ್ಸಕನ ಮೇಲುಡುಗೆಯಲ್ಲಿಯೇ ನನ್ನ ಹತ್ತಿರ ಬರಬೇಕು, ಅವನು ಶಸ್ತ್ರಚಿಕಿತ್ಸೆಯ ಉಪಕರಣಗಳ ಜೊತೆ ಬರಬೇಕು ಹಾಗು ಅವನ ಮೇಲುಡುಗೆಯ ಮೇಲೆ ಒಂದಿಷ್ಟು ರಕ್ತ ಸಿಡಿದಿರಬೇಕು."

ಆಕೆ ಅದನ್ನು ಸಹಜವಾಗಿ, ಪ್ರಾಮಾಣಿಕವಾಗಿ ಹೇಳಿದಳು, ಒಬ್ಬ ಜಾಣ ವ್ಯಕ್ತಿ ತಾನು ಪ್ರೀತಿಸುತ್ತಿರುವ ನಟಿಗೆ ಹೇಳಿದಂತೆ: "ನಾನು ನಿನ್ನನ್ನು ನೀನು ಸೃಷ್ಟಿಸಿದ ಆ ಸುಪ್ರಸಿದ್ಧ ಪಾತ್ರದ ಉಡುಪುಗಳಲ್ಲಿ ನೋಡಬಯಸುತ್ತೇನೆ."

ನಾನು ಪ್ರಶ್ನೆಗಳನ್ನು ಕೇಳುತ್ತಲೇ ಹೋದೆ. "ನೀನು ನೆನಪಿಸಿಕೊಳ್ಳುವೆಯಾ, ಈ ವಿಚಿತ್ರ ಭ್ರಮೆ ಪ್ರಾರಂಭವಾದ ಕಾಲ ಹಾಗು ಪ್ರಸಂಗವನ್ನು?"

ನಾನು ಕೇಳಿದ್ದನ್ನು ಅರ್ಥೈಸಿ ಹೇಳುವುದು ಕಷ್ಟವಾಗಿತ್ತು, ಆದಾಗ್ಯೂ ಆ ಪ್ರಶ್ನೆಯನ್ನು ಕೇಳಿದ್ದೆ. ಆಕೆ ಬಹಳ ವ್ಯಥೆಯಿಂದ ಉತ್ತರಿಸಿದಳು, ಉತ್ತರಿಸುವಾಗ ಆಕೆ ತನ್ನ ಕಣ್ಣುಗಳನ್ನು ನನ್ನಿಂದ ಬೇರೆ ಕಡೆ ದೂರ ಮಾಡಿದಳು: "ನನಗೆ ಗೊತ್ತಿಲ್ಲ... ನನಗೆ ನೆನಪು ಮಾಡಿಕೊಳ್ಳಲಾಗುತ್ತಿಲ್ಲ."


ಪ್ರತಿಯೊಬ್ಬನು ನಗರ ಪ್ರದೇಶದಲ್ಲಿ ವಿಚಿತ್ರ ಸಂಗತಿಗಳನ್ನು ಸಂಧಿಸುತ್ತಾನೆ, ಆದರೆ ನೋಡುವವನಿಗೆ ಅದರ ತುಂಬೆಲ್ಲ ಅಲೆದಾಡುವ ಹಾಗು ನೋಡುವ ದೃಷ್ಟಿ ಇರಬೇಕು. ಅಲ್ಲಿ ಬದುಕು ನಿಷ್ಕಳಂಕ ಅಮಾನುಷ ವ್ಯಕ್ತಿಗಳಿಂದ ತುಂಬಿ ತುಳುಕಿರುತ್ತದೆ. ಓ ನನ್ನ ಒಡೆಯನಾದ ದೇವರೆ, ಎಲ್ಲದರ ಸೃಷ್ಟಿಕರ್ತನೇ, ನೀನೇ ಕಾನೂನು ಮಾಡಿರುವಿ, ಸ್ವಾತಂತ್ರ್ಯ ಕೊಟ್ಟಿರುವಿ, ಸರ್ವಶಕ್ತನಾಗಿರುವಿ, ವಿಶ್ವ ಚಲಿಸುವಂತೆ ಮಾಡಿರುವಿ, ನ್ಯಾಯಾಧೀಶನೂ ನೀನೇ, ಕ್ಷಮಿಸುವವನೂ ನೀನೇ, ಕಾರ್ಯಕಾರಣಗಳ ಧಾರಾಳ ಪುರುಷನೂ ನೀನೇ, ನನ್ನ ಹೃದಯ ಪರಿವರ್ತನೆಗಾಗಿ ನನ್ನ ಅಂತರಂಗದಲ್ಲಿ ಭಯದ ಅನುಭವ ಇಟ್ಟಿರುವಿ, ಸರ್ಜಿಕಲ್ ಸಾಧನದ ತುದಿಯಿಂದ ವಾಸಿಗೊಳಿಸುವ ಅಭಯ ಕೊಟ್ಟಿರುವಂತೆ! ದೇವರೇ ದಯೆ ಇರಲಿ, ಎಲ್ಲ ಹುಚ್ಚರ ಮೇಲೆ; ಹೆಣ್ಣಾಗಿರಲಿ, ಗಂಡಾಗಿರಲಿ! ಓ. ಸೃಷ್ಟಿಕರ್ತನೆ, ನಿನ್ನ ಕಣ್ಣಲ್ಲಿ ಯಾರಾದರೂ ರಾಕ್ಷಸರಾಗಿರಲು ಸಾಧ್ಯವೆ? ನಿನಗೆ ಮಾತ್ರ ಗೊತ್ತು ಅವರು ಈ ರೀತಿ ಯಾಕೆ ಹುಟ್ಟಿದರು ಹಾಗೂ ಹೇಗೆ ಹುಟ್ಟಿದರು ಮತ್ತು ಓ ನನ್ನ ಸೃಷ್ಟಿಕರ್ತನೇ, ಅವರನ್ನು ಬೇರೆ ರೀತಿಯಲ್ಲಿ ಸೃಷ್ಟಿಸಲು ಸಾಧ್ಯವಿರಲಿಲ್ಲವೇ?

ಆಗಂತುಕ

"ಹೇಳು ನನಗೆ, ಸಮಸ್ಯಾತ್ಮಕ ವ್ಯಕ್ತಿಯೇ, ನಿನ್ನ ತಂದೆ, ತಾಯಿ, ಸಹೋದರ, ಸಹೋದರಿಯರಲ್ಲಿ ನೀನು ಯಾರನ್ನು ಹೆಚ್ಚು ಪ್ರೀತಿಸುವಿ?"

"ನನಗೆ ತಂದೆಯೂ ಇಲ್ಲ, ತಾಯಿಯೂ ಇಲ್ಲ, ಸಹೋದರನೂ ಇಲ್ಲ, ಸಹೋದರಿಯೂ ಇಲ್ಲ."

"ಸ್ನೇಹಿತರು?"



"ನೀನು ಉಪಯೋಗಿಸುತ್ತಿರುವ ಆ ಒಂದು ಶಬ್ದ ಮಾತ್ರ ನನ್ನಿಂದ ಇಲ್ಲಿಯವರೆಗೂ ಅರ್ಥದಿಂದ ತಪ್ಪಿಸಿಕೊಂಡು ಬಂದಿದೆ."

"ನಿನ್ನ ಮಾತೃಭೂಮಿ?"

"ಅದು ಯಾವ ಅಕ್ಷಾಂಶದಲ್ಲಿದೆಯೋ, ನನಗೆ ಗೊತ್ತಿಲ್ಲ."

"ಚೆಲುವೆಯಾದ ಹುಡುಗಿ?"

"ಆಕೆ ದೇವತೆಯಾಗಿದ್ದಲ್ಲಿ, ಸಾವು ಗೆದ್ದ ಸುಂದರಿಯಾಗಿದ್ದಲ್ಲಿ, ಮನಸಾರೆ ಪ್ರೀತಿಸುವೆ."

"ಐಶ್ವರ್ಯ?"

"ನಾನು ಅದನ್ನು ತಿರಸ್ಕರಿಸುತ್ತೇನೆ. ನೀನು ದೇವರನ್ನು ತಿರಸ್ಕರಿಸಿದಂತೆ!"

"ಹಾಗಾದರೆ, ವಿಶೇಷ ಆಗಂತುಕನೇ, ನೀನು ಏನನ್ನಾದರೂ ಪ್ರೀತಿಸುವಿ, ಹೇಳು?"

"ನಾನು ಮೋಡಗಳನ್ನು ಪ್ರೀತಿಸುವೆ... ತೇಲಿ ಮರೆಯಾಗುವ ಮೋಡಗಳನ್ನು... ಅಗೋ ಅಲ್ಲಿ... ಅಗೋ ಅಲ್ಲಿ... ಅಚ್ಚರಿ ತುಂಬಿದ ಮೋಡಗಳನ್ನು...!"

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ವನಗೌರಿ ಬನಶಂಕರಿ

ನಮ್ಮ ದೇಶದ ಧಾರ್ಮಿಕತೆಯು ಈಗಿರುವ ...ೕನಾಯಸ್ಥಿತಿ ಎಂದರೆ ಸಂಕೇತಗಳನ್ನು ಅಪ್ಪಿಕೊಂಡು ...ರ್ಥಗಳನ್ನು ಮರೆತಿರುವುದು. ಇದೀ ಧಾರ್ಮಿಕ ಗುಣಗಳ ...ಕಟಣೆಯು ಸಂಕೇತಗಳನ್ನು ಆಧರಿಸಿದ ಘರ್ಷಣೆ ...ವಾಗಿದೆಯೇ ಹೊರತು, ಸಾರ-ಸತ್ವದ ಅವತೀರ್ಣವಾಗಿಲ್ಲದೆ ...ರುವುದು.

ಬೆಂಗಳೂರಿನ ಬನಶಂಕರಿಯಲ್ಲಿರುವ ಪ್ರಖ್ಯಾತ ...ನಶಂಕರಿ ದೇವಸ್ಥಾನವನ್ನು ಈ ನಿಟ್ಟಿನಲ್ಲಿ ಗಮನಿಸಲೇ ...ಕು. ಬನಶಂಕರಿ ದೇವಸ್ಥಾನವು ಈಗ ದೊಡ್ಡ ಕಲ್ಲು ...ಟ್ಟಡದ ರಚನೆಯಾಗಿರುವುದಲ್ಲದೆ, ತನ್ನ ಆಲಯದ ಸುತ್ತ ...ರಾಟ್ ಸ್ವರೂಪದಲ್ಲಿ ಬೆಳೆದ ನಗರ ನಿರ್ಮಾಣವನ್ನು ...ಕಾರಗೊಳಿಸಿಕೊಂಡಿದೆ. ಅಂಗಳದಲ್ಲಿ ಒಂದು ಹಳೆಯ ...ರವನ್ನು ಬಿಟ್ಟರೆ ಇಡೀ ಬನಶಂಕರಿ ದೇವಸ್ಥಾನದ ...ವರಣದಲ್ಲಿ ಎಲ್ಲಿಯೂ ಹಸಿರ ಕುರುಹು ಇಲ್ಲ.

ಹಸಿರು ಗಿಡ ಮರ ಪೊದೆಗಳಿಂದ ಕೂಡಿದ ಬನವೇ ...ಲ್ಲದ ಮೇಲೆ ಅದ್ಯಾವ ಬನಶಂಕರಿ? ಸೊಪ್ಪು ತರಕಾರಿ, ...ಣ್ಣು-ಹಂಪಲುಗಳಿಲ್ಲದ ಆ ಕ್ಷೇತ್ರದಲ್ಲಿ ಕಾಣುವುದು ಯಾವ ...ಕಾಂಬರಿ? ಹೀಗೆಂಬ ಆಲೋಚನೆಯಲ್ಲಿ ಆ ...ನಶಂಕರಿಯ ವ್ಯಾಪ್ತಿಯಲ್ಲಿದ್ದ ವೃದ್ಧರೊಬ್ಬರನ್ನು ಆ ಕ್ಷೇತ್ರ ... ಮೊದಲು ಹೇಗಿತ್ತೆಂದು ವಿಚಾರಿಸಿದೆ. ಪ್ರಸ್ತುತ ಬನಶಂಕರಿ ...ೇವಸ್ಥಾನದ ಸ್ಥಾನ ಏನಿದೆಯೋ ಅದು ತೀರ ಸಣ್ಣ ...ಮಾಣದಲ್ಲಿದ್ದು, ಅಲ್ಲಿ ಒಂದು ವಿಗ್ರಹವೂ ಇಲ್ಲದೆ ...ರವೊಂದರ ಕೆಳಗೆ ಕಲ್ಲು ಗುಂಡಿಗೆ ಅರಿಶಿಣ ...ಂಕುಮಗಳನ್ನು ಬಳಿದು, ಸಾಂಕೇತಿಕವಾಗಿ ಬನಶಂಕರಿ ...ದು ಪೂಜಿಸುತ್ತಿದ್ದುದಾಗಿ ತಿಳಿದುಬಂತು. ಜೊತೆಗೆ ...ಗಿರುವ ಬನಶಂಕರಿ ದೇವಸ್ಥಾನ ಮತ್ತು ಅದರ ...ತ್ತಮುತ್ತೆಲ್ಲಾ ಪ್ರದೇಶವು ತರಕಾರಿ ಹೂ ಮತ್ತು ಹಣ್ಣಿನ ...ೋಟಗಳಿಂದಲೇ ಕೂಡಿದ್ದಾಗಿ ಅದರ ನಿಜವಾದ ಚಿತ್ರಣದ ...ತಿಹಾಸವನ್ನು ಅಲ್ಲಿ ಹಿರಿಯರೊಬ್ಬರು ನನಗೆ ವಿವರಿಸಿದರು.

ಹಸಿರಿನ ತಂಪು, ಹೂಗಳ ಗಂಧ, ಮಣ್ಣಿನ ಫಲವತ್ತತೆ ... ಎಲ್ಲದರ ಪ್ರಾಕೃತಿಕ ಸಂಕೇತವನ್ನಾಗಿ ದೇವಿಯನ್ನು ...ಥವಾ ಕೃಷಿ ಹಾಗೂ ಫಲವತ್ತಿನ ಸಂಕೇತವನ್ನಾಗಿ ...ರಿಗಣಿಸಿದ ವನಗೌರಿ-ಬನಶಂಕರಿಯನ್ನು ತಮ್ಮ ನಂಬಿಕೆ ...ಹಾಗೂ ಕಾರ್ಯಗಳ ಅಭಿವ್ಯಕ್ತತೆಯಲ್ಲಿ ಬಿಂಬಿಸಿದ್ದರು ನಮ್ಮ ...ಜನಪದರು. ಆದರೆ ಇಂದು ಯಾವ ಬನದ ಕುರುಹನ್ನೂ ...ಉಳಿಸದೆ ಹಸಿರಿನ ಉಸಿರನ್ನು ಪೂರಾ ಬಸಿದು, ...ಚ್ಛೆಯಾಗಿರುವ ನಗರೀಕರಣದ ಸಾಧನೆಯ ನಡುಮಧ್ಯದಲ್ಲಿ ...ನಶಂಕರಿಯ ಸಹಸ್ರಲಿಂಗ ಗೊಂಬೆಯನ್ನು ನೆಟ್ಟು ಭಕ್ತಾದಿಗಳು ...ಮಾಡುತ್ತಿರುವ ಪೂಜೆಗಳು ಕೊಳೆಯುದ ಹೆಣಕ್ಕೆ ನಿತ್ಯವೂ ...ಲಂಕಾರ ಹುಸಿ ಗೌರವವಾಗಿದೆ.

ಇಂದು, ಜೀವಂತವಾಗಿರುವ ಒಂದು ಸಸಿಯನ್ನು ...ಳಿಯದ ಆ ಬನಶಂಕರಿಯ ದೇವಸ್ಥಾನವೇ ಒಂದು ...ಪಹಾಸ. ಬನವೇ ಇಲ್ಲದ ಆಶಂಕರಿಯು ವನಗೌರಿಯ ...ರಿಯ ಹೆಣ.

ಗೌರಿಶಂಕರ

ದೇವಿ, ಪ್ರಕೃತಿ, ಹೆಣ್ಣು, ಶಕ್ತಿ, ಗೌರಿ- ಈ ಎಲ್ಲವೂ ತಾತ್ವಿಕವಾಗಿ ಸಮಾನಾರ್ಥಕ ಪದಗಳು ಎಂದು ಬಾಲಪಾಠವನ್ನು ಪದೇಪದೇ ಉಲ್ಲೇಖಿಸುವುದು ಈ ಪುರಾಣದ ಹೂರಣದ ಉದ್ದೇಶವಲ್ಲ. ಆದರೆ ನೆನಪಿಸಿಕೊಳ್ಳುವ ಅಗತ್ಯ ಈಗಿದೆ. ಆದಿಮ ಕಾಲದಲ್ಲಿ ಇದ್ದಲ್ಲಿಯೇ ಇರುವ ಪ್ರಸಂಗವು ಒದಗಿದ್ದರಿಂದ ಹೆಣ್ಣು ಕೃಷಿಗೆ ತೊಡಗಿಕೊಂಡು ಅವಳು ಹಸಿರಿನೊಂದಿಗೆ ಪ್ರಕೃತಿಯೊಂದಿಗೆ ಅವಿನಾಭಾವ ಸಂಬಂಧ ಹೊಂದಿ ತಾನೇ ಜೀವಧಾರಣ ಶಕ್ತಿಯ ಸಂಕೇತವಾಗಿ ಗುರ್ತಿಸಿಕೊಂಡು ಪಾರ್ವತಿ ಎಂದು ಎನಿಸಿಕೊಂಡಳು. ಅಂತೆಯೇ ಅಲೆಯುತ್ತಿದ್ದ ಬೇಟೆಯಾಡುತ್ತಿದ್ದ ಪುರುಷ ಶಿವನಾಗಿ ತನ್ನು ಕುರುಹನ್ನು ಬಿಟ್ಟ. ಆದರೆ ಕೃಷಿಯ ವಿಕಾಸ ಮತ್ತು ಅದರ ವಿಸ್ತೃತ ಚಟುವಟಿಕೆಗಳಲ್ಲಿ ಪಾಲುದಾರನಾದ ಇದೇ ಶಿವ ಅಥವಾ ಪುರುಷ ಶಂಕರನಾಗಿಯೂ ರೂಪಾಂತರ ಹೊಂದಿದ. ಶಬರನಾಗಿ ಅಲೆಮಾರಿ ಪ್ರವೃತ್ತಿ ತೊರೆದು, ಕೃಷಿಕ ಕುಟುಂಬ ರೂಪುಗೊಳ್ಳುವ ಪ್ರಕ್ರಿಯೆಯಲ್ಲಿ ನಿಂತು ಆತ ಗೌರಿಶಂಕರನೇ ಆದ.

ಶಿವಶಕ್ತಿಯಲ್ಲಿ ಪುರುಷ ಮತ್ತು ಸ್ತ್ರೀಯರ ಶಕ್ತಿಗಳ ತಾಂತ್ರಿಕ ಮಿಳಿತವಾದರೆ, ಗೌರಿಶಂಕರದಲ್ಲಿ ಕೃಷಿಕರಾದ ಗಂಡು ಮತ್ತು ಹೆಣ್ಣು ಗಂಡು ಜೊತೆಗೂಡುತ್ತಾರೆ. ಅಲೆಮಾರಿ, ಶಬರನಾಗಿದ್ದ ಶಿವ, ಕುಟುಂಬ ನಿರ್ವಹಣೆಯಲ್ಲಿ ಹೆಣ್ಣಿಗೆ ಜೊತೆಯಾಗಿ ಶಂಕರನಾದ. ಆದರೆ ಅವನ ಅಲೆಮಾರಿತನದ ಗುಣ ಅವನಿಂದ ದೂರಾಗಿರುವುದಿಲ್ಲ. ಇದ್ದಲ್ಲಿಯೇ ತನ್ನ ಆಹಾರವನ್ನು ಸಂಪಾದಿಸಿಕೊಳ್ಳುವುದನ್ನು ಕಂಡುಕೊಂಡರೂ, ತನ್ನ ಮೊದಲ ಆಹಾರ ಪದ್ಧತಿಯನ್ನು ಅದರ ರುಚಿಯನ್ನು ಬಿಡಲಾಗದೆ ಬೇಟೆಯಾಡುವುದನ್ನು ಮರೆಯಲಿಲ್ಲ. ನಂತರ ನಾಗರಿಕತೆ ಬೆಳೆದಂತೆಲ್ಲ, ರಾಜಕೀಯ ಪ್ರಭುತ್ವಗಳು ವಿಸ್ತೃತವಾದಂತೆಲ್ಲ ತನ್ನ ಅಧಿಕಾರದ ಪರಿಧಿಯನ್ನು ವಿಸ್ತರಣೆ ಮಾಡಿಕೊಂಡುತೆಲ್ಲ, ತೊಡಗಲೇ ಬೇಕಾದ ಯುದ್ಧಗಳಿಂದಾಗಿ ಮತ್ತು ಹೋರಾಟಗಳಿಂದಾಗಿ, ತನ್ನ ಸಂಗಾತಿ ಮತ್ತು ಕುಟುಂಬದಿಂದ ದೂರಾಗಬೇಕಾಗುತ್ತಿತ್ತು. ವಾಣಿಜ್ಯ ಪರಿಚಯವಾದ ನಂತರ ಹೊಸ ಭೂಭಾಗಗಳನ್ನು, ಅವಕಾಶಗಳನ್ನು ಅರಸುತ್ತಾ ಹೋದಂತೆಲ್ಲ ಕುಟುಂಬವನ್ನು ತೊರೆಯುವ ವಿದ್ಯಮಾನ ಪುನರಾವರ್ತನೆಯಾಗುತ್ತಿತ್ತು. ಹಾಗೆ ಹೋಗುವ ಪುರುಷನಿಗೆ ಆ ಹೊಸ ಜಾಗದಲ್ಲಿ ಹೊಸ ಅಭಿರುಚಿ, ಸಹವಾಸ ಮತ್ತು ಆಸಕ್ತಿಯಿಂದಾಗಿಯೂ ಸ್ವೇಚ್ಛೆಯಿಂದಲೂ ಅವನು ಕುಟುಂಬದಿಂದ ದೂರಾಗುವ ಎಲ್ಲ ಸಾಧ್ಯತೆಗಳೂ ಇತ್ತು. ಅವರು ಯಶಸ್ವಿಯಾಗಿ ಹಿಂದಿರುಗುವುದು ನಿಶ್ಚಿತವೆಂದೇನೂ ಹೇಳುವಂತಿರಲಿಲ್ಲ. ಅಂತಹ ಎಲ್ಲಾ ಸಮಯಗಳಲ್ಲಿ ಕುಟುಂಬಗಳನ್ನು, ಸಂತತಿಯನ್ನು ಕಾದವಳು ಹೆಣ್ಣು. ಈ ಭೂಮಿಯ ಮೇಲೆ ನಡೆದಿರುವಂತಹ ಎಲ್ಲಾ ಅಸಹನೆ, ಹೋರಾಟ, ಮನುಷ್ಯ ಕಾರಣಗಳ ವಿನಾಶಗಳ ನಡುವೆಯೂ ಹೀಗೊಂದು ಮನುಷ್ಯ ಸಂತತಿಯು ಇಂದು ಉಳಿದಿರುವುದಕ್ಕೆ ಕಾರಣವೆಂದರೆ, ಅದು ಹೆಣ್ಣಿನ ಬದ್ಧತೆ ಮತ್ತು ಕೊಡುಗೆ.

ಪುರುಷನ ಎಲ್ಲಾ ಗೊಂದಲ, ಹೋರಾಟ, ಪ್ರಯೋಗ, ಅನ್ವೇಷಣೆಗಳ ಅನಿಶ್ಚಿತತೆಯಲ್ಲಿ ಅವಳು ಸಂಘಟಿತಳಾಗ ಬೇಕಾದ ಅನಿವಾರ್ಯತೆ ಅವಳಿಗಿತ್ತು. ಹಾಗಾಗಿ ಅಗಲಿಕೆ, ದುಃಖ, ಬವಣೆ, ಪ್ರಣಯದಾನಗಳಲ್ಲಿ ಸಮಾನ ಪಾಲುದಾರರಾಗಿದ್ದ ಸ್ತ್ರೀಯರು ಪರಸ್ಪರ ಕೈಜೋಡಿಸಿ, ಆಶಯಗಳಲ್ಲಿ ಒಂದಾಗಿ ದುಡಿದಂತೆಯೇ, ವ್ರತಗಳನ್ನು ಆಚರಿಸುತ್ತಿದ್ದರು. ಈ ವ್ರತಗಳಿಂದ ತಮ್ಮನ್ನು ಪರಸ್ಪರ ಸಮಾಧಾನಿಸಿಕೊಳ್ಳುತ್ತಿದ್ದಂತೆ, ಆಶಯಗಳನ್ನು, ಆಸರೆಗಳನ್ನು ಸಾಂಕೇತಿಕವಾಗಿ ಪ್ರದರ್ಶಿಸುವ ಮೂಲಕ ತಮ್ಮ ಸಹಕಾರಗಳನ್ನು ಪ್ರಕಟಗೊಳಿಸಿಕೊಳ್ಳುವ ಸಂಕೇತಗಳೇ ಈ ವ್ರತಗಳು. ಹಾಗಾಗಿ ಹೆಂಗಸರು ಪರಸ್ಪರ ಕಲೆತು ನೈತಿಕವಾಗಿಯೂ, ಸಾಮಾಜಿಕವಾಗಿಯೂ, ಭಾವನಾತ್ಮಕವಾಗಿಯೂ ಬಲವಾಗುವ ಸಂಘಟನೆಗೆ ಪೂರಕವಾಗಿರುವವು ಈ ವ್ರತಗಳೇ ಹೊರತು, ವ್ರತವನ್ನು ಆಚರಿಸುವುದರಿಂದ ಆಸೆಗಳನ್ನು ಈಡೇರಿಸಿಕೊಳ್ಳುವುದು, ದುರಂತವನ್ನು ನಿವಾರಿಸಿಕೊಳ್ಳುವುದು ಇತ್ಯಾದಿ ಆಸೆ ಮತ್ತು ಭಯಗಳೆಲ್ಲಾ ನುಸುಳಿದ್ದು ಪುರೋಹಿತವರ್ಗದ ಮಧ್ಯ ಪ್ರವೇಶವಾದ ನಂತರ. ಯಾವುದೇ ಒಂದು ಸಾಮಾಜಿಕ ಅಥವಾ ಹೋರಾಟದ ಸಂಘಟನೆಯು ಆಗಿಂದಾಗ್ಗೆ ಕಲಿತು ತಮ್ಮ ಆಶೋತ್ತರಗಳನ್ನು, ಹೋರಾಟದ ದಿಕ್ಕನ್ನು, ಧ್ಯೇಯವನ್ನು ಪರಿಶೀಲಿಸಿಕೊಳ್ಳುವಂತೆ, ಪುನಶ್ಚೇತನಗೊಳಿಸಿ ಕೊಳ್ಳುವಂತೆ ಹೆಂಗಸರ ಸಣ್ಣ ಸಣ್ಣ ಗುಂಪುಗಳು ಆಗ ವ್ರತಗಳೆಂಬ ಆಚರಣೆಗಳಲ್ಲಿ ಒಂದಾಗುತ್ತಿದ್ದದ್ದು.

ನಿಂಬೆಹಣ್ಣಿನ ದೀಪಗಳು

ಬನಶಂಕರಿ ದೇವಸ್ಥಾನದಲ್ಲಿ ನಿಂಬೆಹಣ್ಣು ದೀಪ ಹಚ್ಚುವ ಹೆಂಗಸರನ್ನು ನೋಡಿ. ಮಕ್ಕಳ ಏಳ್ಗೆಗಾಗಿ ಹರಕೆ ಹೊತ್ತುಕೊಳ್ಳುವ ತಾಯಂದಿರು, ಎಲ್ಲೋ ಪೋಲಿ ಬಿದ್ದು ಹೋಗಿರುವ ತುಡುಗು ಗಂಡರ ಹೆಂಡತಿಯರು, ಮೂವತ್ತರ ಪ್ರಾಯಕ್ಕೆ ಬಂದಾಗಿರುವ ಮದುವೆಯಾಗದ ಹೆಣ್ಣು ಮಕ್ಕಳು, ಮನೆಯಲ್ಲಿ ಒಡಕು, ಜಗಳ ಇತ್ಯಾದಿ ತೊಂದರೆಗಳು, ಸಾಲ, ಬಡತನ ಇತ್ಯಾದಿ ಆರ್ಥಿಕ ಮುಗ್ಗಟ್ಟುಗಳನ್ನು ಎದುರಿಸಲು ಹೆಣಗಾಡುತ್ತಿರುವ ಜವಾಬ್ದಾರಿಯುತ ಗೃಹಿಣಿಯರು, ಮಕ್ಕಳಾಗದ ಮಹಿಳೆಯರು, ಮಗನಿಗೆ ಉತ್ತಮ ಭವಿಷ್ಯಕ್ಕಾಗಿ ಪ್ರಾರ್ಥಿಸಿ, ಅವನಿಗೆ ಯಾವುದೇ ಕಾರಣಕ್ಕೆ ಅದು ಸಿಕ್ಕನಂತರ, ಇವರಿಂದ ದೂರವಾಗಿ ಅವರು ಆ ಭಾಗ್ಯವನ್ನು ಅನುಭವಿಸದೇ ಮತ್ತೆ ಅಡುಗೆಮನೆಯ ಮಸಿಕೈಗಳಲ್ಲಿ ಕಣ್ಣೊರೆಸಿಕೊಳ್ಳುವ ತಾಯಂದಿರು; ಎಲ್ಲಾ ಇವರಂತವರೇ ಹೆಚ್ಚಿನ ಪಾಲು. ಇಂಥಾ ತಾಯಂದಿರು ಬನಶಂಕರಿಯ ಅಂಗಳದಲ್ಲಿ ಒಂದಾಗುತ್ತಿದ್ದದ್ದು ಸಂತೋಷ. ಆದರೆ ಅವರಾರೂ ಸಾಮಾಜಿಕವಾಗಿ ಸಂಘಟಿತರಾಗದೇ ಬರಿಯ ನಿಂಬೆಹಣ್ಣು ದೀಪ ಹಚ್ಚುವ ವ್ರತಾಚರಣೆಯಲ್ಲಿಯೇ ನಿರತರಾಗಿ ಪರಸ್ಪರ ನೋಡಿಕೊಳ್ಳದೇ, ಒಬ್ಬರ ಕೈಯನ್ನೊಬ್ಬರು ಹಿಡಿದುಕೊಳ್ಳದೇ ಹೋಗುವುದು ವಿಷಾದ.

ನಿಂಬೆಹಣ್ಣು ರೋಗ ಪ್ರತಿರೋಧಕ ಶಕ್ತಿಯ ಔಷಧೀಯ ಗುಣವನ್ನು ಹೊಂದಿರುವ ಕಾರಣದಿಂದಲೋ ಏನೋ, ಪ್ರಾರಂಭದಿಂದಲೂ ಪ್ರತಿರೋಧಕದ ಸಂಕೇತವನ್ನಾಗಿ ಇದನ್ನು ಬಳಕೆಯಲ್ಲಿ ಇರಿಸಿಕೊಂಡಿದ್ದಾರೆ. ದೃಷ್ಟಿಯಿಂದ ಕೆಡಕಾಗುವುದು ಎಂದು ಅನಿಸಿದರೆ, ದೃಷ್ಟಿ ತೆಗೆಯಲು ಇದನ್ನು ಬಳಸುತ್ತಿದ್ದುದ್ದಲ್ಲದೇ, ಕೆಡುಕನ್ನು ನಿರೋಧಿಸುವುದು ಎಂಬ ನಂಬಿಕೆಯಲ್ಲಿ ಅದನ್ನು ಮಂತ್ರಿಸುವುದು, ಇಟ್ಟುಕೊಳ್ಳುವುದು ಇತ್ಯಾದಿಗಳನ್ನು ಮಾಡುತ್ತಿದ್ದರು.

ಬನಶಂಕರಿಯಲ್ಲಿ ತಮ್ಮ ಸಂಕಟ, ತೊಂದರೆಗಳನ್ನು ಎದುರಿಸಲೆಂದು ಪ್ರಾರ್ಥಿಸುವ ತಾಯಂದಿರು ನಿಂಬೆಹಣ್ಣಿನ ಸಿಪ್ಪೆಯಲ್ಲಿ ದೀಪ ಹಚ್ಚಿ ಸಾಂಕೇತಿಕವಾಗಿ ಹಸಿರಿನ ದೇವಿಯಾದವಳಿಗೆ ತಮ್ಮ ಸಂಕಷ್ಟವನ್ನು ನಿವಾರಿಸಿ ಬೆಳಕು ಕಾಣಿಸು ಎಂದು ವ್ರತ ಮಾಡುವುದು ಆಶ್ಚರ್ಯವೇನಲ್ಲ. ಆದರೆ, ಅವರು ರಸವನ್ನು ಬಸಿದು ಬರಿ ಸಿಪ್ಪೆಯಲ್ಲಿ ದೀಪವನ್ನು ಹಚ್ಚಿದಂತೆ, ವ್ರತದ ಮೂಲ ಆಶಯವನ್ನೇ ಮರೆತು ಬರಿಯ ಮೌಢ್ಯದ ಆಚರಣೆಗೆ ಅದನ್ನು ಸೀಮಿತಗೊಳಿಸಿಕೊಂಡದ್ದು ಖೇದಕರ.

ಪಾರ್ವತಿಯ ಬಡತನ

ಮಹಿಳೆ ತನ್ನ ಕುಟುಂಬ ಮತ್ತು ಸಂತತಿಯನ್ನು ಉಳಿಸಿಕೊಳ್ಳಲು ಹೆಣಗಾಡುವಂತೆ ತನ್ನನ್ನೂ ತಾನೇ ನೋಡಿಕೊಳ್ಳಲೂ ಹೇಗೆ ಪರಿಶ್ರಮ ಪಡಬೇಕೆಂದು ಒಂದು ಜಾನಪದದ ಕಥೆಯನ್ನು ಗಮನಿಸಿ.

ಶಿವ ತನ್ನ ಕಾಮಾಧಿಕ್ಯದಿಂದಾಗಿ ಅನೇಕ ಹೆಂಗಸರನ್ನು ಕೂಡುತ್ತಿದ್ದದ್ದು ಪಾರ್ವತಿಗೆ ತಿಳಿದಿದ್ದು ಅವಳಿಗೆ ಬೇಸರವಾಗಿತ್ತು. ಅವಳು ಅದರ ಬಗ್ಗೆ ಅನೇಕ ಬಾರಿ ಶಿವನಲ್ಲಿಯೇ ಪ್ರಸ್ತಾಪಿಸಿ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದ್ದಳು. ಗಂಡನು ಯೋಗಿಯಾಗಿ, ತಿರುಬೋಕಿಯಾಗಿ ಅಲ್ಲಿಲ್ಲಿ ಅಲೆದಾಡಿಕೊಂಡಿದ್ದರಿಂದ ಅವಳಿದ್ದದ್ದು ಬಡತನದಲ್ಲಿ. ಒಮ್ಮೆ ಅವಳ ಚೋಲಿಯು ಹರಿದಿದ್ದರಿಂದ ಮನೆಯಿಂದ ಹೊರಗೂ ಹೋಗಲಾರದೇ ಹೋದಳು. ಶಿವ ಅವಳ ಕಡೆಗೆ ಗಮನ ಕೊಡದ ಕಾರಣ ಅವಳು ತನ್ನ ಹಣ್ಣು ಮತ್ತು ತರಕಾರಿಗಳನ್ನು ತರಲೂ ಸಾಧ್ಯವಾಗಿರಲಿಲ್ಲ. ಯಾರೋ ಒಬ್ಬ ದರ್ಜಿಯು ಮನೆಯ ಮುಂದೆ ಹಾದುಹೋಗುವಾಗ ಅವನ ಕೂಗಿ ತನ್ನ ರವಿಕೆಯನ್ನು ಹೊಲಿದುಕೊಡಲು ಕೇಳಿದಳು. ಆತ ಅದಕ್ಕಾಗಿ ಸಂಭಾವನೆ ಕೇಳಿದ. ಆದರೆ ಪಾರ್ವತಿಯಲ್ಲಿ ಅವನಿಗೆ ಕೊಡಲು ಏನೂ ಇರಲಿಲ್ಲ. ಈ ಅವಳ ಅಸಹಾಯಕತೆಯನ್ನು ಆತ ಅನುಕಂಪದಿಂದ ನೋಡಲಿಲ್ಲ. ಬದಲಾಗಿ ತನ್ನ ಜೊತೆ ಕಾಮಕೂಟಕ್ಕೆ ಸಮ್ಮತಿಸಿದರೆ ರವಿಕೆಯನ್ನು ಹೊಲಿದುಕೊಡುವುದಾಗಿ ಆತ ಹೇಳಿದ. ಪಾರ್ವತಿಗೆ ಬೇರೆ ದಾರಿಯೇ ಇರಲಿಲ್ಲ. ಬಹು ತ್ರಾಸದಿಂದ ಇದಕ್ಕೆ ಒಪ್ಪಿಕೊಂಡಳು. ಅವನೊಡನೆ ಕೂಟವಾದ ಮೇಲೆ ಆ ದರ್ಜಿ ಜೋರಾಗಿ ನಕ್ಕ. ಅವನ ನಿಜರೂಪ ತೋರಿಸಿದ. ಅವನು ಸಾಕ್ಷಾತ್ ಶಿವನೇ ಆಗಿದ್ದ. ತಾನು ಇತರರೊಂದಿಗೆ ಸಂಬಂಧವನ್ನು ಹೊಂದುವ ಬಗ್ಗೆ ಆಕ್ಷೇಪಿಸುವ ನೀನೇ ಈಗ ಯಾರೋ ದರ್ಜಿಯೊಂದಿಗೆ ಮಲಗಿದೆ ಎಂದು ಆಡಿಕೊಂಡ. ಆಗ ಪಾರ್ವತಿ ಹೇಳಿದ ಮಾತನ್ನು ಇಲ್ಲಿ ಬಹು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. "ನಾನು ಮಲಗಲೇಬೇಕಾದ ಪರಿಸ್ಥಿತಿ ಒದಗಿದ್ದು ನನ್ನ ಬಡತನದಿಂದ. ಆದರೆ ನೀನು ಮಲಗಲು ಹೋಗುವುದು ಬೇರೆಯೇ ಕಾರಣಕ್ಕಾಗಿ...."

ಜನಪದರು ಪಾರ್ವತಿಯ ಪಾತಿವ್ರತ್ಯವನ್ನು ಹಾಳು ಮಾಡದಂತೆ ಶಿವನೇ ವೇಷ ಮರೆಸಿಕೊಂಡು ಬಂದು ದರ್ಜಿಯೆಂದು ಹೇಳಿದರೂ, ನನಗೆ ಈ ಮೇಲ್ಕಂಡ ಕಥೆಯಲ್ಲಿರುವ ಪಾರ್ವತಿಯೇ ಮಲಗಲೇಬೇಕಾದ ಪರಿಸ್ಥಿತಿಯಿರುವ ವೇಶ್ಯೆಯರಲ್ಲಿ ಕಾಣುತ್ತಾಳೆ.

ಮಹಿಳೆಯರು ತಾವು ಪರಸ್ಪರ ಸಂಘಟಿತರಾಗಲು, ತಮ್ಮ ಹಸಿರಿನ ಉಸಿರನ್ನು ಉಳಿಸಿಕೊಳ್ಳಲು ಸೇರಬೇಕಾದ ಅವಕಾಶವನ್ನು ಮೌಢ್ಯ ಮತ್ತು ಕಂದಾಚಾರಕ್ಕೆ ಒಳಗಾದ ಆಚರಣೆಗೆ ತಂದುಕೊಳ್ಳುವುದು ಬನಶಂಕರಿಯ ಹಸಿರು ಬನವನ್ನೆಲ್ಲಾ ನಾಶ ಮಾಡಿ, ಮರಗಳ ಬದಲು ಕಲ್ಲುಕಂಬಗಳು ನಿಂತ ದೇವಸ್ಥಾನದಂತಾಗುತ್ತದೆ. ಬನವೇ ಇಲ್ಲದೇ ಕಲ್ಲಿನ ಶಂಕರಿಯಾಗುತ್ತಾಳೆ.







ಆ ಬೆನ್ನಿ ಹಿನ್‌ಗೆ ಚಿನ್ನದ ಕಮೋಡು ಇದೆಯಾ?

ಥೂತ್ತೇರಿ

► ಯಾಹು

ಬೆನ್ನಿ ಹಿನ್ ಎಂಬ ಭೂತ ಬೆಂಗಳೂರಿಗೆ ಬಂದಿಳಿಯುತ್ತದೆ ಎಂಬ ಸುದ್ದಿ ಕೇಳಿದ ಪ್ರಣವಾನಂದ ಸ್ವಾಮಿ ಮೈಕ್ಕೆ ಕಿರಿದುಕೊಂಡು ವ್ರಣವಾನಂದ ಸ್ವಾಮಿಯಾದನಂತಲ್ಲಾ. ಸದರಿ ವ್ರಣವಾನಂದ ಬೆನ್ನಿ ಹಿನ್ ಸಭೆಗೆ ಹಿಂದೂ ಉಗ್ರರು ನುಗ್ಗಿ, ಹಿಂದುಮುಂದು ನೋಡದೆ ಬೆನ್ನ ಹಿಂದಿನವರಿಗೆ ಹಿಗ್ಗಾಮುಗ್ಗ ಇಕ್ಕುತ್ತಾರೆಂದು ಕೂಗಾಡಿದ್ದೂ ಅಲ್ಲದೆ, ಹುಬ್ಬಳ್ಳಿಯು ಮಿನಿ ವಿಧಾನಸೌಧದ ಎದುರು ಮಿನಿಬಾಟಲಿಯಲ್ಲಿ ಸೀಮೆಎಣ್ಣೆ ಇಟ್ಟುಕೊಂಡು ಪ್ರತಿಭಟನೆಗೆ ಕೂಡಗಿದನಂತಲ್ಲಾ. ಮೂಲತಃ ಹೈಲುಪೈಲು ಗಿರಾಕಿಯಾದ ಈ ವ್ರಣಸ್ವಾಮಿ ಚಡ್ಡಿಗಳಿಗೆ ತಲೆ ಕೆಟ್ಟರೆ ಹೇಗಿರುತ್ತಾರೋ ಹಾಗೇ ಇವನೂ ನೆಪಕ್ಕೆ ಒಂದು ಬಾಟಲಿ ಸೀಮೆಎಣ್ಣೆ ಇಟ್ಟುಕೊಂಡು ಯಾರ ಜೇಬಿನಲ್ಲೂ ಬೆಂಕಿಕಡ್ಡಿ ಇಲ್ಲದ್ದು ನೋಡಿ ಮೈಮೇಲೆ ಸುರಿದುಕೊಂಡನಂತಲ್ಲಾ. ಒಂದು ವೇಳೆ ಯಾರಾದರೂ ಕಡ್ಡಿಗೀರಿದ್ದರೆ ಆ ಕೂಡಲೇ ಯಾರಿಗೂ ಸಿಕ್ಕದಂತೆ ಓಡಿ ಪಾರಾಗುತ್ತಿದ್ದನೆಂದು ವ್ರಣವಾನಂದನನ್ನು ಕಂಡರಾಗದ ಕುಹಕಿಗಳು ಆಡಿಕೊಳ್ಳುತ್ತಿದ್ದಾರಲ್ಲಾ, ಥೂತ್ತೇರಿ!

* * * *

ಬೆನ್ನಿ ಹಿನ್ ಎಂಬ ವಶೀಕರಣ ವಿದ್ಯೆಯ ಢೋಂಗಿ ಆಸಾಮಿ ಎದುರು ಸಿಕ್ಕವರ ಎದೆಗೇ ಕೈಹಾಕಿ ನೂಕಿ ಪವಾಡ ಮೆರೆಯುತ್ತಿದ್ದರೆ ನಮ್ಮ ಸಾಯಿಬಾಬಾ ಬೂದಿಯಿಂದಲೇ ಬಂದ ರೋಗವನ್ನೆಲ್ಲಾ ಗುಣಪಡಿಸುತ್ತಿರಲಿಲ್ಲವೆ. ಸದರಿ ಬೆನ್ನಿ ಹಿನ್ ಸ್ವಂತ ವಿಮಾನ ಹೊಂದಿದ್ದು ಸಾವಿರಾರು ಕೋಟಿ ರೂ.ಗಳ ಒಡೆಯನಾಗಿದ್ದಾನೆ ಎಂದು ಹುಬ್ಬೇರಿಸುವವರಿಗೆ ಉತ್ತರವಾಗಿ "ನಮ್ಮ ಸಾಯೀಬಾಬನೂ ಸಾವಿರಾರು ಕೋಟಿ ರೂ.ಗಳ ಒಡೆಯ. ಅಷ್ಟೇ ಏಕೆ, ಬಾಬಾ ಚಿನ್ನದ ಚಪ್ಪಲಿ ಧರಿಸುತ್ತಿದ್ದರು. ಅವರ ಕಮೋಡೂ ಕೂಡ ಚಿನ್ನದ್ದೇ ಆಗಿತ್ತು. ಯಾಕೆಂದರೆ ಆತ ಗಾಳಿಯಲ್ಲಿ ಕೈಬೀಸಿ ಚಿನ್ನದ ಸರ ಕೊಡುತ್ತಿದ್ದರು. ಚಿನ್ನದ ಉಂಗುರ, ನೆಕ್ಲೆಸ್ ಕೊಡುತ್ತಿದ್ದರು. ಇದರಿಂದ ಬಾಬಾನ ಇಡೀ ದೇಹವೇ ಚಿನ್ನಮಯವಾಗಿತ್ತು, ಆದ್ದರಿಂದ ಅವರ ಮೂತ್ರ ಚಿನ್ನದ ರಸವಾಗಿತ್ತು. ಅವರ ಮಲ ಚಿನ್ನದ ಪೀಸುಗಳಾಗಿ ಉದುರುತ್ತಿದ್ದರಿಂದ ದೇವಮಾನವ ಸಾಯಿಬಾಬಾನ ಕಮೋಡು ಕೂಡ ಚಿನ್ನದ್ದಾಗಿತ್ತು. ಆ ಢೋಂಗಿ ಬೆನ್ನಿಹಿನ್ ನಮ್ಮ ಬಾಬಾನಷ್ಟು ಶ್ರೀಮಂತರೆ ಹೇಳಿ" ಎಂದು ಬಾಬಾ ಭಕ್ತರು ಬೊಬ್ಬೆ ಹೊಡೆಯುತ್ತಿದ್ದಾರಂತಲ್ಲಾ, ಥೂತ್ತೇರಿ!!

* * * *

ಬೆನ್ನಿ ಹಿನ್, ಬೂದಿ ಬಾಬಾ, ವ್ರಣವಾನಂದ ಇತ್ಯಾದಿ ಸಾಮಾಜಿಕ ಸಮಸ್ಯೆಗಳ ಬಗ್ಗೆ ಹೆಚ್ಚು ಚರ್ಚೆ ನಡೆಯುತ್ತಿರಬೇಕಾದರೆ, ನಮ್ಮ ಚಿತ್ರದುರ್ಗದ ಕಟೀರಾನಂದ ಆಶ್ರಮದ ಶಿವಲಿಂಗಾನಂದ ಸ್ವಾಮೀಜಿಗಳು, "ಈಗ ಬದುಕಿದ್ದರೆ ಎಪ್ಪತ್ತು ವರ್ಷ ತುಂಬಿಸುತ್ತಿದ್ದ ಆದಿ ಚುಂಚನಗಿರಿ ಬಾಲಗಂಗಾಧರನಾಥರು ನಮ್ಮಲ್ಲಿನ ದುಷ್ಟ ಬುದ್ಧಿಯನ್ನು ಒದ್ದು ಓಡಿಸಿ ಉದ್ಧಾರ ಮಾಡಿದ ಮಹಾತ್ಮರು" ಎಂದಿದ್ದಾರಂತಲ್ಲಾ. ಹಾಗಿದ್ದರೆ ಶಿವಲಿಂಗಾನಂದರಲ್ಲಿದ್ದ ದುಷ್ಟ ಬುದ್ಧಿ ಯಾವುದು? ಅದು ದೂರ ಹೋದದ್ದು ಹೇಗೆ? ಎಂಬ ಗೊಂದಲದ ಪ್ರಶ್ನೆಗಳು ಉದ್ಭವಿಸಿವೆಯಂತಲ್ಲಾ. ಬಾಲಗಂಗಾಧರರು ಸ್ವಜಾತಿ ಬಡವರ ಭೂಮಿ ಕಿತ್ತುಕೊಂಡು, ಅಲ್ಲಿ ಬಹು ಮಹಡಿ ಕಟ್ಟಡ ಕಟ್ಟಿಸಿ, ಭೂಮಿ ಕಳೆದುಕೊಂಡ ಮಕ್ಕಳಿಗೆ ಪರಿಚಾರಕರ ಕೆಲಸ ಕೊಟ್ಟಿದ್ದರು. ಅವರನ್ನು ಪರ್ಮನೆಂಟು ಮಾಡಿ ಇಲ್ಲ ಗೌರವಯುತ ಸಂಬಳ ಕೊಡಿ ಎಂದು ಮುಷ್ಕರ ಮಾಡಿದ ಕಾರಣಕ್ಕೆ ಅವರನ್ನೆಲ್ಲಾ ಕೆಲಸದಿಂದಲೇ ವಜಾ ಮಾಡಿ ಅವರೆಲ್ಲಾ ಕೃಷಿ ಕಾರ್ಮಿಕರಾಗಿ ಹೋದರಂತಲ್ಲಾ, ಇಂತಹ ದುಷ್ಟ ಬುದ್ಧಿ ಹೊಂದಿದ್ದ ಬಾಲಗಂಗಾಧರರು ತಮ್ಮ ದುಷ್ಟ ಬುದ್ಧಿ ಸಂಹಾರ ಮಾಡಿದರೆಂದು ಹೇಳಿಕೊಂಡು ಕುಣಿಯುತ್ತಿರುವ ಶಿವಲಿಂಗಾನಂದರನ್ನು ನೋಡಿದ ಮುರುಘಾಮಠದ ಸಿಬ್ಬಂದಿ ಕೇಕೆ ಹಾಕಿ ನಕ್ಕರಂತಲ್ಲಾ, ಥೂತ್ತೇರಿ!

* * * *

ಈ ಹಾಳು ಪಾರಮಾರ್ಥಿಕ ಜೀವಿಗಳ ಢೋಂಗಿ ಬದುಕಿನ ಮಾತಂತಿರಲಿ, ರಾಜಕಾರಣಿಗಳ ಸುದ್ದಿ ಏನಾದರೂ ಕೇಳಲು ಸಹ್ಯವಾಗಿದೆಯೇ ಎಂದು ಇಣುಕಿದರೆ ಶ್ಯಾನೇ ಸ್ವಾರಸ್ಯವಾಗಿದೆಯಂತಲ್ಲಾ. ಬಿಜೆಪಿಯ ಬಾಣಲೆ ಕಂಡಕೂಡಲೇ ಅದಕ್ಕೆ ಜಿಗಿದು ಬಿಟ್ಟಿರುವ ಯಡೂರಪ್ಪ ಬಾಣಲೆಯಲ್ಲಿ ನಿಂತು ನೋಡಿದರೆ ಅವರನ್ನು ನೆಚ್ಚಿ ಹಿಂದೆ ಬಂದಿದ್ದ ಹಲವಾರು ಜನ ಹಿಂಬಾಲಕರು ಹಿಂದಗಲಿದ್ದೂ ಅಲ್ಲದೆ ಮುಖಂಡರನ್ನು ಅಗಲಿದ ತಬ್ಬಲಿ ಪಶುಗಳಂತೆ ಪರಿತಪಿಸುತ್ತಿವೆಯಂತಲ್ಲಾ. ಈ ದಿಕ್ಕು ತಪ್ಪಿದ ಜನರನ್ನ ಹಿಡಿದು ಮಾತನಾಡಿದರೆ "ಎಲ್ಲಿಗೆ ಹೋಗಬೇಕೆಂಬುದೇ ತಿಳಿಯುತ್ತಿಲ್ಲ, ಸದ್ಯ ಮನೆಗೆ ಹೋಗುತ್ತೇವೆ" ಎಂದು ದಿಕ್ಕು ಗಾಣದಂತಾಗಿದ್ದಾರಂತಲ್ಲಾ. ಇದೇ ಸಮಯದಲ್ಲಿ ನಮ್ಮ ಪ್ರೀತಿಯ ಕೂಗುಮಾರಕ್ಕ ಕಮಲದ ಹೂ ತೆಗೆದು ತಲೆಗೆ ಮುಡಿದುಕೊಳ್ಳುವ ಅಪೇಕ್ಷೆ ವ್ಯಕ್ತ ಮಾಡಿದ್ದಾರಂತಲ್ಲಾ. ಕೂಗುಮಾರಕ್ಕನ ವೀಕನೆಸ್ಸೇನೆಂದರೆ ಆಡಳಿತಪಕ್ಷದಲ್ಲಿದ್ದು ಕೊಂಡೂ ವಿರೋಧ ಪಕ್ಷದವರ ಕೋಣೆಯೊಳಕ್ಕೆ ಹೋಗಿ ರೊಟ್ಟಿ ತಿಂದು ಬರುವುದು, ಕಾಂಗ್ರೆಸಲ್ಲಿದ್ದುಕೊಂಡೇ ಜೆ.ಡಿ.ಎಸ್. ಮನೆಗೆ ನುಗ್ಗಿ ಮುದ್ದೆ ತಿಂದು ಬರುವುದು. ಇದನ್ನು ಕಂಡ ಡಿ.ಕೆ.ಸಿ. ಎಂಬ ಡಕಾಯತ "ನಿನಗೆ ಬೇಕಿದ್ದುದನ್ನು ಇಲ್ಲೇ ತಿನ್ನು. ಅದು ಬಿಟ್ಟು ನಮ್ಮ ವೈರಿಗಳ ಅಡುಗೆಕೋಣೆಯಲ್ಲಿ ಇನ್ನೊಮ್ಮೆ ಕಂಡರೆ ನಾನು ಸುಮ್ಮನಿರುವವನಲ್ಲ" ಎಂದನಂತಲ್ಲಾ. ಇದಕ್ಕೆ ಕೂಗಕ್ಕ ಮರುತ್ತರ ನೀಡಿ "ನಾನಿರುವಳಲ್ಲಾ" ಎಂದು ಹೊರಟಳು. ಕಾರಣವಾಗಿ ಈಗ ದಾರಿ ಸಿಕ್ಕದೆಯಂತಲ್ಲಾ. ಎಲ್ಲೇ ಹೋದರೂ "ನಾನು ಮಾಜಿ ಪ್ರಧಾನಿ ಸೋಲಿಸಿದ ಭಾವೀ ಪ್ರಧಾನಿ" ಎಂದು ಹೇಳುತ್ತಿದ್ದ ಕೂಗುಮಾರಕ್ಕ ಈಗ ಬಿ.ಜೆ.ಪಿಯ ಹಾಳು ಬಾವಿ ಹುಡುಕುತ್ತಿರುವುದು ಮನಕರಗಿಸುವಂತಿದೆಯಲ್ಲಾ, ಥೂತ್ತೇರಿ!

* * * *

ಮಾಜಿ ಪ್ರಧಾನಿಗಳಾದ ದೇವೇಗೌಡರು ದೆಹಲಿಯ ರಾಜಮಾರ್ಗದಲ್ಲಿ ವಿಹರಿಸುವುದನ್ನು ಬಿಟ್ಟು ಬರಗಾಲಕ್ಕೆ ತುತ್ತಾಗಿ ತತ್ತರಿಸುತ್ತಿರುವ ದತ್ತನ ಕಡೂರಲ್ಲಿ ಕಾಣಿಸಿಕೊಳ್ಳುತ್ತಿದ್ದಾರಂತಲ್ಲಾ. ಇದಲ್ಲವೆ ಮಣ್ಣಿನ ಮಗನ ಕೆಲಸ ಎಂದು ಮೆಚ್ಚುಗೆಯಾಗಿ ಫೋನು ಮಾಡಬೇಕೆನಿಸಿತು. ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ಶಿವಪ್ಪ ಕಾಯೋ ತಂದೆ ಮೂರು ಲೋಕ ಸ್ವಾಮಿ ದೇವ..."


"ಹಲೋ, ಯಾರು ಮಾತಾಡ್ತಯಿರೋದು?"

"ದತ್ತ ನಾನು, ಯಾಹು. ಅದೇನ್ರಿ ದತ್ತ ನಿಮ್ಮ ಗೋಳು?"

"ಕಡೂರಿಗೆ ಬರಗಾಲ ಬಂದಿದೆ. ಅದ್ಕೆ ನಮ್ಮದೆಲ್ಲಾ ಗೋಳು."

"ಅದಲ್ಲ ಕಂಡ್ರಿ, ಯಲಕ್ಷನಿಗೆ ಅಂತ ದುಡ್ಡನ್ನ ಈಸಿಕೊಂಡು ಈಗ ವಾಪಸ್ಸು ಕೊಡಬಾರದೇನ್ರಿ. ಅವ್ರುರೆಲ್ಲಾ ಪೊಲೀಸ್ ಕಂಪ್ಲೇಂಟ್ ಕೊಟ್ರೆ ಏನು ಮಾಡ್ತಿರಿ?"

"ಚುನಾವಣೆಗೆ ಅಂತ ಈಸಿಕೊಂಡ ದುಡ್ಡನ್ನ ವಾಪಸ್ಸು ಕೊಡೋದನ್ನ ನಾನೆಲ್ಲೂ ಕೇಳಿಲ್ಲ, ಆದ್ರು ನಾನು ಕೊಡ್ತಿನಿ. ಹೇಳಿಕೇಳಿ ನಮ್ಮದು ವಿರೋಧ ಪಕ್ಷ. ಆಡಳಿತ ಪಕ್ಷ ಆಗಿದ್ರೆ ಇಷ್ಟೊತ್ತಿಗೆ ತೀರುಸ್ತಿದ್ದೆ. ನಮ್ಮ ಪರಿಸ್ಥಿತಿನೂ ಸ್ವಲ್ಪ ಅರ್ಥ ಮಾಡಿಕೊಬೇಕು. ಅದ್ಯಾರು ನಿಮ್ಮವರು ಬಂದಿದ್ರೊ



ಅವರಿಗೆ ಸಮಾಧಾನ ಹೇಳಿ ಯಾಹು. ಈಗೇನಾಗಬೇಕೇಳಿ?"

"ಗೌಡ್ರಿಗೆ ಫೋನ್ ಕೊಡಿ."

"ನಮಸ್ಕಾರ ಯಾಹು ಅವರೆ."

"ನಮಸ್ಕಾರ ಸಾರ್. ಚೆನ್ನಾಗಿದ್ದೀರಾ?"

"ಏನು ಚಂದ ಹೇಳಿ. ನಮ್ಮ ದತ್ತನ ಕ್ಷೇತ್ರದಲ್ಲಿ ಬರಗಾಲ ಬಂದಿದೆ. ಕುಡಿಯೋಕು ನೀರಿಲ್ಲ, ಜನಗಳು ಬಹಳ ಪರಿತಪುಸ್ತಾ ಇದಾರೆ. ಇಂತಹ ಸಮಯದಲ್ಲಿ ಮೈಸೂರಿನ ಮಹಾ ನಾಯಕರು ಅಹಿಂದ ವರ್ಗದಿಂದ ಸನ್ಮಾನ ತಗೊಳ್ತಾಯಿದಾರೆ."

"ಅವರು ಅಧಿಕಾರಕ್ಕೆ ಬಂದಿದ್ದೇ ಅಹಿಂದ ವರ್ಗದಿಂದಂತಲ್ಲಾ ಸಾರ್."

"ಅದೆಲ್ಲಾ ಅವರ ಭ್ರಮೆ. ಆ ಭ್ರಮೆಯಿಂದ ಹೊರಬಂದು ಸರಿಯಾದ ರಾಜಕಾರಣ ಮಾಡದೆಯಿದ್ರೇ ಜನ ತಕ್ಕ ಪಾಠ ಕಲುಸ್ತರೇ."

"ಅವರದು ಇದೇ ಕೊನೇ ಚುನಾವಣೆಯಾದ್ರಿಂದ ಪಾಠ ಕಲಿಸಿದ್ರೆ ನನಗೇನು ಅಂತರೆ ಸಾರ್."

"ಆತ ಕೊನೇ ಚುನಾವಣೆ ಅನ್ನೋದು ಏಕೆ ಅಂತ ನನಿಗೂ ಗೊತ್ತು, ಆದ್ರೆ ಈ ದೇವೇಗೌಡ ಕೊನೆ ಉಸಿರಿರೊವರಿಗೂ ಚುನಾವಣೆಗೆ ಹೆದರಲ್ಲಾ, ರಾಜಕಾರಣಾನೂ ಬಿಡಲ್ಲ."

"ಸಾರ್, ನಿಮ್ಮ ರಾಜಕೀಯದ ಎದುರಾಳಿ ದೆಹಲಿ ಮಟ್ಟದ ರಾಜಕಾರಣಿಯಾಗಿರಬೇಕಿತ್ತು, ಉದಾಹರಣೆಗೆ ಅದ್ವಾನಿ, ರಾಜನಾಥಸಿಂಗ್ ಅಥವಾ ಮುಲಾಯಂ ಈ ತರ ರಾಷ್ಟ್ರಮಟ್ಟದ ರಾಜಕಾರಣಿ ವಿರುದ್ಧ ಹೋರಾಡದು ಬಿಟ್ಟು ಈ ರಾಜ್ಯದ ಅಹಿಂದ ನಾಯಕರ ವಿರುದ್ಧ ಹೋರಾಡ್ತಿರಲ್ಲಾ, ಸರೀನಾ ಸಾರ್?"

"ನೋಡಿ, ನನ್ನ ಪಾರ್ಟಿ ಎಲ್ಲಿ ಅಸ್ತಿತ್ವದಲ್ಲಿದೆ ಅಲ್ಲಿ ಹೋರಾಡೋದು ನನ್ನ ಧರ್ಮ. ಅದಕ್ಕೆ ವಿಶೇಷ ಅರ್ಥ ಕಲ್ಪಿಸೊ ಅಗತ್ಯ ಇಲ್ಲ."

"ಅಂದ್ರೆ ವೈರಿ ಇರೊ ಜಾಗದಲ್ಲಿ ಹೋರಾಡಬೇಕು ಅನ್ನಿ."

"ಹಾಗಲ್ಲ, ನನ್ನ ಕರ್ಮಭೂಮಿ ಇದು. ನನ್ನ ಜನ ನನ್ನನ್ನ ಮಂತ್ರಿ, ಮುಖ್ಯಮಂತ್ರಿ, ಪ್ರಧಾನಮಂತ್ರಿ ಮಾಡಿದಾರೆ. ಅವರ ಋಣ ತೀರಸೋದು ನನ್ನ ಧರ್ಮ. ಅದಕ್ಕೆ ನನ್ನ ಕಡೆ ಉಸಿರಿರೊವರಿಗೂ ಹೋರಾಡ್ತೀನಿ."

"ಆದ್ರು ನಿಮ್ಮ ವರ್ಚಸ್ಸು ಹೋಗಿದೆ ಸಾರ್."


"ಅದೇಗೇಳ್ತೀರಿ?"


"ನೀವು ಬಂದ್ರೆ ಭಾರಿ ಜನ ಸೇರತಿದ್ರು. ಈಗ ಹತ್ತು ಹದಿನೈದು ಜನ ಸೇರ್ತರೆ."

"ಅಷ್ಟೇ ಜನ ಸಾಕು ನನಗೆ. ನನ್ನ ಪಾರ್ಟಿ ಅಧಿಕಾರಕ್ಕೆ ತರ್ತಿನಿ."

"ಥೂತ್ತೇರಿ!!!"

ಆರೆಸ್ಸೆಸ್ ನಾಯಕರ ಮತ್ತೊಂದು ಮುಖ ಅನಾವರಣ...!





ಜನವರಿ 22ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಎ.ಕೆ. ಸುಬ್ಬಯ್ಯನವರ 'ಆರೆಸ್ಸೆಸ್ ಅಂತರಂಗ' ಎಂಬ ಲೇಖನವು ಸಂಘ ಪರಿವಾರ ಮುಖಂಡರ ಮುಖವಾಡವನ್ನು ಕಳಚಿಟ್ಟು ಅವರ ನೈತಿಕತೆ ಏನು? ಎತ್ತ? ಎಂಬುದನ್ನು ಮತ್ತೊಮ್ಮೆ ಸಂಕ್ಷಿಪ್ತವಾಗಿ ಅನಾವರಣ ಗೊಳಿಸಿದೆ. ಆರೆಸ್ಸೆಸ್‌ನವರು ಎಂದರೆ ದೇಶಭಕ್ತರು, ಸಂಸ್ಕಾರವಂತರು, ನಿಸ್ವಾರ್ಥ ಸೇವಕರು, ಶಿಸ್ತನ್ನು ಮೈಗೂಡಿಸಿಕೊಂಡವರು ಎಂದೆಲ್ಲಾ ನಂಬಿದ್ದ ಮುಗ್ಧ ಜನರಿಗೆ ಈ ಲೇಖನವು ಇವರೆಂಥ ಆಷಾಢಭೂತಿಗಳೆಂಬುದನ್ನು ಮನವರಿಕೆ ಮಾಡಿಕೊಟ್ಟಿದೆ.

80ರ ದಶಕದಲ್ಲಿ ಸಂಘಪರಿವಾರದವರು ಕೊಳಚೆ ಪ್ರದೇಶದ ಬಾಲಕರನ್ನು ತನ್ನತ್ತ ಸೆಳೆಯಲು ಸ್ಲಂಗಳಲ್ಲಿ ಲಗ್ಗೆ ಹಾಕಿ ಶಾಖೆಗಳನ್ನು ಪ್ರಾರಂಭಿಸಿದ್ದರು. (ಶಾಖೆ ಎಂದರೆ ಬಾಲಕರನ್ನು ಒಂದು ಕಡೆ ಸೇರಿಸಿ ಆಟಗಳನ್ನು ಆಡಿಸಿ, ಸಂಘದ ತತ್ವಸಿದ್ಧಾಂತಗಳನ್ನು ತಲೆಗೆ ತುಂಬುವುದು ಅಂದರೆ ಬ್ರೈನ್‌ವಾಷ್ ಮಾಡುವುದು). ಡಾ.ಜೀ ಮತ್ತು ಗುರೂಜೀ ಈ ಇಬ್ಬರೊಂದಿಗೆ ಇನ್ನೂ ಕೆಲವರ ಜೀವನ ಚರಿತ್ರೆಯನ್ನು ಕಂಠಪಾಠ ಮಾಡಿಸುವ ಮೂಲಕ ಮುಗ್ಧ ಬಾಲಕರ ತಲೆಗೆ ತುರುಕುತ್ತಿದ್ದರು. ಇವಿಷ್ಟು ಚಟುವಟಿಕೆಗಳನ್ನು ಬಿಟ್ಟರೆ ಜೀವನೋಪಾಯಕ್ಕೆಂದು ಏನನ್ನೂ ಕಲಿಸುತ್ತಿರಲಿಲ್ಲ.



ಇವರು ನಡೆಸುವ ಶಿಬಿರಗಳಲ್ಲಿ ಬಿಟ್ಟಿ ಚಾಕರಿ ಮಾಡಲು ಹುಡುಗರು ಬೇಕು. ಅದಕ್ಕೆ ಕೊಳಚೆ ಪ್ರದೇಶದ ಮಕ್ಕಳನ್ನು ಬಳಸಿಕೊಳ್ಳುತ್ತಾರೆ. ಈ ಚಾಕರಿ ಮಾಡುವವರಿಗೆ ಪ್ರಬಂಧಕರು ಎಂದು ಹೆಸರು ಕೊಡುತ್ತಾರೆ. ಕೊಳಚೆ ಪ್ರದೇಶದ ಮಕ್ಕಳು ಶಿಬಿರಗಳಲ್ಲಿ ಶೌಚಾಲಯ ಮೊದಲ್ಗೊಂಡು ಎಲ್ಲಾ ಚಾಕರಿಗಳನ್ನು ಮಾಡಬೇಕು. ಇನ್ನು ಜನಿವಾರ ಇಲ್ಲದಿದ್ದರೆ ಅಂಥವರ ಪಾಡು ನಾಯಿಪಾಡು.

ಮತ್ತೊಂದು ಉದಾಹರಣೆಯನ್ನು ಹೇಳಬೇಕೆಂದರೆ ಬೆಂಗಳೂರಿನ ಜನ ಚಿಕ್ಕಪೇಟೆಯ ಹೆಸರನ್ನು ಕೇಳಿಯೇ ಇರುತ್ತಾರೆ. ಈ ಕ್ಷೇತ್ರ ಕಿಷ್ಕಿಂಧೆಯು ಹೌದು, ಕೋಟ್ಯಾಂತರ ರೂಪಾಯಿಗಳ ವಹಿವಾಟು ನಡೆಯುವ ಪ್ರದೇಶವೂ ಹೌದು. ಉತ್ತರ ಭಾರತದ ಜನ ಹೆಚ್ಚಾಗಿದ್ದು, ಅವರಿಲ್ಲಿ ಅಂಗಡಿ ಮುಂಗಟ್ಟುಗಳನ್ನಿಟ್ಟುಕೊಂಡು ವ್ಯಾಪಾರ ಮಾಡುತ್ತಿರುತ್ತಾರೆ. ಸರ್ಕಾರಕ್ಕೆ, ಬಿಬಿಎಂಪಿಗೆ ಈ ಪ್ರದೇಶದಿಂದ ಹೆಚ್ಚಿನ ತೆರಿಗೆ ಸಂಗ್ರಹವಾಗುತ್ತದೆ ಎಂಬ ಮಾತು ಅಕ್ಷರಶಃ ನಿಜ. ಅದು ಹೇಗಾದರೂ ಇರಲಿ, ರುದ್ರಾಕ್ಷಿ ಬೆಕ್ಕನ್ನು ಇಲಿಗಳು ನಂಬುವಂತೆ, ಕಟುಕರನ್ನು ಕುರಿಗಳು ನಂಬುವಂತೆ ಈ ಉತ್ತರ ಭಾರತದ ಜನ ಆರೆಸ್ಸೆಸ್ ನಾಯಕರನ್ನು ನಂಬಿಕೊಂಡಿದ್ದಾರೆ. ಆರೆಸ್ಸೆಸ್, ಬಿಜೆಪಿ ಈ ಎರಡೂ ಒಂದೇ ನಾಣ್ಯದ ಎರಡು ಮುಖ ಎಂಬ ವಿಷಯ ಇಡೀ ಜಗತ್ತಿಗೇ ತಿಳಿದಿದೆ. ಆರೆಸ್ಸೆಸ್ ನಾಯಕರು ಸೂತ್ರಧಾರಿಗಳು, ಬಿಜೆಪಿ ನಾಯಕರು ಪಾತ್ರಧಾರಿಗಳು, ಇದೂ ಸಹ ತಿಳಿದಿರುವುದೇ.

ರಾಜ್ಯದಲ್ಲಿ ಬಿಜೆಪಿ ಅಧಿಕಾರದ ಗದ್ದುಗೆ ಹಿಡಿಯಲು ಈ ಮಾರ್ವಾಡಿಗಳ ಆರ್ಥಿಕ ಬೆಂಬಲವೂ ಮುಖ್ಯ ಕಾರಣ ಎಂಬುದು ಪ್ರಾಯಶಃ ಎಷ್ಟೋ ಜನರಿಗೆ ತಿಳಿದಿಲ್ಲ. ಇದೆಲ್ಲಾ ಪರೋಕ್ಷವಾಗಿ ನಡೆಯುವ ಚುನಾವಣಾ ವ್ಯವಹಾರಗಳು, ಇಷ್ಟು ದೊಡ್ಡ ಮೊತ್ತ ಇವರಿಗೆ ಎಲ್ಲಿಂದ ಬರುತ್ತವೆ ಎಂದರೆ ಅದೆಲ್ಲಾ ಸರ್ಕಾರಕ್ಕೆ ಟೋಪಿ ಹಾಕಿದ ತೆರಿಗೆ ಹಣಗಳು ಎನ್ನಬೇಕು. ಬಿಜೆಪಿ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಮಾರ್ವಾಡಿಗಳಂತೂ ಕುಣಿದು ಕುಪ್ಪಳಿಸಿದರು.


ಆದರೆ ಈ ಸಂತೋಷ ದೀರ್ಘಕಾಲ ಉಳಿಯಲಿಲ್ಲ. ಬಿಜೆಪಿ ನಾಯಕರು ಅದಕ್ಕೆ ತಿಲಾಂಜಲಿ ನೀಡಿದರು. ಗದ್ದುಗೆಯ ಬಾಲ ಹಿಡಿಯುವ ಸಲುವಾಗ ಕೆಲವು ಪ್ರಭಾವಿ ಸಚಿವರನ್ನು ತಮ್ಮ ತಮ್ಮ ಮನೆಗಳಿಗೆ (ಪ್ರತಿಷ್ಠೆಗಾಗಿ) ಈ ಮಾರ್ವಾಡಿಗಳು ಔತಣಕ್ಕೆ ಕರೆದಾಗ ಆರೆಸ್ಸೆಸ್ ನಾಯಕರು ಅದಕ್ಕೂ ಮಾರ್ವಾಡಿಗಳಿಂದ ಇಂತಿಷ್ಟು ಹಣ ನೀಡಬೇಕೆಂದು ಬೇಡಿಕೆ ಇಟ್ಟರು. ಈ ವಿಷಯ ಚಿಕ್ಕಪೇಟೆ ವ್ಯಾಪ್ತಿಯಲ್ಲಿ ರಹಸ್ಯವಲ್ಲ.

ಆರೆಸ್ಸೆಸ್‌ನಲ್ಲಿ ಗುಲಾಮಗಿರಿ ಚಾಕರಿ ಮಾಡಿದವರು ಇಂದು ಯಾವುದೇ ಕೆಲಸಕ್ಕೂ ಬಾರದೇ ಅತಂತ್ರ ಸ್ಥಿತಿಯಲ್ಲಿದ್ದಾರೆ. ಇವರು ಯಾವುದಾದರೂ ಕೈಕೆಲಸವನ್ನು ಕಲಿತಿದ್ದರೆ ಕುಟುಂಬಕ್ಕೆ ಆಧಾರವಾಗಿಯಾದರೂ ನಿಲ್ಲುತ್ತಿದ್ದರು. ಅಲ್ಲೂ ಸಲ್ಲದೆ, ಇಲ್ಲೂ ಸಲ್ಲದೆ ಈಗ ನಡುಬೀದಿಯಲ್ಲಿ ನಿಂತು ಪರಿತಪಿಸುತ್ತಿದ್ದಾರೆ. ಇನ್ನು ಬಿಜೆಪಿ ನಾಯಕರ ಉದ್ಧಾರಕ್ಕೆ ಹೆದ್ದಾರಿ ಹಾಕಿಕೊಟ್ಟ ನಿಷ್ಠಾವಂತ ಕಾರ್ಯಕರ್ತರು ಆಸ್ತಿ-ಪಾಸ್ತಿಗಳನ್ನು ಕಳೆದುಕೊಂಡು ಹೆಂಡತಿ ಮಕ್ಕಳಿಂದ ಛೀಮಾರಿ ಹಾಕಿಸಿಕೊಂಡು ಹಾಸಿಗೆ ಹಿಡಿದಿದ್ದಾರೆ. ಕಾರ್ಯಕರ್ತರನ್ನು ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಉತ್ತುಂಗಕ್ಕೇರಿದ ಈ ನಾಯಕ ಶಿಖಾಮಣಿಗಳು ಇಂದು ಅವರನ್ನು ಮಾತನಾಡಿಸುವುದಿರಲಿ, ಕಣ್ಣೆತ್ತಿಯೂ ನೋಡುವುದಿಲ್ಲ. 'ಊಟಕ್ಕೆ ಮರೆಬೇಡ, ಕಷ್ಟಕ್ಕೆ ಕರೆಯಬೇಡ' ಎಂಬುದೇ ಆರೆಸ್ಸೆಸ್/ಬಿಜೆಪಿ ನಾಯಕರ ಮತ್ತೊಂದು ಸತ್ಯವಾದ ಸಿದ್ಧಾಂತ.

ಆರೆಸ್ಸೆಸ್ ಎಂದರೆ ಬೇರೆಯಲ್ಲ, ಬಿಜೆಪಿ ಎಂದರೆ ಬೇರೆಯಿಲ್ಲ, ವೈದಿಕ ಸಂಪ್ರದಾಯಸ್ಥರು ಮಾತ್ರ ಇಲ್ಲಿ ಸಲ್ಲುತ್ತಾರೆ. ವೈಚಾರಿಕಾವಂತರನ್ನು ಇವರು ಹತ್ತಿರವೇ ಸೇರಿಸುವುದಿಲ್ಲ. ಆರೆಸ್ಸೆಸ್ ನಾಯಕರ ನಿಜವಾದ ಬಣ್ಣ ಏನೆಂದು ಬಯಲು ಮಾಡಿದ ಗೌರಿ ಲಂಕೇಶ್ ಪತ್ರಿಕೆಗೆ ಮತ್ತು ಲೇಖನದ ರೂವಾರಿ ಎ.ಕೆ. ಸುಬ್ಬಯ್ಯನವರಿಗೆ ವಂದನೆಗಳು.

- ಎಸ್. ಪ್ರಭಾಕರ್, ಬೆಂಗಳೂರು

ಅಭಿಷೇಕ್: ಟೆಕ್ಕಿಯೂ ಹೌದು, ಬಹುಮುಖಿ ಪ್ರತಿಭೆಯೂ ಹೌದು



'ತಮಸ್ಸು' ಚಿತ್ರದ ಮೂಲಕ ನಟನಾಗಿ, 'ಘರ್ಷಣೆ' ಹಾಗೂ 'ನಿರೆಲ್' (ತುಳು ಚಿತ್ರ) ಚಿತ್ರಗಳ ಮೂಲಕ ಸಂಗೀತ ನಿರ್ದೇಶಕರಾಗಿ, 'ಒಂದು ರುಪಾಯಲ್ಲಿ ಎರಡು ಪ್ರೀತಿ' ಚಿತ್ರದ ಮೂಲಕ ಗೀತಸಾಹಿತಿಯಾಗಿ, 'ಯೋಗರಾಜ್ but' ಚಿತ್ರದ ಮೂಲಕ ಚಿತ್ರಕಥಾರಚನಕಾರರಾಗಿ ತಮ್ಮನ್ನು ತೊಡಗಿಸಿಕೊಂಡ ಬಹುಮುಖಿ ಪ್ರತಿಭೆ ಅಭಿಷೇಕ್ ಎಸ್.ಎನ್. ಇಲ್ಲಿ ಮಾತಾಡಿದ್ದಾರೆ.

ಸಂದರ್ಶನ

** ನಿಮ್ಮ ಊರು, ಕುಟುಂಬ, ಶಿಕ್ಷಣ ಕುರಿತು ಹೇಳ್ತೀರಾ?*

ನಾನು ಹುಟ್ಟಿದ್ದು, ಬೆಳೆದಿದ್ದೆಲ್ಲಾ ಬೆಂಗಳೂರಿನಲ್ಲೇ. 2005 ರಲ್ಲಿ ಯುವಿಸಿಇ ಕಾಲೇಜ್‌ನಲ್ಲಿ ಎಂಜಿನಿಯರಿಂಗ್ ಮುಗಿಸಿದೆ. ಯೂನಿವರ್ಸಿಟಿಗೆ ನಾಲ್ಕನೇ ರ್‍ಯಾಂಕ್ ಕೂಡ ಪಡೆದುಕೊಂಡೆ. ಪಿಲಾಣಿಯಲ್ಲಿರುವ ಬಿಟ್ಸ್ ಸಂಸ್ಥೆಯಿಂದ ಎಂ.ಎಸ್ ಪದವಿ ಕೂಡ ಮುಗಿಸಿಕೊಂಡೆ. ಪ್ರಸ್ತುತ 'ಸಿಸ್ಕೋ ಸಿಸ್ಟಮ್ಸ್' ಎಂಬ ಎಂ.ಎನ್.ಸಿ ಕಂಪನಿಯಲ್ಲಿ ಮುಖ್ಯ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಉದ್ಯೋಗ ನಿರ್ವಹಿಸುತ್ತಿದ್ದೇನೆ.

** ನಿಮ್ಮೊಳಗೆ ಕಲೆಯೆಡೆಗಿನ ಆಸಕ್ತಿ ಯಾವ ವಯಸ್ಸಿನಲ್ಲಿ ಹುಟ್ಟಿಕೊಂಡಿತು? ಶಾಲಾದಿನಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸ್ತಿದ್ರಾ? ಆ ದಿನಗಳಲ್ಲಿ ನಿಮ್ಮ ಆಸಕ್ತಿ ಯಾವ ಕಲೆಯ ಕುರಿತದ್ದಾಗಿತ್ತು?*

ನನ್ನ ತಾಯಿ ಸರಸ್ವತಿಮೂರ್ತಿ ಶಾಸ್ತ್ರೀಯ ಸಂಗೀತ ಕಲಿತವರು. ಅವರ ಹಾಡುಗಾರಿಕೆಯನ್ನು ಚಿಕ್ಕ ವಯಸ್ಸಿನಿಂದ ಕೇಳಿಕೊಂಡು ಬೆಳೆದಿರುವುದರಿಂದ ನನಗೆ ಸಂಗೀತದ ಬಗ್ಗೆ ಒಂದಷ್ಟು ಒಲವು ಮುಂಚಿನಿಂದಲೂ ಇತ್ತು. ಆದರೆ ನನ್ನಷ್ಟಕ್ಕೆ ನಾನು ಹಾಡಿಕೊಳ್ಳುವ ಅಭ್ಯಾಸವಿತ್ತೇ ಹೊರತು ಶಾಲಾ–ಕಾಲೇಜುಗಳಲ್ಲಿ ಯಾವತ್ತು ಹಾಡು ಹೇಳಿರಲಿಲ್ಲ. ನನ್ನೊಳಗೊಬ್ಬ ಗಾಯಕ ಅಥವಾ ಗೀತರಚನಕಾರ ಇದ್ದಾನೆ ಅನ್ನುವುದು ನನ್ನ ಅರಿವಿಗೂ ಸಹ ಆಗ ಬಂದಿರಲಿಲ್ಲ.

** ಚಿತ್ರರಂಗದತ್ತ ಆಸಕ್ತಿ ಕೆರಳಿದ್ದು ಯಾವಾಗ? ಚಿತ್ರರಂಗಕ್ಕೆ ಯಾರ ಮೂಲಕ ಬಂದ್ರಿ?*

ಕಾಲೇಜು ಮುಗಿದನಂತರ ನನ್ನ ಹೆಂಡತಿಗಾಗಿ ನಾನು ಬರೆದು ಸಂಗೀತ ನೀಡಿದ ಕೆಲವೊಂದಿಷ್ಟು ಹಾಡುಗಳನ್ನ ಹಾಗೇ ಗೆಳೆಯರಲ್ಲಿ ಹಂಚಿಕೊಂಡೆ. ಆಗ ಅವರೆಲ್ಲ ನೀಡಿದ ಅಭಿಪ್ರಾಯಗಳು ನನ್ನ ಆತ್ಮವಿಶ್ವಾಸ ಹೆಚ್ಚಿಸಿದವು. ಅದೇ ಸಮಯದಲ್ಲಿ ನನ್ನ ಬ್ಲಾಗ್‌ನಲ್ಲಿ ಸಾಕಷ್ಟು ಕಥೆಗಳನ್ನ ಬರೆಯುತಿದ್ದೆ. ಚಿತ್ರನಿರ್ದೇಶಕ ದಯಾಳ್ ಪದ್ಮನಾಭನ್ ಅವರು ಅವನ್ನೆಲ್ಲ ಓದಿ 'ಶ್ರೀಹರಿಕಥೆ' ಚಿತ್ರಕ್ಕೆ ಚಿತ್ರಕಥೆ ರಚಿಸುವ ಚರ್ಚೆಗಳಲ್ಲಿ ನನಗೆ ಪಾಲ್ಗೊಳ್ಳಲು ಅವಕಾಶ ಮಾಡಿಕೊಟ್ಟರು. ಅಲ್ಲಿಂದಾಚೆಗೆ ನನಗೆ ಚಿತ್ರಕಥೆ, ಸಂಭಾಷಣೆ ಬರೆಯೋ ಆಸಕ್ತಿ ಕೂಡ ಹೆಚ್ಚಾಯ್ತು. ಅಲ್ಲಿಂದ 'ಯೋಗರಾಜ್ but', 'ಒಂದು ರೂಪಾಯಲ್ಲಿ ಎರಡು ಪ್ರೀತಿ' ಇನ್ನಿತರ ಚಿತ್ರಗಳಿಗೆ ಚಿತ್ರಕಥೆ ಹಾಗು ಸಂಭಾಷಣೆಗಳನ್ನು ಬರೆಯೋ ಅವಕಾಶವನ್ನು ದಯಾಳ್ ಅವರೇ ಮಾಡಿಕೊಟ್ಟರು.

** ನೀವು ಅಭಿನಯಿಸಿದ ಚಿತ್ರಗಳು ಯಾವುವು?*

ಅಭಿನಯದ ಬಗ್ಗೆ ನನಗೆ ಆಸಕ್ತಿ ಇದ್ದರೂ ಕೂಡ ಸಿಸ್ಕೋ ಸಿಸ್ಟೆಮ್ಸ್ ಕಂಪನಿಯಲ್ಲಿ ಕೆಲಸ ನಿರ್ವಹಿಸುವುದರಿಂದ ಅವಕಾಶ ಸಿಕ್ಕ ಚಿತ್ರಗಳಲ್ಲೆಲ್ಲಾ ಅಭಿನಯಿಸಲು ಸಮಯ ಹೊಂದಿಸಲು ಸಾಧ್ಯವಾಗುತ್ತಿಲ್ಲ. ಒಂದೆರಡು ಧಾರಾವಾಹಿ ಬಿಟ್ಟರೆ 'ತಮಸ್ಸು' ಚಿತ್ರದಲ್ಲಿ ಶಿವಣ್ಣ ಅವರ ಜೊತೆ ಒಂದೊಳ್ಳೆ ಪಾತ್ರದಲ್ಲಿ ಅಭಿನಯಿಸಿದ್ದೀನಷ್ಟೇ.

** ನೀವು. ಸಾಹಿತ್ಯವನ್ನು ಬರೀತೀರಿ, ಅದರ ಬಗ್ಗೆ ಹೇಳಿ; ಯಾರು ಸ್ಫೂರ್ತಿ? ಯಾವ ಯಾವ ಸಾಹಿತಿಯ ಕೃತಿಗಳನ್ನು ಓದಿಕೊಂಡಿದ್ದೀರಾ?*


ಹಂಸಲೇಖಾರ ಸಾಹಿತ್ಯವೆಂದರೆ ಮುಂಚಿನಿಂದಲೂ ನನಗೆ ಅಪಾರ ಅಭಿಮಾನ. ಕಳೆದ ಐದಾರು ವರುಷಗಳಿಂದ ಕವನಗಳನ್ನು ಬರೆಯುತ್ತಿದ್ದೆ. ಆದಕಾರಣ, ಸಿನಿಮಾಗಳಿಗೆ ಸಾಹಿತ್ಯ ಬರೆಯುವುದು ಅಷ್ಟೇನೂ ಕಷ್ಟ ಎನಿಸಲಿಲ್ಲ. ಕವನಗಳಿಗೆ ನನ್ನ ಭಾವನೆಗಳೇ ಸ್ಫೂರ್ತಿಯಾದರೆ, ಚಿತ್ರಸಾಹಿತ್ಯಕ್ಕೆ ನಿರ್ದೇಶಕ ಸೃಷ್ಟಿಸುವ ಪಾತ್ರ, ಸನ್ನಿವೇಶಗಳೇ ಸ್ಫೂರ್ತಿಯಾಗಿರುತ್ತದೆ. ನಾನು ಬರೆದ ಮೊದಲ ಸಿನಿಮಾ ಹಾಡೆಂದರೆ 'ಒಂದು ರುಪಾಯಿಯಲ್ಲಿ ಎರಡು ಪ್ರೀತಿ' ಚಿತ್ರದ 'ಯಾವುದೇ ಸಂಬಂಧ ಬೇಕಿಲ್ಲ' ಎನ್ನುವ ಹಾಡು. ಇದನ್ನ ವಿಜಯ್ ರಾಘವೇಂದ್ರ ಅವರೇ ಹಾಡಿದರು ಅನ್ನೋದು ನನಗೆ ತುಂಬ ಖುಷಿಯ ವಿಚಾರ. 'ಒಂದು ರುಪಾಯಲ್ಲಿ ಎರಡು ಪ್ರೀತಿ' ಚಿತ್ರಕ್ಕೆ ಒಟ್ಟು ಎರಡು ಹಾಡುಗಳು, 'ಘರ್ಷಣೆ' ಚಿತ್ರಕ್ಕೆ ಎರಡು ಹಾಡುಗಳು. ಹಾಗೇನೆ, ನನ್ನದೇ ಸಂಗೀತ ನಿರ್ದೇಶನದ 'ನೆರಳಾಗಿ' ಮ್ಯೂಸಿಕ್ ಆಲ್ಬಮ್‌ಗಾಗಿ ಏಳು ಹಾಡುಗಳನ್ನು ಈವರೆಗೂ ಬರೆದಿದ್ದೇನೆ. ಈ ಆಲ್ಬಮ್‌ನಲ್ಲಿ ನಾನು ಐದು ಹಾಡುಗಳನ್ನು ಹಾಡಿದ್ದೇನೆ ಕೂಡ. ಈ ಆಲ್ಬಮ್ ಮೂಲಕ ಸಾಧನ ಸರ್ಗಮ್, ಐಶ್ವರ್ಯ ಮಜುಂದಾರ್ ಹಾಗು ಪ್ರಖ್ಯಾತ ಸಂಗೀತಗಾರರ ಜೊತೆ ಕೆಲಸ ಮಾಡುವ ಅವಕಾಶ ದೊರೆಕಿದ್ದು ಸಂತಸದ ವಿಚಾರ.

** ಯಾವುದಾದರು ಸಿನಿಮಾಗೆ ಸಂಗೀತ ಕೊಟ್ಟಿದ್ದೀರಾ? ಕೊಟ್ಟಿದ್ದರೆ ಆ ಅನುಭವ ಹಂಚಿಕೊಳ್ಳಿ. ಯಾವ ಯಾವ ಗಾಯಕರ ಹತ್ತಿರ ಹಾಡಿಸಿದ್ರಿ?*

ಹೌದು. ಈವರೆಗೂ ಎರಡು ಚಿತ್ರಗಳಿಗೆ ಸಂಗೀತ ನಿರ್ದೇಶಕನ ಜವಾಬ್ದಾರಿ ಹೊತ್ತಿದೇನೆ. ಸಂಗೀತ ನಿರ್ದೇಶಕನಾಗಿ ನನ್ನ ಮೊದಲ ಚಿತ್ರ 'ನಿರೆಲ್' ಎನ್ನುವ ತುಳು ಚಿತ್ರ. ಇದರ ಹಾಡುಗಳ ಸಿಡಿ ಆಗಲೇ ಬಿಡುಗಡೆಯಾಗಿದ್ದು ದಕ್ಷಿಣ ಕನ್ನಡದಲ್ಲಿ ಬಹಳ ಹೆಸರು ಮಾಡಿದೆ. 'ನಿರೆಲ್' ಫೆಬ್ರವರಿಯಲ್ಲಿ ತೆರೆಕಾಣಲಿದೆ. ಈ ತುಳು ಚಿತ್ರದಲ್ಲಿ ಒಟ್ಟು ಐದು ರೋಮ್ಯಾಂಟಿಕ್ ಮೆಲೋಡಿ ಹಾಡುಗಳಿದ್ದು ನಾನು ಕೂಡ ಒಂದು ಗೀತೆ ಹಾಡಿದ್ದೇನೆ. ಉಳಿದೆಲ್ಲ ಗಾಯಕರು ಮೊದಲ ಬಾರಿ ಹಾಡುತ್ತಿರುವವರು. ಉಳಿದಂತೆ, ಸಂಗೀತ ನಿರ್ದೇಶಕನಾಗಿ ನನ್ನ ಎರಡನೇ ಚಿತ್ರ ಮಾಲಾಶ್ರೀ ಅಭಿನಯದ 'ಘರ್ಷಣೆ'. ಇದು ಸಂಗೀತ ನಿರ್ದೇಶಕನಾಗಿ ನನ್ನ ಮೊದಲನೇ ಕನ್ನಡ ಚಿತ್ರವಾಗಿದ್ದು ಹಿನ್ನೆಲೆ ಸಂಗೀತಕ್ಕೆ ತುಂಬ ಪ್ರಾಮುಖ್ಯತೆ ಇರುವ ಥ್ರಿಲ್ಲರ್ ಚಿತ್ರ. ಇದರಲ್ಲಿ ನಾನು ಟೈಟಲ್ ಸಾಂಗ್ ಸೇರಿದಂತೆ ಎರಡು ಹಾಡುಗಳನ್ನ ರಚಿಸಿದ್ದೇನೆ. ಒಂದನ್ನು ನಾನೇ ಹಾಡಿದ್ದೇನೆ. ಮತ್ತೊಂದು ಹಾಡನ್ನು ಭರತ್ ಬಿ.ಜೆ. ಹಾಗು ಶಿಲ್ಪ ಮಧುಸೂದನ್ ಹಾಡಿದ್ದಾರೆ. ಚಿತ್ರ ಈಗಾಗಲೇ ಬಿಡುಗಡೆಯಾಗಿದ್ದು, ಚಿತ್ರದ ಹಿನ್ನೆಲೆ ಸಂಗೀತಕ್ಕೆ ಬಹಳಷ್ಟು ಕಡೆಯಿಂದ ಪ್ರಶಂಸೆ ವ್ಯಕ್ತವಾಗಿದೆ.

** ಸದಾ ಒಂದಿಲ್ಲೊಂದು ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿರುವ ನಿಮ್ಮ ಮುಂದಿನ ಯೋಜನೆಗಳೇನು?*


ಸಂಗೀತ, ಬರವಣಿಗೆ, ಅಭಿನಯದ ಜೊತೆಗೆ ನನ್ನ ಮತ್ತೊಂದು ಹವ್ಯಾಸವೆಂದರೆ ಛಾಯಾಗ್ರಹಣ (ಫೋಟೋಗ್ರಫಿ). ಇದೂ ಕೂಡ ಹವ್ಯಾಸವಾಗಿ ಶುರುವಾದದ್ದು ಈಗ ಕಮರ್ಷಿಯಲ್ ಫೋಟೋಶೂಟ್ಸ್ ಕೂಡ ಮಾಡುವಂಥ ಘಟ್ಟಕ್ಕೆ ತಲುಪಿದೆ. ಈ ಎಲ್ಲ ಕೆಲಸಗಳನ್ನು ನಾನು ನನ್ನ ಸಾಫ್ಟ್‌ವೇರ್ ಕಂಪನಿ ಕೆಲಸದೊಂದಿಗೆ ಕಷ್ಟಪಟ್ಟು, ಇಷ್ಟಪಟ್ಟು ನಿರ್ವಹಿಸಿಕೊಂಡು ಬರುತ್ತಿದ್ದೇನೆ. ಸಾಫ್ಟ್‌ವೇರ್ ಕಂಪನಿಯಿಂದ ಕೆಲಕಾಲ ದೂರವಿದ್ದು, ನಾನು ಬರೆದಿರುವ ಒಂದಷ್ಟು ಚಿತ್ರಕಥೆಗಳನ್ನು ನಾನೇ ನಿರ್ದೇಶಿಸುವ ಹುಮ್ಮಸ್ಸು ಕೂಡ ಹೊಂದಿದ್ದೇನೆ. ಅದಕ್ಕಾಗಿ ತಯಾರಿಗಳು ನಡೆಯುತ್ತಿವೆ. ಜೊತೆಗೆ ಬೇರೆ ಬೇರೆ ಚಿತ್ರಗಳಿಗೂ ಸಂಗೀತ ನೀಡುವ, ಸಾಹಿತ್ಯ ಬರೆಯುವ ಅಭಿಲಾಷೆಯನ್ನೂ ಹೊಂದಿದ್ದೇನೆ.



ಸಂದರ್ಶಕ: ಹೃದಯಶಿವ

...ದು ಸಹನಶೀಲ ಸಂಸ್ಕೃತಿಯಲ್ಲ





...ಕೊಡಗಿನ ಮಡಿಕೇರಿಯಲ್ಲಿ ನಡೆದ ಅಖಿಲ ...ರತ 80ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ...ವು ದಿನಗಳ ಹಿಂದೆ ಕೋ.ಚೆನ್ನಬಸಪ್ಪನವರ ...ಸ್ತಕದಲ್ಲಿ ಅವರು ಟಿಪ್ಪು ಸುಲ್ತಾನನ ಕುರಿತು ...ತಪಡಿಸಿದ ನಿಲುವುಗಳ ಕುರಿತು ಅವರು ...ಪ್ಪಿಕೊಂಡು ಕ್ಷಮೆ ಯಾಚಿಸಬೇಕೆಂದೂ ...ದಿದ್ದರೆ ಅವರನ್ನು ಕೊಡಗಿಗೆ ಕಾಲಿಡಲು ...ಡುವುದಿಲ್ಲ ಎಂದು ಬೆದರಿಕೆ ಹಾಕಲಾಗಿತ್ತು. ...ಸಮ್ಮೇಳನಾಧ್ಯಕ್ಷರಾದ ನಾ. ಡಿಸೋಜರವರು ...ೂರಿ ರಂಗನ್ ವರದಿಯನ್ನು ಬೆಂಬಲಿಸುತ್ತಿ...ವುದರಿಂದ ಅವರು ಕ್ಷಮೆ ಕೋರಬೇಕೆಂದು ...ಡಗಿನ ಇಬ್ಬರು ಶಾಸಕರು ಆಗ್ರಹಿಸಿದರು. ...ಮ್ಮೇಳನ ನಡೆಯುತ್ತಿರುವಾಗಲೇ ಕೆಲವರು ...ದಿಕೆಯನ್ನೇರಿ ಗಲಭೆ ನಡೆಸಿ ಅವರು ಕ್ಷಮೆ ...ೇರ ಬೇಕೆಂದು ವಾದಿಸಿದರು.


...ಟಿಪ್ಪು ಸುಲ್ತಾನನ ಚಾರಿತ್ರಿಕ ಪಾತ್ರ ಮತ್ತು ಕಸ್ತೂರಿ ...ಗನ್ ವರದಿಯ ಕುರಿತು ವೈಚಾರಿಕ ಭಿನ್ನಮತವಿರುವುದು ...ಜ. ಇಂಥ ವಿಷಯಗಳ ಕುರಿತು ಗೌರವಯುತ, ...ೋಗ್ಯಪೂರ್ಣ ಚರ್ಚೆಗಳಿಗೆ ಸಾಹಿತ್ಯ ಸಮ್ಮೇಳನದಂಥ ...ದಿಕೆಗಳು ಅವಕಾಶ ಒದಗಿಸಬಹುದು. ಆದರೆ ದಬ್ಬಾಳಿಕೆ ... ಮತ್ತು ಧಮಕಿ ಹಾಕುವ ಮೂಲಕ ದೊಡ್ಡ ಗಂಟಲಿನ ...ರಿಕೆ ಮತ್ತು ಬೀದಿ ರಂಪಗಳ ಮೂಲಕ ತಮ್ಮ ...ುವುಗಳೇ ಅಂತಿಮ ಸತ್ಯ; ಇದನ್ನು ಒಪ್ಪದವರು ತಪ್ಪೊಪ್ಪಿ...ಂಡು ತಮ್ಮ ಕ್ಷಮೆ ಕೋರಬೇಕೆನ್ನುವುದು ಧೂರ್ತತನ. ... ಈ ರೀತಿ ಗಲಭೆ ನಡೆಸಿದವರು ಈ ನಾಡಿನ ...ಹನಶೀಲ ಸಂಸ್ಕೃತಿಯ ಪ್ರತಿನಿಧಿಗಳಲ್ಲ, ಅಂಥವರಿಗೆ ಈ ...ದ ಬಹುಸಂಖ್ಯಾತರ ಬೆಂಬಲವೂ ಇಲ್ಲ ಎನ್ನುವುದು ...ಡಗಿನ ಸಾಮಾನ್ಯ ಪ್ರಜೆಯಾದ ನನ್ನ ಅಭಿಪ್ರಾಯ.

- ಐ.ಆರ್. ಪ್ರಮೋದ್, ವಕೀಲರು, ವಿರಾಜಪೇಟೆ

...ೊಮ್ಮನ್ ಭಟ್ಟನ ದೇಶಪ್ರೇಮ ನಾಟಕ

...ಬಂದರಿಗೆ ಹೋಗುವಾಗಲೂ ಜರ್ಮನ್ ಸಮೇತ ...ಗುವ ಪುಕ್ಕಲ ಕಲ್ಲಡ್ಕ ಭಟ್ಟ ತಾನು ಸಾವರ್ಕರ್, ...ತ್ ಸಿಂಗ್, ಆಜಾದ್ ತರಹದವನು ಎಂದು ...ಕೊಂಡು ತಿರುಗುತ್ತಿದ್ದಾನೆ. ದೇಶಕ್ಕಾಗಿ ಪ್ರಾಣತ್ಯಾಗಕ್ಕೂ, ... ದೇಶಕ್ಕಾಗಿ ನನ್ನ ಬಲಿದಾನವಾಗುವುದಾದರೆ ಅದೇ ...ಭಾಗ್ಯ ಎಂದು ಟಿವಿ ಮುಂದೆ ಹಾಸ್ಯಾಸ್ಪದವಾಗಿ ...ಬಿಡಲಿದ್ದಾನೆ. ತನ್ನ ಹೆಂಡತಿ ಭಟ್ಟನಿಯಿಂದಲೂ ಕತ್ತಿ ಚೂರಿಯ ಮಾತುಗಳನ್ನು ಸಭೆಯಲ್ಲಿ ಮಹಿಳೆಯರ ಮುಂದೆ ಹೇಳಿಸಿದ್ದಾನೆ. ಕರಾವಳಿಗೆ ಬೆಂಕಿ ಹಚ್ಚುವುದರಲ್ಲೇ ವಿಕೃತ ಸುಖ ಕಾಣುವ ಈ ಪುಕ್ಕಲ ಬೊಮ್ಮನ್ ಭಟ್ಟನನ್ನು ಒದ್ದು ಒಳಹಾಕಲು ಪೊಲೀಸರು ಹಾಗು ಸ್ಥಳೀಯರು ಯಾವತ್ತಿಗೂ ಸನ್ನದ್ಧರೇ. ಆದರೆ ಈತ ಹುಟ್ಟುಹಾಕಿದ ಮತಾಂಧತೆಯ ಅಮಲು ಹಚ್ಚಿಕೊಂಡ ಪುಂಡರ ಪಡೆ ಹಾಗು ಅದನ್ನು ಬೇಕಾದಂತೆ ನಿಯಂತ್ರಿಸಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಹಿಂದುತ್ವದ ದೊಡ್ಡ ತಲೆಗಳು ಎಸಗಬಹುದಾದ ಅನಾಹುತದ ಭಯಕ್ಕಷ್ಟೇ ಭಟ್ಟ ಸೇಫ್ ಆಗಿದ್ದಾನೆ.

ಮಂಗಳೂರಿನ ದೇರಳಕಟ್ಟೆ ಪ್ರಕರಣವನ್ನು ಮುಂದಿಟ್ಟು ಕೊಂಡು ವಜ್ರದೇಹಿ ಸ್ವಾಮಿ ಎಂಬ ಶೂದ್ರ ಭಂಟ ಹಾಗು ಬೊಮ್ಮನ್ ಕಲ್ಲಡ್ಕ ಭಟ್ಟ ಮುಂದಿನ ಸಂಸತ್ ಚುನಾವಣೆಗೆ ಸ್ಕೆಚ್ ಹಾಕಿದ್ದಾರೆ. ಅದಕ್ಕೆ ಸರಿಯಾಗಿ ಪಕ್ಕದ ಉಡುಪಿಯಲ್ಲಿ ಯುವ ಜೋಡಿಯ ಫೇಸ್ ಬುಕ್ ಕಥೆ ಈ ಕಟಡ ಮನುಷ್ಯರಿಗೆ ಮೃಷ್ಟಾನ್ನವನ್ನೇ ಉಣಬಡಿಸಿದೆ.



ಕಳೆದ ಬಿಜೆಪಿ ಸರಕಾರದ ಭ್ರಷ್ಟತೆ ಮತ್ತು ಅನೈತಿಕತೆಯ ಕುರಿತು ಜನರ ಹೇಸಿಗೆ ಮನೋಭಾವನೇ ಕಾಂಗ್ರೆಸ್ ಅನ್ನು ಗೆಲ್ಲಿಸಿತ್ತು. ಆದರೆ ಗೆದ್ದ ಕಾಂಗ್ರೆಸ್ ಇನ್ನೂ ನಿದ್ದೆಗಣ್ಣಿನಲ್ಲಿದೆ. ಆದರೆ ಅಧಿಕಾರ ಕಳೆದುಕೊಂಡ ಬಿಜೆಪಿಗಳು ಸೂಲಿಬೆಲೆಯಂತಹನನ್ನು ಮುಂದಿಟ್ಟುಕೊಂಡು ಕರಾವಳಿ ಯಲ್ಲಿ ಯಾವತ್ತೋ ತನ್ನ ಪ್ರಚಾರವನ್ನು ತಿಂಗಳುಗಳ ಹಿಂದೆಯೇ ಪ್ರಾರಂಭಿಸಿದೆ. (ಮಲ್ಪೆಯ ಅಟಲ್ ಜನ್ಮದಿವಸ ಆಚರಣೆ, ಗುರುಪುರದ ಕಾರ್ಯಕ್ರಮ, ಬ್ಯಾನರ್ ಭಾಷಣ ಮೂಲಕ ಮೋದಿ ಅಭಿಯಾನ, ವಿವೇಕಾನಂದರ 150ನೇ ವರ್ಷಾಚರಣೆ ಇತ್ಯಾದಿ)

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಏನೆಂದರೆ ಅತ್ಯಂತ ಹೆಚ್ಚಿರುವ ವಿದ್ಯಾರ್ಥಿ ಹಾಗು ಯುವಪೀಳಿಗೆಯ ಓಟಿನ ಮೇಲೆ ಕಣ್ಣಿಟ್ಟುಕೊಂಡು ವಿದ್ಯಾರ್ಥಿಗಳಿಗೆ ಸಂಬಂಧಿಸಿದ ದೇರಳಕಟ್ಟೆ ಹಾಗು ಉಡುಪಿ ಪ್ರಕರಣಗಳಿಗೆ 'ಲವ್ ಜಿಹಾದ್' ಎಂಬ ಕಪೋಲಕಲ್ಪಿತ ಕತೆಯನ್ನು ಭಟ್ಟನ ಗ್ಯಾಂಗ್ ಕಟ್ಟಿರುವುದು. ತಮಾಷೆಯ ಸಂಗತಿ ಯಾವುದೆಂದರೆ ದೇರಳಕಟ್ಟೆ ಪ್ರಕರಣದಲ್ಲಿ ಸಂತ್ರಸ್ತರ ನೆರವಿಗೆ ಧಾವಿಸಿದವರು ಬಲಪಂಥೀಯರನ್ನು ವಿರೋಧಿಸುವ ವಿಚಾರವಾದಿ ನರೇಂದ್ರ ನಾಯಕ್ ದಂಪತಿಗಳು. ಆದರೆ ಅದನ್ನು ತಮ್ಮ ಬೇಳೆ ಬೇಯಿಸಿಕೊಳ್ಳಲು ದುರುಪಯೋಗ ಪಡಿಸಿಕೊಳ್ಳುತ್ತಿರುವವರು ಮಾತ್ರ ಕಲ್ಲಡ್ಕ ಭಟ್ಟನ ಪಡೆ.

ನರೇಂದ್ರ ನಾಯಕರು ಕಾಳಜಿಯಿಂದ ನಿರ್ವಹಿಸಿದ ದೇರಳಕಟ್ಟೆ ಪ್ರಕರಣವನ್ನು ತಮ್ಮ ಲಾಭಕ್ಕಾಗಿ ಹೈಜಾಕ್ ಮಾಡಿ ದುರುಪಯೋಗ ಪಡಿಸಿಕೊಳ್ಳುತ್ತಿರುವ ಕಲ್ಲಡ್ಕ ಭಟ್ಟನ ಪಡೆ ಈ ಹಿಂದೆ ಹಿಂದೂ ಯುವತಿಯರ ಮೇಲೆ ಅನ್ಯಾಯವಾಗಿದ್ದಾಗ ಯಾಕಿಷ್ಟು ಕಾಳಜಿಯನ್ನು ತೋರಿಸಲಿಲ್ಲ? ಸೌಜನ್ಯಾ ಪ್ರಕರಣದ ವಿರುದ್ಧ ಕೆಲವರು ಧ್ವನಿಯೆತ್ತಿದಾಗ ಯಾಕೆ ಈ ಭಟ್ಟ ತೆಪ್ಪಗಿದ್ದ? ಅಂದಹಾಗೆ ಇತ್ತೀಚೆಗೆ ಹಿಂದೂವಾದಿಗಳ ರಾಷ್ಟ್ರೀಯ ನಾಯಕ ಪ್ರವೀಣ್ ತೊಗಾಡಿಯಾ ಧರ್ಮಸ್ಥಳಕ್ಕೆ ಬಂದಿದ್ದಾಗ ಆತ ಅಮಾಯಕಿ ಸೌಜನ್ಯಾಳ ತಂದೆತಾಯಿಯ ಮನೆಗೆ ಭೇಟಿ ನೀಡಲಿಲ್ಲ, ಬದಲಾಗಿ ಖಾವಂದರನ್ನು ಭೇಟಿಯಾಗಿ ಹೋದ!

- ಅವಿನಾಶ್ ಎಂ ಎಸ್, ನೆಲ್ಲಿಕಾರು

ಝಾಕೀರ್ ನಾಯ್ಕ್ ಅವರನ್ನು ದಯವಿಟ್ಟು ಬೆನ್ನಿಹಿನ್ ನೊಂದಿಗೆ ಹೋಲಿಸಬೇಡಿ. ಯಾಕೆಂದರೆ ಝಾಕೀರ್ ನಾಯ್ಕ್ ಅವರು ಎಂದೂ ಹಿನ್‌ನಂತೆ ಪವಾಡ ಮಾಡುತ್ತೇನೆಂದು ಹೇಳಿ ಜನರಿಗೆ ಮೋಸ ಮಾಡಿಲ್ಲ, ಅವರು ಅವ್ಯವಹಾರದಲ್ಲಿ ತೊಡಗಿದ್ದಾರೆಂದೂ ಯಾರೂ ಆರೋಪಿಸಿಲ್ಲ.

ಸ್ವತಃ ವೈದ್ಯರಾದ ಝಾಕೀರ್ ನಾಯ್ಕ್ ಅವರು ಕುರಾನ್ ಅನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸುತ್ತಾರಷ್ಟೇ.

- ನಜೀರ್ ಹುಸೇನ್ ಹಳ್ಳಿ, ಈ ಮೇಲ್ ಮೂಲಕ

'ಜನಪರ ಕಾಳಜಿಯೂ ಸಮ್ಮೇಳನದ ಗೊಂದಲವೂ' ಎನ್ನುವ ವರದಿಗೆ ನನ್ನ ಪ್ರತಿಕ್ರಿಯೆ

1. ಈ ವರದಿಯಲ್ಲಿ ಸಮ್ಮೇಳನಾಧ್ಯಕ್ಷರ ಭಾಷಣಕ್ಕೆ ಚೀಟಿಯನ್ನು ನಾನು ಕಳುಹಿಸಿದೆ ಎನ್ನುವುದು ಸತ್ಯಕ್ಕೆ ದೂರವಾದ ಸಂಗತಿ. ಸಮ್ಮೇಳನಾಧ್ಯಕ್ಷರು ಭಾಷಣ ಮಾಡುತ್ತಿದ್ದಾಗ ನಾನು ಮುಖ್ಯಮಂತ್ರಿಯೊಂದಿಗೆ ಚರ್ಚಿಸುತ್ತಿದ್ದೆ. ಸಮ್ಮೇಳನಾಧ್ಯಕ್ಷರು ತಮ್ಮ ಭಾಷಣಕ್ಕಾಗಿ ಅಡಚಣೆಯಾಗುತ್ತಿದೆ ಎಂದು ಹೇಳಿದಾಗ ಗಾಬರಿಯಾದ ನಾನು ಕಾರ್ಯದರ್ಶಿಗಳನ್ನು ಕರೆದು ಯಾರು ಈ ಕೆಲಸ ಮಾಡುತ್ತಿದ್ದಾರೆ ವಿಚಾರಿಸಿ ಎಂದು ಹೇಳಿದೆ. ಅಲ್ಲದೆ ಸಮಾರೋಪ ಸಮಾರಂಭದಲ್ಲಿ ಈ ಘಟನೆಗಾಗಿ ಅಧ್ಯಕ್ಷರಲ್ಲಿ ಬೇಷರತ್ ಕ್ಷಮೆ ಯಾಚಿಸಿದೆ.

2. ರಾಜ್ಯದಲ್ಲಿ ನಾನು ಸರ್ವಾಧಿಕಾರಿಯಂತೆ ವರ್ತಿಸಿದೆ ಎನ್ನುವುದು ನನಗೆ ಅತ್ಯಂತ ನೋವು ತಂದಿದೆ. ಒಬ್ಬ ಸಾಮಾನ್ಯ ಕನ್ನಡದ ಪರಿಚಾರಕನಂತೆ ಎಲ್ಲರಲ್ಲೂ ಒಂದಾಗಿ ಕೆಲಸ ಮಾಡುತ್ತಿರುವ ನಾನು ಸರ್ವಾಧಿಕಾರಿಯಾಗಿ ಹೇಗೆ ವರ್ತಿಸಿದೆ ಎಂದು ಲೇಖಕರು ತಿಳಿಸಿದರೆ ನನಗೆ ಮಾರ್ಗದರ್ಶನ ಮಾಡಿದಂತಾಗುತ್ತದೆ. ಪರಿಷತ್ತಿನಲ್ಲಿ ಸಾಮಾಜಿಕ ನ್ಯಾಯವನ್ನು ತರಲು ಜಾತ್ಯತೀತ ಮನೋಭಾವದಿಂದ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವುದು ಸರ್ವಾಧಿಕಾರಿ ತನವೇ? ಒಂದಂತೂ ನಿಜ, ಯಾವುದೇ ಕೆಲಸವಾಗಬೇಕಾದರೆ ಹೆಡ್‌ಮಾಸ್ಟರ್‌ನಂತೆ ವರ್ತಿಸುವುದು ನಾನು ರೂಢಿಮಾಡಿಕೊಂಡ ಪದ್ಧತಿ.

3. ಚಂಪಾ ಅವರು ನನ್ನ ಮಾತನ್ನು ತಪ್ಪಾಗಿ ಗ್ರಹಿಸಿ ನಾನು ಸಾಹಿತ್ಯ ಪರಿಷತ್ತಿನ ಬಾಗಿಲು ಮುಚ್ಚುತ್ತೇನೆ ಎಂಬ ರೀತಿಯಲ್ಲಿ ಹೇಳಿಕೆ ನೀಡಿದರೂ, ನಾನು ಹೇಳಿದ್ದು ನನ್ನ ಮನವಿಗೆ ಸರ್ಕಾರ ಸ್ಪಂದಿಸದಿದ್ದಲ್ಲಿ ಪರಿಷತ್ತಿನ ಬಾಗಿಲು ಹಾಕಿ ಆಮರಣಾಂತ ಮುಷ್ಕರ ಕುಳಿತುಕೊಳ್ಳುತ್ತೇನೆ ಎಂದಿದ್ದೆ. ಚಂಪಾರವರ ಶ್ರೀವರ್ಾಗ್ರಹ ಪೀಡಿತ ಮಾತುಗಳಿಂದ ನನಗೆ ಯಾವುದೇ ಬೇಸರವಾಗಿಲ್ಲ, ನನಗೆ ಅಹಂ ಇಲ್ಲದಿರುವುದರಿಂದ ನನ್ನ ಅಹಂ ಹೇಗೆ ತಾನೆ ಪೆಟ್ಟುಕೊಡಲು ಸಾಧ್ಯ.

ನನ್ನ ಅನಾರೋಗ್ಯದ ನಡುವೆಯೂ ಅನೇಕರ ಸಲಹೆ ಸೂಚನೆ ಪಡೆದು ಪ್ರಾಮಾಣಿಕವಾಗಿ ಪರಿಷತ್ತನ್ನು ನಡೆಸುತ್ತಿರುವ ನನಗೆ ಅನವಶ್ಯಕವಾದ ನನ್ನ ಟೀಕೆಗಳು ನೋವು ತಂದಿದೆ. ಇನ್ನು ಮುಂದೆ ವಾಸ್ತವ ಸಂಗತಿಗಳನ್ನು ಪರಿಶೀಲಿಸಿದರೆ ಒಳ್ಳೆಯದು.

- ಪುಂಡಲೀಕ ಹಾಲಂಬಿ, ಅಧ್ಯಕ್ಷರು,
ಕನ್ನಡ ಸಾಹಿತ್ಯ ಪರಿಷತ್ತು

ನಿಮ್ಮ ಪ್ರತಿಕ್ರಿಯೆಗಳನ್ನು lankesh70@rediffmail.com ಗೆ ಕಳುಹಿಸಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸುವುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸುವುದು.



ಎರಿಕಾ...ಐರಾವತ ತನಕ

ಪುನೀತ್ ರಾಜಕುಮಾರ್ ಜೊತೆ 'ನಿನ್ನಿಂದಲೇ' ಚಿತ್ರದಲ್ಲಿ ನಟಿಸಿರುವ ಎರಿಕಾ ಫರ್ನಾಂಡಿಸ್ ದರ್ಶನ್ ನಾಯಕ ನಟರಾಗಿ ಅಭಿನಯಿಸುತ್ತಿರುವ 'ಐರಾವತ' ಚಿತ್ರಕ್ಕೂ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. ದರ್ಶನ್ ಹುಟ್ಟುಹಬ್ಬದ ಪ್ರಯುಕ್ತ ಫೆಬ್ರವರಿ ಹದಿನಾರರಂದು ಆರಂಭವಾಗಲಿರುವ ಈ ಚಿತ್ರಕ್ಕೆ ಈ ಮೊದಲು 'ಅಂಬಾರಿ', 'ಅದ್ದೂರಿ' ಚಿತ್ರಗಳನ್ನು ನಿರ್ದೇಶಿಸಿದ್ದ ಎ.ಪಿ. ಅರ್ಜುನ್ ನಿರ್ದೇಶಕ. 'ಐರಾವತ' ಚಿತ್ರದ ಮುಹೂರ್ತ ದರ್ಶನ್ ಇಚ್ಛೆಯಂತೆ ಕಂಠೀರವ ಸ್ಟುಡಿಯೋದಲ್ಲಿ ನಡೆಯಲಿದೆಯಂತೆ. ಒಂದು ಕಾಲದಲ್ಲಿ 'ಮಣ್ಣಿನ ದೋಣಿ' ಸೇರಿದಂತೆ ಸಾಲು ಸಾಲು ಅಂಬರೀಶ್ ಚಿತ್ರಗಳನ್ನು ನಿರ್ಮಿಸಿದ್ದ ಮೈಸೂರಿನ 'ಸಂದೇಶ್ ದಿ ಪ್ರಿನ್ಸ್' ಹೋಟೆಲ್‌ನ ಮಾಲೀಕರಾದ ಸಂದೇಶ್ ನಾಗರಾಜ್ ಇದರ ನಿರ್ಮಾಪಕರು. ಈ ಚಿತ್ರದ ಛಾಯಾಗ್ರಹಣದ ಹೊಣೆಯನ್ನು ಸತ್ಯ ಹೆಗ್ಡೆ ಹೊರಲಿದ್ದು, ವಿ.ಹರಿಕೃಷ್ಣ ಹಾಡುಗಳನ್ನು ಮಾಡಿಕೊಡಲಿದ್ದಾರೆ.

ಸಿ.ಸಿ.ಎಲ್ ಸುಗ್ಗಿ ಶುರು

ಪ್ರತಿಷ್ಠಿತ ಸೆಲೆಬ್ರಿಟಿ ಕ್ರಿಕೆಟ್ ಲೀಗ್ ಜನವರಿ ಇಪ್ಪತ್ತೈದರಂದು ಮುಂಬಯಿಯಲ್ಲಿ ಶುರುವಾಗಲಿದ್ದು, ಮೊದಲ ಪಂದ್ಯ ಮುಂಬೈ ಹೀರೋಸ್ ಮತ್ತು ಚೆನ್ನೈ ರೈನೋಸ್ ನಡುವೆ ಮಧ್ಯಾಹ್ನ 3 ರಿಂದ ಸಂಜೆ 7 ರವರೆಗೆ ನಡೆಯಲಿದೆ. ಅದೇ ದಿನ ರಾತ್ರಿ 7 ರಿಂದ 11 ರ ನಡುವೆ ನಡೆಯಲಿರುವ ಪಂದ್ಯದಲ್ಲಿ ವೀರ ಮರಾಠಿ ಹಾಗೂ ಭೋಜ್ಪುರಿ ದಬಾಂಗ್ಸ್ ತಂಡಗಳು ಪರಸ್ಪರ ಮುಖಾಮುಖಿಯಾಗಲಿವೆ. ಹಾಗೇನೇ ಜನವರಿ 26 ರಂದು ಬೆಂಗಳೂರಿನಲ್ಲಿ ಮಧ್ಯಾಹ್ನ 3 ಗಂಟೆಗೆ ಶುರುವಾಗಲಿರುವ ಪಂದ್ಯದಲ್ಲಿ ಕೇರಳ ಸ್ಟ್ರೈಕರ್ಸ್ ಮತ್ತು ತೆಲುಗು ವಾರಿಯರ್ಸ್ ತಂಡಗಳು ಎದುರಾಗಲಿವೆ. ಅದೇ ದಿನ ಸಂಜೆ 7 ಗಂಟೆಗೆ ಆರಂಭವಾಗುವ ಪಂದ್ಯದಲ್ಲಿ ಕರ್ನಾಟಕ ಬುಲ್ಡೋಜರ್ಸ್ ತಂಡವು ಬೆಂಗಾಲ್ ಟೈಗರ್ಸ್ ವಿರುದ್ಧ ಸೆಣಸಲಿದೆ. ಉಳಿದಂತೆ, ಜನವರಿ 25 ರಿಂದ ಫೆಬ್ರವರಿ 23 ರ ನಡುವೆ ಜರುಗಲಿರುವ ಈ ಪಂದ್ಯಾವಳಿಯ ಪಂದ್ಯ ಗಳು ಮುಂಬಯಿ, ಬೆಂಗಳೂರು, ದುಬೈ, ಚೆನ್ನೈ, ಕಟಕ್, ಕೊಚ್ಚಿನ್, ಹೈದರಾಬಾದ್ ಹಾಗೂ ರಾಂಚಿಯಲ್ಲಿ ನಡೆಯಲಿವೆ.

ಲವ್ ಇನ್ ಮಂಡ್ಯ ಮುಕ್ತಾಯ



ನೀನಾಸಂ ಸತೀಶ್
ಸಿಂಧು ಲೋಕನಾಥ್


ಇನ್ನು ಒಂದೇ ಒಂದು ಹಾಡಿನ ಚಿತ್ರೀಕರಣ ಪೂರ್ತಿಯಾದರೆ ಅಲ್ಲಿಗೆ ಸತೀಶ್ ನೀನಾಸಂ ಅಭಿನಯದ 'ಲವ್ ಇನ್ ಮಂಡ್ಯ' ಚಿತ್ರದ ಚಿತ್ರೀಕರಣ ಪೂರ್ತಿಯಾದಂತಾಗುತ್ತದೆ. ಬಾಕಿ ಇರುವ ಆ ಹಾಡು ಸದ್ಯದಲ್ಲೇ ಚಿತ್ರೀಕರಣಗೊಳ್ಳಲಿದೆ. ಅರಸು ಅಂತಾರೆ ಎಂಬುವವರು ಈ ಮೊದಲು ಚಿತ್ರಸಾಹಿತಿಯಾಗಿದ್ದು ಈ ಚಿತ್ರದ ಮೂಲಕ ಮೊದಲ ಬಾರಿಗೆ ನಿರ್ದೇಶಕರಾಗುತ್ತಿದ್ದಾರೆ. ಈ ಚಿತ್ರಕ್ಕೆ ಬೆಂಗಳೂರು, ಮಂಡ್ಯ, ಕೃಷ್ಣಗಿರಿ, ಹೊಸೂರು ಸೇರಿದಂತೆ ಅನೇಕ ಕಡೆ ನಲವತ್ತೈದು ದಿನಗಳ ಕಾಲ - ಚಿತ್ರೀಕರಣ ನಡೆದಿದೆ ಎನ್ನಲಾಗಿದೆ. ಈ ಮೊದಲು 'ಬಚ್ಚನ್', 'ಕೃಷ್ಣನ್ ಲವ್ ಸ್ಟೋರಿ' ಹಾಗೂ 'ರಾವಣ' ಚಿತ್ರಗಳಿಗೆ ಬಂಡವಾಳ ಹಾಕಿದ್ದ ಉದಯ್ ಮೆಹ್ತಾ ಎಂಬುವವರು 'ಲವ್ ಇನ್ ಮಂಡ್ಯ' ಚಿತ್ರ ನಿರ್ಮಾಪಕರು. ಜನಾರ್ದನ ಮೂರ್ತಿ ಕ್ಯಾಮೆರಾ ಜವಾಬ್ದಾರಿ ನಿಭಾಯಿಸುತ್ತಿರುವ ಈ ಚಿತ್ರದ ಸಂಗೀತ ನಿರ್ದೇಶನದ ಹೊಣೆ ಅನೂಪ್ ಸೀಳೀನ್ ಎನ್ನುವವರದ್ದು.



ಯೋಗಿ ಟ್ವೆಂಟಿಫೈವ್-25

'ದುನಿಯಾ' ಚಿತ್ರದಲ್ಲಿ ಚಿಕ್ಕ ಪಾತ್ರದಲ್ಲೇ ತಮ್ಮ ವಿಶಿಷ್ಟ ಮ್ಯಾನರಿಸಂ, ಬಾಡಿ ಲಾಂಗ್ವೇಜ್, ಧ್ವನಿಯ ಮೂಲಕ ಗಮನ ಸೆಳೆದ ಲೂಸ್ ಮಾದ ಅಲಿಯಾಸ್ ಯೋಗೀಶ್ ಇವತ್ತು ಕನ್ನಡ ಚಿತ್ರರಂಗದ ಪ್ರಮುಖ ನಾಯಕನಟರ ಪೈಕಿ ಒಬ್ಬರು. ಯೋಗಿ ಹೀರೋ ಆಗಿ ನಟಿಸಿದ್ದ 'ನಂದ ಲವ್ಸ್ ನಂದಿತಾ' ಚಿತ್ರ ಒಂದು ರೇಂಜಿಗೆ ಕ್ಲಿಕ್ ಆಗಿದ್ದೇ ಯೋಗಿಗೂ ಒಂದು ವಿಶಿಷ್ಟ ಅಭಿಮಾನಿ ಬಳಗ ಹುಟ್ಟಿಕೊಂಡಿತು. ಆನಂತರ ಅವಕಾಶಗಳೂ ಒಂದೊಂದಾಗಿ ಯೋಗಿಯನ್ನು ಹುಡುಕಿಕೊಂಡು ಬರತೊಡಗಿದವು. ಆ ನಿಟ್ಟಿನಲ್ಲಿ 'ಅಂಬಾರಿ' ನೂರು ದಿನ ಓಡಿದರೆ, 'ಅಲೆಮಾರಿ' ಗಲ್ಲಾಪೆಟ್ಟಿಗೆ ತುಂಬದಿದ್ದರೂ ಯೋಗಿಗೆ ಒಳ್ಳೆ ಪ್ರಚಾರ ಕೊಡುವಲ್ಲಿ ಮೋಸ ಮಾಡಲಿಲ್ಲ. ಉಳಿದಂತೆ 'ಸಿದ್ಲಿಂಗು', 'ಕಾಲಾಯ ತಸ್ಮೈ ನಮಃ' ಒಂದಿಷ್ಟು ಸುದ್ದಿ ಮಾಡಿದ್ದು ಬಿಟ್ಟರೆ ಪುನೀತ್ ರಾಜಕುಮಾರ್, ಶ್ರೀನಗರ ಕಿಟ್ಟಿ ಜೊತೆ ನಟಿಸಿದ 'ಹುಡುಗರು' ಚಿತ್ರವಂತೂ ಯೋಗಿ ಪಾಲಿಗೆ ಪ್ಲಸ್ ಆಯಿತು ಅನ್ನಬಹುದು. ಈ 'ಡಾರ್ಲಿಂಗ್' ಕೂಡ ಸದ್ದು ಮಾಡುತ್ತಿದೆ. ಇಂಥ ಯೋಗಿ ಈಗ ತಮ್ಮ ಇಪ್ಪತ್ತೈದನೇ ಚಿತ್ರಕ್ಕೆ ರೆಡಿಯಾಗುತ್ತಿದ್ದಾರೆ. ಚಿತ್ರದ ಹೆಸರು 'ಓಬಿರಾಯ'. ಫೆಬ್ರವರಿಯಲ್ಲಿ ಲಾಂಚ್ ಆಗುತ್ತಿರುವ 'ಓಬಿರಾಯ'ನಿಗೆ ಆಲ್ಫಾ ಕ್ರಿಯೇಷನ್ಸ್ ಹಣ ಹೂಡುತ್ತಿದ್ದರೆ, ವಿವೇಕಾನಂದ ಎನ್ನುವವರು ಆಕ್ಷನ್ ಕಟ್ ಹೇಳಲಿದ್ದಾರೆ. ಅಂದಹಾಗೆ, ಬರೋಬ್ಬರಿ ಇಪ್ಪತ್ತೈದು ಚಿತ್ರಗಳ ಗಡಿಯನ್ನು ಮುಟ್ಟುತ್ತಿರುವ ಯೋಗಿಯ ವಯಸ್ಸೂ ಕೂಡ ಇಪ್ಪತ್ತೈದೇ!

ಪ್ರೇಮ್ ಹಾಡಿದಾಗ



ಹಿಂದೊಮ್ಮೆ ತಾವೇ ಅಭಿನಯಿಸಿದ್ದ 'ಸವಿಸವಿ ನೆನಪು' ಚಿತ್ರದ 'ಹಾಡು ಹಾಡು ಹಾಡು ನನ್ನೆದೆಯ ಹಾಡು' ಎನ್ನುವ ಹಾಡನ್ನು ಹಾಡಿದ್ದ ನಟ ಪ್ರೇಮ್ ಇತ್ತೀಚೆಗಷ್ಟೇ ರಾಜೇಶ್ ರಾಮನಾಥ್ ಸ್ಟುಡಿಯೋದಲ್ಲಿ 'ಬ್ರಿಂಗ್‌ಡೌನ್ ದಿ ಟಪಾಂಗುಚ್ಚಿ' ಎಂದು ಶುರುವಾಗುವ ಹಾಡನ್ನು 'ಯುವ ಸಾಮ್ರಾಟ್' ಎನ್ನುವ ಚಿತ್ರಕ್ಕಾಗಿ ಹಾಡಿದ್ದಾರೆ. ಪತ್ರಕರ್ತ ಕಂ ಚಿತ್ರನಿರ್ದೇಶಕ ನಂದಕುಮಾರ್ ಅವರ ಪತ್ನಿ, ಪತ್ರಕರ್ತೆ ವರಲಕ್ಷ್ಮಿ ನಂದಕುಮಾರ್ ಅವರು ನಿರ್ಮಿಸುತ್ತಿರುವ 'ಯುವ ಸಾಮ್ರಾಟ್' ಚಿತ್ರದ ಗೀತೆಯಿದು. ಈ ಚಿತ್ರದ ಮೂಲಕ ವರಲಕ್ಷ್ಮಿಯವರು ತಮ್ಮ ಮಗ ಕಿರಣ್ ಕುಮಾರ್‌ನನ್ನು ಹೀರೋ ಮಾಡುತ್ತಿದ್ದಾರೆ. ಇನ್ನೊಂದು ವಿಶೇಷವೆಂದರೆ 'ಯುವ ಸಾಮ್ರಾಟ್' ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ, ಸಂಗೀತ ಹಾಗೂ ನಿರ್ದೇಶನದ ಜವಾಬ್ದಾರಿ ಹೊತ್ತಿರುವವರು ಇದೇ ವರಲಕ್ಷ್ಮಿಯವರ ಮತ್ತೊಬ್ಬ ಮಗ ಯಶವಂತ್ ಕುಮಾರ್. ಈಗಾಗಲೇ ಚಿತ್ರೀಕರಣ ಮುಕ್ತಾಯದ ಹಂತ ತಲುಪಿರುವ ಈ ಚಿತ್ರದ ನಾಯಕಿ ಉಕ್ರೇನಿನ ಸ್ನಿಝಾನ ಎನ್ನುವ ಚೆಡಗಿ. ಉಳಿದಂತೆ 'ಯುವ ಸಾಮ್ರಾಟ್'ನಲ್ಲಿ ಶ್ರೀನಿವಾಸಮೂರ್ತಿ, ಎಂ.ಎಸ್.ಉಮೇಶ್, ಕೋಟೆ ಪ್ರಭಾಕರ್, ಮೋಹನ್ ಜುನೇಜ, ನೆ.ಲ.ನರೇಂದ್ರಬಾಬು ಹಾಗೂ ನಾಗೇಂದ್ರ ಅರಸ್ ಅವರು ನಟಿಸಿದ್ದಾರೆ. ಅರುಣ್ ಸುರೇಶ್ ಅವರು ಈ ಚಿತ್ರದ ಮೂಲಕ ಮೊದಲಬಾರಿಗೆ ಛಾಯಾಗ್ರಾಹಕರಾದರೆ, ಸಂಕಲನದ ಹೊಣೆ ಶಿವರಾಜ್ ಮೆಹು ಅವರದು.



ಸ್ನಿಝಾನ



ನಮಸ್ತೆ
ಇಂಡಿಯ
ಮೈತ್ರೇಯಾ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com